UNIVERSAL
LIBRARY
OU_198689
UNIVERSAL
LIBRARY

|| श्रीः ||

ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ,

ಉಡುಪಿ.

# ಶ್ರೀವಾದಿರಾಜಗುರುವರಚರಿತ್ರೆ.

ಲೇಖಕ:—ಬಿ. ಶ್ರೀನಿವಾಸಭಟ್ಟ,

ಸಾಹಿತ್ಯಶಿರೋಮಣಿ.

ಪ್ರಥಮಾವೃತ್ತಿ

ಶ್ರೀಕೃಷ್ಣಮುದ್ರಣಾಲಯ,

ಉಡುಪಿ.

1924.

ಬೆಲೆ: ೦—೬—೦.

# ಪ್ರಸ್ತಾವನೆ.

ಈ ಭಾರತಭೂಮಾತೆಯ ಸುಪುತ್ರರಾದ ಆಸ್ತಿಕ ಜನರು ಸಾಮಾನ್ಯಜನರಿಗೆ ದುರ್ಲಭಗಳಾದ ಶೌರ್ಯಾದಿಗುಣಗಳೊಳಗೆ ಯಾವದೊಂದು ಗುಣವನ್ನುಮಾತ್ರವಾಗಲಿ ಒಬ್ಬಪುರುಷಶ್ರೇಷ್ಠನಲ್ಲಿ ಕಂಡೊಡನೆ ಆತನೊಬ್ಬ ಅವತಾರಪುರುಷನಿದ್ದಾನೆಂದು ನಂಬಿ ಆತನ ಮಾತಿನಂತೆ ನಡೆಯುವುದು ಅವರ ನೈಜಗುಣವು. ಅಂತಹ ಪುರಾತನ ಅವತಾರ ಪುರುಷರ ಮಹತ್ವ ಬೋಧಕಗಳಾದ ಅದ್ಭುತ ಗುಣಗಳನ್ನು ತಿಳಿಯಲು ಚರಿತ್ರೆಯೊಂದೇ ಮುಖ್ಯಸಾಧನವೆಂದು ಪ್ರಸಿದ್ಧವಾದವಿಷಯವು.

ಅವರಂತೆ 300 ವರ್ಷಗಳ ಪೂರ್ವದಲ್ಲಿ ಈ ತೌಲವಮಂಡಲಕ್ಕೆ ಏಕೆ ಪೂರ್ಣ ಭರತಖಂಡಕ್ಕೇ ಅಲಂಕಾರರೆನಿಸಿದ **ಶ್ರೀವಾದಿರಾಜತೀರ್ಥ** ಯತಿರಾಜರು ಅಮಾನುಷದೇಹಬಲ, ಬುದ್ಧಿಬಲ, ಯುಕ್ತಿಬಲ, ಯೋಗಬಲ, ಮಂತ್ರಬಲ, ಸರ್ವವಿದ್ಯಾಬಲಗಳಿಂದ ಲೋಕಹಿತಕರಾನೇಕಾದ್ಭುತಮಹಿಮೆಗಳನ್ನು ಪ್ರತ್ಯಕ್ಷವಾಗಿ ಪ್ರಕಟಿಸಿರುವಾಗ ಭಕ್ತರಿಗೆ ಕಾಮಧೇನುವಾದಾ ಮಹಾತ್ಮರ ಮಹತ್ವಬೋಧಕವಾದ ಆಶ್ಚರ್ಯ ಚರಿತ್ರೆಯನ್ನು ಸರ್ವಜನರೂ ತಿಳಿದುಕೊಂಡು ಅವರ ಅನುಗ್ರಹವನ್ನು ಸಂಪಾದಿಸಿಕೊಳ್ಳುವುದು ಆವಶ್ಯಕವು.

ಆದರೆ ಶ್ರೀ ಗುರುರಾಜರೆಂಬ ಆಶ್ರಿತಕಲ್ಪಮಹಾವನಸ್ಪತಿಯು ಅನಂತಚರಿತ್ರೆಗಳೆಂಬ ಶಾಖಾಪ್ರಶಾಖೆಗಳು ಆಸೇತುಹಿಮಾಚಲದ ವರೆಗೆ ವ್ಯಾಪಿಸಿರುವುದರಿಂದ ಸಂಪೂರ್ಣವಾಗಿ ಅವುಗಳನ್ನು ಆಮೂಲಾಗ್ರವಾಗಿ ತಿಳಿಯುವುದು ಅಸಾಧ್ಯವೇಸರಿ. ಆದರೂ ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯಾಧಿಪತಿಗಳಾದ ಮಹಾರಾಜಶ್ರೀ ಪಾವಂಜೆಗುರುರಾಯರು ಈ ಚರಿತ್ರೆಯನ್ನು ಸಂಗ್ರಹಿಸಬೇಕೆಂದು ನನಗೆ ಕೊಟ್ಟ ಪ್ರೋತ್ಸಾಹನೆಯು ಮೊತ್ತಮೊದಲು ನನಗೆ ಈ ಕಾರ್ಯವನ್ನು ಕೈಗೊಳ್ಳುವಂತೆ ಮಾಡಿತು. ಆಗ

ನನಗೆ ಶ್ರೀವಾದಿರಾಜರ ಕಥೆಯಲ್ಲಿ ಸ್ವಲ್ಪಮಾತ್ರವೂ ಪರಿಚಯವಿರಲಿಲ್ಲ. ದಾರಿಗನಿಗೆ ಗೊಂಡಾರಣ್ಯದ ನಡುವೆ ದಿಕ್ಕುಕಾಣದೆ ದಾರಿತಪ್ಪಿದ ಅವಸ್ಥೆಯು ನನ್ನ ನೆನಪಿಗೆ ಬಂದಿತು. ಅನೇಕ ಮಹನೀಯರು ಸುರಸ ಚರಿತ್ರ ಸಂಗ್ರಹದಿಂದ ಕನ್ನಡಿಗರನ್ನು ಸೇವಿಸುತ್ತಿರುವಾಗ ಸಾಗರಸೇತುಬಂಧನದಲ್ಲಿ ಅಳಿಲಿನ ಮಳಲಸೇವೆಯಂತೆ ಅಲ್ಪಸ್ವಲ್ಪವಾದರೂ ಕನ್ನಡಿಗರನ್ನು ಸೇವಿಸಲಿಕ್ಕಿರುವ ಈ ಸುಸಂಧಿಯನ್ನು ಕಳಕೊಳ್ಳಲು ಮನಸ್ಸೊಪ್ಪಲಿಲ್ಲ.

ಕಡೆಗೆ ಶ್ರೀವಾದಿರಾಜರ ಪೀಠಾಧಿರೂಢರಾದ **ಶ್ರೀವಿಶ್ವಾಧೀಶತೀರ್ಥ** ಕರಕಮಲ ಸಂಜಾತ **ಶ್ರೀವಿಶ್ವೇಂದ್ರತೀರ್ಥಶ್ರೀ**ಪಾದಂಗಳವರನ್ನು ಮರೆಹೊಕ್ಕೆನು. ಶ್ರೀಗಳವರು ಉದಾರಹೃದಯದಿಂದ ತಾನು ಸಂಗ್ರಹಿಸಿಟ್ಟ ಚರಿತ್ರೆಯನ್ನು ಕೊಟ್ಟು, ಮುಖಶಃ ವಿಶೇಷವಿಷಯಗಳನ್ನು ಬೋಧಿಸಿ, ನಿರ್ವಿಘ್ನವಾಗಿ ಶ್ರೀವಾದಿರಾಜರ ಅನುಗ್ರಹದಿಂದ ಈಕಾರ್ಯವು ನೆರವೇರುವಂತೆ ಅನುಗ್ರಹಿಸಿದರು. ಆ ಉಪದೇಶವೇ ಮಂತ್ರೋಪದೇಶವೆಂದು ಭಾವಿಸಿ, ಅವರನುಗ್ರಹದಿಂದ ಈ ಗ್ರಂಥವನ್ನು ಬರೆದಿರುತ್ತೇನೆ. ಸ್ವಲ್ಪವೂ ಅರಿಯದ ನನಗೆ ಮುಖ್ಯಮಾರ್ಗೋಪದೇಶಕರಾದ ಶ್ರೀವಿಶ್ವೇಂದ್ರತೀರ್ಥಶ್ರೀಪಾದಂಗಳವರ ಪಾದಕಮಲಗಳಿಗೆ ನನ್ನ ಅನಂತಾನಂತ ಸಾಷ್ಟಾಂಗ ಪ್ರಣಾಮಗಳು.

ಕಥಾಸಂದರ್ಭದಲ್ಲಿ ಒದಗಿದ ಸಂಶಯವನ್ನು ದೂರೀಕರಿಸಿ ಸಾಹಾಯ್ಯಮಾಡಿದ ಶ್ರೀವೃಂದಾವನಾಚಾರ್ಯರ ಅನುಗ್ರಹಕ್ಕೆ ಪಾತ್ರರಾದ ಮ. ಶಾ. ಸ. ಉಪಾಧ್ಯಾಯರದ ವೆಂಕಟವರಾಹಾಚಾರ್ಯರಿಗೂ, ಇತರ ಸಹಾಯಕ ಮಹನೀಯರಿಗೂ ನನ್ನ ಪ್ರಣಾಮಪೂರ್ವಕ ಧನ್ಯವಾದಗಳು. ಸುರಸವಾಗಿ ಗ್ರಂಥವನ್ನು ರಚಿಸಿಕೊಡುವ ಮಹನೀಯರನೇಕರಿದ್ದರೂ ನನ್ನಿಂದಲೇ ಶ್ರೀಗುರುಸೇವಾರೂಪವಾದ ಈ ಕಾರ್ಯವನ್ನು ಮಾಡಿಸಿದ ಪಾವಂಜೆ ಗುರುರಾಯರಿಗೂ ನನ್ನ ಧನ್ಯವಾದಗಳು.

ಗ್ರಂಥವನ್ನು ಬರೆಯುವಷ್ಟು ಭಾಷಾಚಾತುರ್ಯವು ನನ್ನಲ್ಲಿಲ್ಲವಾದುದರಿಂದ ಈ ಗ್ರಂಥವು ಭಾಷಾಶೈಲಿಯಿಂದಾಗಲೀ, ವರ್ಣನಾರೀತಿ

ಯಿಂದಾಗಲೀ ವಾಚಕರ ಮನಸ್ಸನ್ನು ಒಲಿಸಲಾರದುದರೂ ಶ್ರೀವಾದಿರಾಜ ಮಹಾಮುನಿಗಳ ಪವಿತ್ರ ಚರಿತ್ರೆಯೆಂದು ದೋಷಗಳನ್ನೆಣಿಸದೆ ಸಹೃದಯರು ಉದಾರ ಹೃದಯದಿಂದಲೋ ಗುರುಚರಿತ್ರೆಯ ಗೌರವದಿಂದಲೋ ಈ ಗ್ರಂಥವನ್ನಾದರಿಸದಿರರೆಂದು ದೃಢವಾದ ನಂಬುಗೆಯಿಂದ ಈ ಚರಿತ್ರೆಯನ್ನು ಬರೆದಿರುತ್ತೇನೆ. ಅಪಾರವಾದ ಈ ಚರಿತ್ರೆಯನ್ನು ಕೂಡಲೇ ಸಂಪೂರ್ಣವಾಗಿ ಸಂಗ್ರಹಿಸುವುದು ಅಸಾಧ್ಯವಾದುದರಿಂದಲೂ, ಗ್ರಂಥವಿಸ್ತಾರಭಯದಿಂದಲೂ ಕೆಲವು ಕಥೆಗಳನ್ನು ಮಾತ್ರವೇ ಸಂಗ್ರಹಿಸಿರುತ್ತೇನೆ. ರತ್ನಸಂಗ್ರಹವೆಂಬ ಸಂಸ್ಕೃತ ಗ್ರಂಥದಿಂದಲೂ, ಇತರ ಮಹನೀಯರ ಸಾಹಾಯ್ಯದಿಂದಲೂ ಶ್ರೀಗುರುರಾಜರ ಕೃಪಾಬಲದಿಂದ ಸಂಪೂರ್ಣವಾದ ಈ ಗ್ರಂಥಪುಷ್ಪಮಾಲೆಯನ್ನು ಶ್ರೀವಾದಿರಾಜಗುರುವರಾಂತರ್ಗತ ಶ್ರೀ ಹಯಗ್ರೀವನ ಪಾದದಲ್ಲಿ ಸಮರ್ಪಿಸಿ, **ಮ. ರಾ. ರಾ. ಪಾವಂಜೆ ಗುರುರಾಯರಿಗೆ** ಕೊಟ್ಟಿರುತ್ತೇನೆ.

ರಕ್ತಾಕ್ಷಿ,
ಶ್ರಾವಣ ಶು. ೫. 

ಇತಿ ಸಜ್ಜನವಿಧೇಯ,
**ಗ್ರಂಥಕರ್ತಾ.**

## ವಾಚಕರಿಗೆ ವಿನಂತಿ.

ಈ ಗ್ರಂಥವು ನಮ್ಮ ಶ್ರೀಕೃಷ್ಣಮುದ್ರಣಾಲಯದಲ್ಲಿ ಪರಿಶೋಧಕರಾದ ಉಡುಪಿ ರಾಷ್ಟ್ರೀಯಶಾಲಾ ಸಂಸ್ಕೃತ ಪಂಡಿತ ಮ. ಶಾ. ಸ. ಯು. ವಾಸುದೇವಾಚಾರ್ಯರಿಂದಲೂ, ಗ್ರಂಥಕರ್ತರಿಂದಲೂ, ಪರಿಶೋಧಿಸಲ್ಪಟ್ಟು, ಮುದ್ರಿಸಿ, ನಮ್ಮ ಉಡುಪಿ, ಶ್ರೀ ಮನ್ಮಧ್ವಸಿದ್ಧಾಂತ ಗ್ರಂಥಾಲಯದಿಂದ ಪ್ರಕಟಿಸಲ್ಪಟ್ಟಿದೆ. ಶ್ರೀಗುರುರಾಜರ ಚರಿತ್ರೆಯು ಸರ್ವಜನರಿಗೂ ತಿಳಿಯಬೇಕೆಂಬ ಕೋರಿಕೆಯಿಂದ ಸ್ವಲ್ಪ ಬೆಲೆಯನ್ನೇ ಇಟ್ಟಿರುತ್ತೇನೆ. ವಾಚಕರು ಈ ಗ್ರಂಥಕ್ಕೆ ತಕ್ಕಷ್ಟು ಪ್ರೋತ್ಸಾಹನೆ ಕೊಟ್ಟರೆ ಇದರ ಇನ್ನೊಂದು ಭಾಗವನ್ನು ಸಂಗ್ರಹಿಸಿ ವಾಚಕರ ಅವಗಾಹನೆಗೆ ತಪ್ಪಲುಪಕ್ರಮಿಸಬೇಕೆಂದು ಯೋಚಿಸಿರುತ್ತೇನೆ.

ಉಡುಪಿ,
7 – 8 – 1924

ಇತಿ ಪ್ರಕಾಶಕ.

*

# ಶ್ರೀ ಗುರುರಾಜಪಂಚಶ್ಲೋಕೀ.

ಶ್ರೀಶ್ರೀಮದ್ವಾದಿರಾಜಾಮೃತಜಲಧಿರಯಂ ಹೃದ್ಗವಾಜೀಂದ್ರವಕ್ತ್ರೋ
ಭಾಸ್ವತ್ತೀರ್ಥಪ್ರಬಂಧಪ್ರಕಟಿತಮಹಿಮಾ ಸದ್ಗುಣಾಭಿಖ್ಯರತ್ನೈಃ ।
ಶ್ರೀಮಾನ್ ಶುದ್ಧಃ ಸುಧಾರ್ಥಪ್ರಕಟನವಿಬುಧವ್ರಾತತೋಷಪ್ರದಾಯೀ
ಸಂತಾಪಾನಾಂ ವಿಹಂತಾ ದ್ವಿಜಗಣಸುಖದಃ ಸೇವಕೇಷ್ಟಂ ಪ್ರದದ್ಯಾತ್
॥ ೧ ॥

ವ್ರಜತ ಕಿಮಿತಿ ಖೇದಂ ದರ್ಶಯಂತೋಽರ್ಥಿಮುದ್ರಾಂ
ಕೃಪಣಧನಿಜನಾನಾಂ ಧಿಗ್ವಚೋದಂಡಪಾತೈಃ ।
ನನು ಲಸತಿ ಜಗತ್ಯಾಂ ವಾದಿರಾಡ್ದೇವಶಾಖೀ
ಭಜತ ತಮಿತಿ ಭಕ್ತೈರೀಡಿತಂ ತಂ ನಮಾಮಿ ॥ ೨ ॥
ಹರತು ಹೃದಯತಾಪಂ ವಾದಿರಾಜಃ ಕಲಾವಾನ್
ವಿಮಲತರಕಲಾಭಿರ್ಯಃ ಸತಾಂ ಮೋದದಾತಾ ।
ದ್ವಿಜಸಮುದಯರಾಜೋ ರಾಜಮೌಲೀಡ್ಯಮೂರ್ಧ್ನಾ
ಸತತಮತುಲತೋಷಾಲ್ಲಾಲ್ಯಮಾನೋಽಭಿರಾಮಃ ॥ ೩ ॥
ಮಂದಾಕ್ರಾಂತಾಪಸಿರಿಯಮತೋ ಪೀಡ್ಯತೇ ಸರ್ವತೋಽಪಿ
ಧ್ವಾಂತಂ ಗಾಢಂ ಪ್ರಸರತಿ ಸತಾಂ ಮಾರ್ಗಭಾಸಂ ವಿಲುಂಪತ್ ।
ಪೀಡಾಮೇನಾಂ ಭುವಿ ಪರಿಹರನ್ ಸನ್ಮೃಜಾಭಾರ್ತಮೂರ್ತಿಃ
ಪಾಯಾದ್ಧ್ವಂಸೋ ಹರಿಪದರತಃ ಕಾಂತರಕ್ತಾಂಶುಕಾಭಃ ॥ ೪ ॥
ಭಾನುರ್ಹಂತ ಸುತೇಜಸಾ ಲಸತಿ ಕಿಂ ನ ಸ್ಯಾದ್ಯತಸ್ತಾಪಕೃ-
ಚ್ಚಂದ್ರೋಽಯಂ ನನು ನೇತ್ರಮೋದಕರಣಾನ್ನ ಸ್ಯಾತ್ ಕಲಂಕೀ ನ
ಯತ್ ।

ಇತ್ಯುತ್ಪ್ರೇಕ್ಷಣಪಂಡಿತೈರ್ಬಹುವಿಧಂ ಸಂತರ್ಕಿತೋಽಸೌ ದಿಶಾಂ
ಯಾತ್ರಾಯಾಂ ಗುರುವಾದಿರಾಜಮುನಿರಾಟ್ ಧ್ವಾಂತಂ ಮಮಾಂತ-
ರ್ಹರೇತ್ ॥ ೫ ॥

ಇತಿ ಶ್ರೀವಾದಿರಾಜಾರ್ಯಪಂಚಶ್ಲೋಕೀಸ್ತುತಿಃ ಶುಭಾ ।
ರಚಿತಾ ಶ್ರೀನಿವಾಸೇನ ಗುರುಕಾರುಣ್ಯಸಿದ್ಧಯೇ ॥

॥ ಶ್ರೀಃ ॥

॥ ಶ್ರೀಹಯಗ್ರೀವಾಯ ನಮಃ ॥

॥ ಶ್ರೀಮದ್ವಾದಿರಾಜಗುರುಭ್ಯೋ ನಮಃ ॥

# ಶ್ರೀವಾದಿರಾಜ ಗುರುವರ ಚರಿತ್ರೆ.

## ೧ನೇ ಅಧ್ಯಾಯ.

ಶ್ರೀ **ಜಗತ್ಕರ್ತನಿಂದ** ನಿರ್ಮಿತವಾದ ಪ್ರಪಂಚದಲ್ಲಿ ದುಷ್ಕರಾವಳಿ ಹೆಚ್ಚಿದಾಗ ಆ ಬಾಧೆಯನ್ನು ಪರಿಹರಿಸಿ, ಸಜ್ಜನರನ್ನುದ್ಧರಿಸುವುದಕ್ಕಾಗಿ ಮಹಾಪುರುಷರು ಅವತರಿಸುತ್ತಾರೆಂಬುದು ಪ್ರಸಿದ್ಧ ವಿಷಯವಾಗಿದೆ.

ಅದರಂತೆ ಈ ಕಲಿಯುಗದಲ್ಲಿ ನಾಸ್ತಿಕವಾದವು ಹೆಚ್ಚುತ್ತ ಸಜ್ಜನರಿಗೆ ಮೋಕ್ಷೋಪಾಯವಾದ ವೇದಶಾಸ್ತ್ರಪುರಾಣಾದಿಗಳು ದಿನೇ ದಿನೇ ಕೆಡುತ್ತಿರಲು, ಶ್ರೀನಾರಾಯಣನ ಮಗನಾದ ಶ್ರೀಮುಖ್ಯಪ್ರಾಣನು ಕಲಿವರ್ಷ ೪೩೩೯ ಶಾಲಿ. ೧೧೬೦. ಕ್ರಿ. ಶ. ೧೨೩೮ನೇ ವಿಲಂಬಿ ಸಂ|ದ ಆಶ್ವಯುಜ ಶು. ದಶಮಿ ಬುಧವಾರ ಮಧ್ಯಾಹ್ನಕಾಲದಲ್ಲಿ ತೌಲವ ಕುಲಭೂಷಣರಾದ ಮಧ್ಯಗೇಹ ಭಟ್ಟರಿಗೆ ಮಗನಾಗಿ ಅವತರಿಸಿ, ಶ್ರೀಸನತ್ಕುಮಾರರ ಪರಂಪರೆಯವರಾದ ಅಚ್ಯುತಪ್ರೇಕ್ಷರೆಂಬ ಯತಿವರರಿಂದ ಸನ್ಯಾಸ ಪಡೆದು ಪೂರ್ಣಪ್ರಜ್ಞ ಆನಂದತೀರ್ಥ **ಮಧ್ವ** ಇತ್ಯಾದಿ ಸಾರ್ಥಕ

ನಾಮಗಳಿಂದ ಪ್ರಸಿದ್ಧರಾಗಿ ಶ್ರೀವೇದವ್ಯಾಸದೇವರ ಆಜ್ಞೆಯಂತೆ "ಶ್ರೀ ನಾರಾಯಣನೇ ಸರ್ವೋತ್ತಮನು, ವೇದಗಳು ನಿತ್ಯಗಳು, ಬ್ರಹ್ಮರುದ್ರಾದಿ ದೇವತೆಗಳು ಶ್ರೀಹರಿಯ ಅಧೀನರು, ಜಗತ್ತು ಸತ್ಯವು, ಪರಮಾತ್ಮನಿಗೂ ಜೀವರಿಗೂ ಜಡಗಳಿಗೂ ಪರಸ್ಪರಭೇದವು ಸತ್ಯವಾದುದು." ಎಂಬ ದ್ವೈತ ಮತವನ್ನು ಸ್ಥಾಪಿಸಿದರು. ದ್ವಾರಕಾಪುರದಿಂದ ಶ್ರೀರುಕ್ಮಿಣೀಕರಾರ್ಚಿತ ಕೃಷ್ಣನು ಬರಲು ಶ್ರೀರೂಪ್ಯಪೀಠದಲ್ಲಿ ಪ್ರತಿಷ್ಠೆಮಾಡಿದರು. ಮತ್ತೀ ದ್ವಾರಕಕೃಷ್ಣ ಶ್ರೀಕೃಷ್ಣಾರ್ಚನೆಗಾಗಿಯೂ ದೇವಾಂಶ ಸಂಭೂತರೂ, ವಿರಕ್ತರೂ, ವಿದ್ವಾಂಸರೂ, ತನ್ನ ಶಿಷ್ಯರೂ ಆಗಿದ್ದ ಎಂಟು ಮಂದಿಗಳಿಗೆ ಬಾಲಸನ್ಯಾಸಾಶ್ರಮ ಕೊಟ್ಟು, ೭೯ ವರ್ಷ ಭೂಮಿಯಲ್ಲಿ ವಾಸಮಾಡಿ, ಒಂದಂಶದಲ್ಲಿ ಉಡುಪಿ ಕ್ಷೇತ್ರದಲ್ಲಿದ್ದು ಶ್ರೀಬದರೀಕ್ಷೇತ್ರಕ್ಕೆ ಪ್ರಯಾಣ ಮಾಡಿ ಈಗಲೂ ಶ್ರೀವ್ಯಾಸದೇವರನ್ನುಪಾಸನೆ ಮಾಡುತ್ತಿದ್ದಾರೆ.

ಶ್ರೀಮಧ್ವಾಚಾರ್ಯರ ಸಾಕ್ಷಾಚ್ಛಿಷ್ಯರಾದ ಅಷ್ಟಯತಿಗಳ ಮಧ್ಯದಲ್ಲಿ **ಶ್ರೀವಿಷ್ಣುತೀರ್ಥ**ರೆಂಬವರು ಆಚಾರ್ಯರ ಸೋದರರು. ವಾಯುಪದಯೋಗ್ಯರಾದ ಋಜುದೇವತೆಗಳ ಗಣಕ್ಕೆ ಸೇರಿದವರೆಂದು ಪ್ರಸಿದ್ಧಿಯಿದೆ. ಇವರು ಅತಿ ವಿರಕ್ತರೂ, ಸದ್ಗುಣಭೂಷಣರೂ, ಮಹಾಮಹಿಮರೂ, ಮಹಾ ತಪಸ್ವಿಗಳೂ ಎಂಬುದಕ್ಕೆ ಶ್ರೀಮಧ್ವವಿಜಯವೂ ಹೃಷೀಕೇಶ ಪದ್ಧತಿಯೂ ಸಾಕಷ್ಟು ಪ್ರಮಾಣವಾಗಿವೆ. ಆ ಗ್ರಂಥದಲ್ಲ ಈ ಮಹನೀಯರು ಕಾಲಾಂತರದಲ್ಲಿ ಶ್ರೀಮಧ್ವಮತವು ನಾಶವಾಗುತ್ತ ಬಂದಾಗ ಶ್ರೀಮಧ್ವಾಚಾರ್ಯರು ಕಣ್ತಿಲ (ಸೇತುತಿಲ) ಕ್ಷೇತ್ರದಲ್ಲಿ ಸ್ಥಾಪಿಸಿದ ಗ್ರಂಥಗಳನ್ನು ತೆಗೆದು, ತಿರುಗಿ ಮಧ್ವಮತವನ್ನುದ್ಧರಿಸುವರೆಂದು ತೋರುತ್ತದೆ. ಶ್ರೀವಿಷ್ಣುತೀರ್ಥರ ಶಿಷ್ಯರು **ಶ್ರೀವ್ಯಾಸತೀರ್ಥ**ರು ಮತ್ತು **ಅನಿರುದ್ಧತೀರ್ಥ**ರು, ಅನಿರುದ್ಧತೀರ್ಥರ ಪರಂಪರೆಯು ಸುಬ್ರಹ್ಮಣ್ಯಮಠಕ್ಕೆ ಸೇರಿದುದು. ಶ್ರೀವ್ಯಾಸತೀರ್ಥರ ಪರಂಪರೆಯವರು ಶ್ರೀಉಡುಪಿ ಸೋದೇ ಮಠದವರು.

ಶ್ರೀಮದ್ವಿಷ್ಣುತೀರ್ಥರ ಪರಂಪರೆಯವರಲ್ಲಿ ಗಣನೀಯರು **ಶ್ರೀವಾಗೀಶತೀರ್ಥ**ಯತಿವರರು. ಈ ಮಹಾತ್ಮರು ತಪಸ್ವಿಶ್ರೇಷ್ಠರೂ, ಯೋಗ

ಮಹರ್ಷಿಶ್ರೇಷ್ಠರೂ, ತ್ರಿಕಾಲಜ್ಞರೂ, ಮಹಾಪಂಡಿತರೂ, ನಿಗ್ರಹಾನು ಗ್ರಹ ಸಮರ್ಥರೂ ಆಗಿದ್ದರು.

ಆ ಕಾಲದಲ್ಲಿ ಕುಂಭಾಸಿಕ್ಷೇತ್ರದ ಪೂರ್ವದಿಕ್ಕಿನಲ್ಲಿರುವ ಹೂವಿನ ಕೆರೆ (ಕುಸುಮಕಾಸಾರ) ವೆಂಬ ಗ್ರಾಮದಲ್ಲಿ **ರಾಮಾಚಾರ್ಯ**ರೆಂಬ ಒಬ್ಬ ಬ್ರಾಹ್ಮಣಶ್ರೇಷ್ಠರಿದ್ದರು. ಇವರಿಗೆ ದೇವಭಟ್ಟರೆಂದು ಕೆಲವರು ಹೇಳು ತ್ತಾರೆ. ಈ ಕುಂಭಾಸಿಕ್ಷೇತ್ರವು ಶ್ರೀಭಾರ್ಗವಭೂಮಿಯ ಸಪ್ತಕ್ಷೇತ್ರಗ ಳಲ್ಲಿ ಪ್ರಸಿದ್ಧವಾದುದೊಂದು ಕ್ಷೇತ್ರವು. ಇದಕ್ಕೆ ಗೌತಮಕ್ಷೇತ್ರವೆಂದೂ ಪ್ರಸಿದ್ಧಿಯಿದೆ. ಈ ಸ್ಥಳವು ಮಧುವನವೆಂದು ಪ್ರಖ್ಯಾತವಾದುದು. ಪಾಂಡ ವರು ಈ ವನದಲ್ಲಿ ವಾಸಿಸುತ್ತಿದ್ದಾಗ ಭೀಮಸೇನನು ಕುಂಭಾಸುರನನ್ನು ಖ[illegible]ಕೊಂದಕಾರಣ ಈ ಕ್ಷೇತ್ರಕ್ಕೆ **ಕುಂಭಾಸಿ**ಯೆಂಬ ಹೆಸರು ಬಂದಿತು. ಇಲ್ಲಿ ಉಭಯಪಾರ್ಶ್ವದಲ್ಲಿ ಸೂರ್ಯಪುಷ್ಕರಿಣೀ ಚಂದ್ರಪುಷ್ಕ ರಿಣೀ ತೀರ್ಥಗಳೂ, ಅದರ ನಡುವೆ ಗೌತಮ ಮಹರ್ಷಿಪೂಜಿತಪರಮ ದೇವರ ಗುಹೆಯೂ, ಅದರ ಸಮೀಪದಲ್ಲಿ ಸ್ವಯಂವ್ಯಕ್ತ ಮಹಾಗಣಪತಿ ಯಿಂದ ಅಲಂಕೃತವಾದ ಆನೆಗುಡ್ಡೆ (ಗಜಗಿರಿ) ಎಂಬ ಎತ್ತರವಾದ ಬೆಟ್ಟವೂ ನೋಟಕರ ನೋಟಕ್ಕೆ ಬಹು ಅಂದವಾಗಿದೆ. ಈ ಕ್ಷೇತ್ರಕ್ಕೆ ಸೇರಿದ ಹೂವಿನಕೆರೆಗ್ರಾಮದ ರಾಮಾಚಾರ್ಯರು ಸಾಮಶಾಖೆಯ ತೌಲವ ಬ್ರಾಹ್ಮಣಕುಲಕ್ಕೆ ಅಲಂಕಾರವಾಗಿದ್ದರು. ಇವರ ಧರ್ಮಪ ತ್ನಿಯು **ಸರಸ್ವತಿ**ಯೆಂಬಾಕೆಯು, ಪತಿವ್ರತಾಶಿರೋಮಣಿಯು, ಸುಶೀ ಲೆಯು, ಸೌಂದರ್ಯಾದಿ ಗುಣಗಳ ಖನಿಯು. ಈ ದಂಪತಿಗಳು ದಾರಿದ್ರ್ಯ ದಲ್ಲಿಯೂ ದೇವರು ಕೊಟ್ಟದ್ದರಲ್ಲಿ ತೃಪ್ತರಾಗಿ ಅನಿಷಿದ್ಧಭೋಗಗಳಿಂದ ಸಂತೋಷಭರಿತರಾಗಿ ಸತ್ಕಾರ್ಯಗಳಿಂದ ಕಾಲಯಾಪನ ಮಾಡುತ್ತಿ ದ್ದರು.

ಬಹುಕಾಲವಾದರೂ ಈ ದಂಪತಿಗಳಿಗೆ ಸಂತಾನವು ತಲೆದೋರಲಿಲ್ಲ. ರಾಮಾಚಾರ್ಯರು ಶಾಸ್ತ್ರಜ್ಞರು ವಿವೇಕಿಗಳು ಆದರಲ್ಲಿಯೂ ಪುರುಷರೂ ಇದ್ದುದರಿಂದ ಸಂತಾನವಾಗದಿರುವ ಖೇದವನ್ನು ಹೊರಗೆಡಹದೆ ಮನಸ್ಸಿ ನಲ್ಲೇ ಕೊರಗುತ್ತಿದ್ದರು. ಸರಸ್ವತಿದೇವಿಯು ಮೃದುಸ್ವಭಾವದ ಹೆಂಗು

ಸಾದುದರಿಂದ ಆಗಾಗ ಏಕಾಂತದಲ್ಲಿ ಮನೋವ್ಯಥೆಯನ್ನು ಗಂಡನ ಪಾದ ದಲ್ಲಿ ಶಿರವನ್ನರ್ಪಿಸಿ ಅರಿಕೆಮಾಡುತ್ತ ಆತನ ಕಾಲೋಚಿತ ಧರ್ಮೋಪದೇಶ ವನ್ನಾದರದಿಂದ ಕೇಳಿ ಅದರಂತಾಚರಿಸುತ್ತ ದೇವರನ್ನು ಬೇಡುತ್ತಿದ್ದಳು. ಚಿಕ್ಕಚಿಕ್ಕ ಹರಿಕೆಯನ್ನೂ ಹೇಳಿಕೊಳ್ಳುತ್ತಿದ್ದಳು. ಕಡೆಗೆ ಸಾಧ್ಯವೋ ಅಸಾಧ್ಯವೋ ಅದೊಂದನ್ನು ವಿಚಾರಿಸದೆ, ತನಗೆ ಪುತ್ರಜನನವಾದರೆ ದೇವ ರಿಗೆ ಲಕ್ಷಾಭರಣಗಳನ್ನು ಸಮರ್ಪಿಸುವೆನೆಂದು ಹರಿಕೆ ಹೇಳಿದಳು. ಈ ಸಮಯದಲ್ಲಿ ಶ್ರೀವಾಗೀಶತೀರ್ಥರು ಕುಂಭಾಸಿಕ್ಷೇತ್ರದ ತನ್ನ ಮಠದಲ್ಲಿ ವಾಸಮಾಡುತ್ತಿದ್ದರು. ಒಂದು ದಿನ ರಾತ್ರಿ ಶ್ರೀಭೂವರಾಹದೇವರು ಸ್ವಪ್ನ ದಲ್ಲಿ "ನಾಳೆ ಬೆಳಿಗ್ಗೆ ಸಂತಾನಾಭಿಲಾಷೆಯಿಂದ ನಿನ್ನಬಳಿಗೆ ಬರುವ ಬ್ರಾಹ್ಮ ಣದಂಪತಿಗಳಿಗೆ ಅನುಗ್ರಹಿಸಿ ಫಲಮಂತ್ರಾಕ್ಷತೆ ಕೊಡು. ಅದರಿಂದ ಸತ್ಪು ತ್ರನು ಜನಿಸುವನು. ಆ ಶಿಶುವನ್ನು ಮಾತ್ರ ನಿನಗೆ ಕೊಡಬೇಕಾಗಿ ವಾಗ್ದಾನ ಪಡೆಯುವವನಾಗು" ಎಂದು ಅಪ್ಪಣೆ ಕೊಟ್ಟನು. ಅದೇ ರಾತ್ರಿ ರಾಮಾ ಚಾರ್ಯರಿಗೂ "ಶ್ರೀವಾಗೀಶತೀರ್ಥರಿಂದ ಫಲಮಂತ್ರಾಕ್ಷತೆ ಪಡೆದರೆ ಸಂ ತತಿಯಾಗುವುದು" ಎಂದು ಸ್ವಪ್ನವಾದ ಕಾರಣ ಆ ದಂಪತಿಗಳು ಆನಂದ ದಿಂದ ಪ್ರದಕ್ಷಿಣೆಯನ್ನಿಟ್ಟು ವಂದಿಸಿ ತಮ್ಮ ಇಷ್ಟವನ್ನು ಬೇಡಿಕೊಂಡರು. ಸ್ವಾಮಿಗಳು ಫಲಮಂತ್ರಾಕ್ಷತೆ ಕೊಟ್ಟು ಅನುಗ್ರಹಿಸಿದರು. ಆ ಮೇಲೆ ಜನಿಸುವ ಬಾಲಕನನ್ನು ತಮಗೆ ಕೊಡಬೇಕೆಂದು ಆಜ್ಞಾಪಿಸಲು, ಆ ದಂಪತಿ ಗಳು ಕಳಗುಂದಿ ದಿಕ್ಕುಕಾಣದೆ ತಮಗೆ ಜನಿಸುವ ಶಿಶುವು ಅನ್ಯರ ಪಾಲಾದರೆ ಈ ಸಂತಾನಲಾಭವು ಕನ್ನಡಿಯೊಳಗಿನ ಗಂಟಿನಂತಾಯಿತಲ್ಲವೇ! ಕೈಗೆ ಬಂದ ತುತ್ತು ಬಾಯಿಗೆ ಬಾರದಂತಾಯಿತಲ್ಲವೇ! ಹಾ ವಿಧಿಯೇ! ಏನು ಮಾ ಡೋಣ. ಗುರುಗಳ ಅಪ್ಪಣೆಯನ್ನು ಮೀರಬಹುದೇ? ಬಹು ಕಷ್ಟದಿಂದ ಹುಟ್ಟಬಹುದಾದ ಪುತ್ರರತ್ನವನ್ನು ಕೊಟ್ಟು ಬದುಕುವ ಬಗೆ ಹೇಗೆ? ಎಂದು ಬಹು ವಿಧವಾಗಿ ಚಿಂತಿಸಿ ಮೈಮರೆತವರಂತಾದರು. ಆಗ ಈ ದಂಪತಿ ಗಳ ಅವಸ್ಥೆಯು ಶ್ರೀರಾಮನನ್ನು ಬೇಡುತ್ತಿದ್ದ ವಿಶ್ವಾಮಿತ್ರರ ಮುಂದೆ ಕಂಗೆಟ್ಟ ಕೌಸಲ್ಯಾದಶರಥರ ಅವಸ್ಥೆಯನ್ನು ಹೋಲುತ್ತಿದ್ದಿತು. ಶ್ರೀಗಳ ವರು ಇವರ ವ್ಯಥೆಯನ್ನು ತಿಳಿದು, ಕನಿಕರದಿಂದ ಸಂತೈಸಿ ಹೀಗೆಂದರು.

"ಅಪ್ಪಾ! ವ್ಯಥೆಪಡಬೇಡಿರಿ. ಈಶ ಸಂಕಲ್ಪದಂತಾಗುವುದಲ್ಲದೆ ಮನುಷ್ಯಸಂಕಲ್ಪವು ನಡೆಯತಕ್ಕುದಲ್ಲ. ದೇವರ ಸೂಚನೆಯನ್ನು ನಿಮಗೆ ಹೇಳಬೇಕಲ್ಲದೆ ನಿಮಗೆ ನಾನಾಗಿ ಕ್ಲೇಶಪಡಿಸಲು ಈ ಮಾತನ್ನಾಡಿದುದಲ್ಲ. ನಿಮಗೆ ಪುತ್ರನು ಜನಿಸಿದರೆ ಆತನು ನನ್ನ ಅಧೀನದಲ್ಲಿದ್ದರೂ ನಿಮ್ಮವನಲ್ಲದೆ ನನ್ನವನಾಗನು. ಇನ್ನೊಂದು ಅದೃಷ್ಟಪರೀಕ್ಷೆಯನ್ನು ಮಾಡೋಣ. ಹುಟ್ಟುವ ಶಿಶುವು ಮನೆಯೊಳಗೆ ಜನಿಸಿದರೆ ನಿಮಗೆ ಇರಲಿ. ಮನೆಯ ಹೊರಗೆ ಹುಟ್ಟಿದರೆ ಮಾತ್ರ ನನಗೆ ಕೊಡಬೇಕು. ಈ ವಿಷಯದಲ್ಲಿ ಕೈತಪ್ಪದಂತೆ ಜಾಗರೂಕರಾಗಿರಿ. ಇದಕ್ಕಾಗಿ ಏಕೆ ಸುಮ್ಮನೆ ದೇವತಾನುಗ್ರಹವಾದ ಆನಂದ ಸಮಯದಲ್ಲಿ ವ್ಯರ್ಥವಾಗಿ ದುಃಖಿಸುವಿರಿ?" ಎಂದು ಮಧುರ ವಚನಗಳಿಂದ ಸಮಾಧಾನಗೊಳಿಸಲು ಆ ವಚನಾಮೃತದಿಂದ ಆ ದಂಪತಿಗಳು ಸಮಾಧಾನಗೊಂಡು, ಗುರುಗಳಿಗೆರಗಿ ಮನೆಗೆ ಹೋದರು. ಆಮೇಲೆ ಗರ್ಭಚಿಹ್ನೆಯೂ ತಲೆದೋರಿತು. ಉಚಿತಕಾಲದಲ್ಲಿ ರಾಮಾಚಾರ್ಯರು ಪುಂಸವನಸೀಮಂತೋನ್ನಯನಾದಿ ಕರ್ತವ್ಯಗಳನ್ನು ಶಕ್ತ್ಯಾನುಸಾರ ನೆರವೇರಿಸಿ, ತನ್ನ ಪ್ರಿಯಪತ್ನಿಯ ಬಯಕೆಯನ್ನೂ ಪೂರ್ಣಗೊಳಿಸುತ್ತಿದ್ದರು. ಆ ಸರಸ್ವತಿಯ ಬಯಕೆಯು ಮಾತ್ರ ಸಾಮಾನ್ಯಸ್ತ್ರೀಯರಂತೆ ಸೀರೆ ಕುಪ್ಪಸ ಭೂಷಣಗಳ ಮೇಲೂ, ವಿವಿಧ ಭಕ್ಷ್ಯಗಳ ಮೇಲೂ ಇರಲಿಲ್ಲ. ತೀರ್ಥಸ್ನಾನದಲ್ಲಿಯೂ, ಪುರಾಣಕಥಾಶ್ರವಣದಲ್ಲಿಯೂ, ದೇವತಾದರ್ಶನದಲ್ಲಿಯೂ, ವಿಶೇಷವಾಗಿ ಭೂವರಾಹದರ್ಶನದಲ್ಲಿಯೂ ಅವಳಿಗೆ ಆದರವು ದಿನೇದಿನೇ ಹೆಚ್ಚುತ್ತಿದ್ದಿತು. ಮುಖಕಾಂತಿಯು ಗರ್ಭದಲ್ಲಿ ಯಾವನೋ ದೇವಾಂಶನೊಬ್ಬ ಜನಿಸಬಹುದೆಂಬ ಊಹೆಯನ್ನುಂಟುಮಾಡುತ್ತಿದ್ದಿತು. ರಾಮಾಚಾರ್ಯರು ಗರ್ಭದೀಕ್ಷೆಯನ್ನು ವಹಿಸಿ, ಗರ್ಭವು ಅಪವಿತ್ರವಾಗಬಾರದೆಂದು ಬ್ರಹ್ಮಚರ್ಯವ್ರತನಿಷ್ಠರಾಗಿ ನಿರ್ವಿಘ್ನದಿಂದ ಗರ್ಭವು ಬೆಳೆದು ಸುಖವಾಗಿ ಪ್ರಸವಿಸಲೆಂದು ನಿತ್ಯದಲ್ಲಿ ದೇವರಿಗೆ ಅಂಗಲಾಚಿ ಬೇಡುತ್ತಿದ್ದರು.

ಸರಸ್ವತಿಯಮ್ಮನಿಗೆ ಒಂಭತ್ತು ತಿಂಗಳಾಯಿತು. ಆಗ ರಾಮಾಚಾರ್ಯರು ಮಗುವನ್ನು ಅನ್ಯರಿಗೆ ಕೊಡುವ ಕಷ್ಟವು ಬರಬಾರದೆಂದು ಹಪಹ

ಹೆಂಡತಿಯನ್ನು ಹೊರಗೆ ಹೋಗದಂತೆ ಕಟ್ಟುಮಾಡಿದರು. ಹೊರಗಿನ ಕೆಲಸಗಳನ್ನೆಲ್ಲ ತಾನೇ ಮಾಡುತ್ತಿದ್ದರು. ಆಸಮಯದಲ್ಲಿ ಒಂದು ಸಾಧನದ್ವಾದಶಿಯು ಬಂದಿತು. ಬೇಗನೇ ಜಪಪೂಜಾದಿಗಳನ್ನಾಚರಿಸಿ ಪಾರಣಕ್ಕೆ ಆಚಾರ್ಯರು ಕುಳಿತರು. ಆಗ ಮನೆಯ ಉತ್ತರಭಾಗದ ಗದ್ದೆಯ ಪೈರನ್ನು ಒಂದು ಆಕಳು ತಿನ್ನುತ್ತಿದ್ದುದನ್ನು ಸರಸ್ವತಿಯಮ್ಮನು ಕಂಡು ಒಡನೆ ದನವನ್ನೋಡಿಸಿ ಬರುವೆನೆಂದು ಗದ್ದೆಯ ಕಡೆಗೆ ಹೋದಳು. ಕೂಡಲೇ ಪ್ರಸವವೇದನೆಯು ಅಂಕುರಿಸಿತು. ದೈವಸಂಕಲ್ಪದಿಂದ ಸುಪುತ್ರನ ಸುಖಜನನವಾಯಿತು. ಮುಂಚಿನ ದಿನದಲ್ಲೇ ಶ್ರೀವಾಗೀಶತೀರ್ಥರು ದಿವ್ಯ ದೃಷ್ಟಿಯಿಂದ ಇದನ್ನು ತಿಳಿದು, ಬೇಗನೆ ಬೆಳಿಗ್ಗೆ ಪಾರಣಮಾಡಿ, ಪ್ರಸವವಾದ ಸ್ಥಳದ ಸಮೀಪ ಮರದಡಿಯಲ್ಲಿ ನಿಂತು, ಸ್ತ್ರೀಯರ ಮೂಲಕವಾಗಿ ಸರಸ್ವತಿಗೂ ಶಿಶುವಿಗೂ ಕಾಲೋಚಿತೋಪಚಾರಗಳನ್ನು ನಡೆಯುವಂತೆ ಏರ್ಪಡಿಸಿ, ರಾಮಾಚಾರ್ಯರ ಬಳಿಗೆ ಬಂದು "ದೈವಸಂಕಲ್ಪವನ್ನುನೋಡಿದಿರೋ! ನೀವೆಷ್ಟು ಜಾಗ್ರತೆಮಾಡಿದರೇನಾಯಿತು. ಶಿಶುವು ಶ್ರೀಭೂವರಾಹದೇವರ ಪಾಲಿಗೆ ಬಂದಿತು" ಎನ್ನಲು ಒಂದನ್ನೂ ಅರಿಯದ ರಾಮಾಚಾರ್ಯರು ಎಲ್ಲವನ್ನು ವಿಚಾರಿಸಿ ತಿಳಿದುಕೊಂಡರು. ಶ್ರೀಗಳವರ ದಿವ್ಯಜ್ಞಾನವನ್ನೂ, ದೇವತಾಮಹಿಮೆಯನ್ನೂ ಕೊಂಡಾಡಿದರು. ಸಾತ್ವಿಕಶಿರೋಮಣಿಗಳಾದ ರಾಮಾಚಾರ್ಯರು ಪುತ್ರವಾತ್ಸಲ್ಯವೆಂಬ ಮೋಹದ ಬಲೆಗೆ ಸಿಲುಕದೆ ಸರಸ್ವತಿದೇವಿಯ ಒಪ್ಪಿಗೆಯಿಂದ ಮಗುವನ್ನು ಹರಿವಾಣದಲ್ಲಿಟ್ಟು ಶ್ರೀಗಳವರ ಚರಣಸನ್ನಿಧಾನದಲ್ಲಿ ಸಂತೋಷಪೂರ್ವಕದಿಂದ ಅರ್ಪಿಸಿಬಿಟ್ಟರು. ಸಾಂಸಾರಿಕರಾದ ಮಠೀಯಸೇವಕರೆಲ್ಲರೂ ಅತ್ತರು. ನೋಡಬಂದ ಗ್ರಾಮದ ಕುಟುಂಬಿಕ ಜನರೆಲ್ಲರೂ ಮರುಗಿದರು. ಹೀಗೆಲ್ಲರ ಮನಸ್ಸೂ ಕರಗಿ ಕಣ್ಣಿನಿಂದ ನೀರು ಧಾರೆಧಾರೆಯಾಗಿ ಸುರಿಯುತ್ತಿದ್ದರೂ ಈ ದಂಪತಿಗಳ ನೇತ್ರದಿಂದ ಒಂದುತೊಟ್ಟು ನೀರೂ ಬರಲಿಲ್ಲ. ಈ ಅವಸರದಲ್ಲಿ ಯಾವುದೋ ಒಂದು ಮಹಿಮೆಯಿಂದ ಇವರ ಮನಸ್ಸಿನಲ್ಲಿ ದಾರ್ಢ್ಯವೂ ಆನಂದವೂ ಹೊರಗುಕ್ಕುತ್ತಲಿದ್ದಿತು. ಆ ಶ್ರೀವಾಗೀಶರು ಶಿಶುವನ್ನೆತ್ತುವಾಗ ಅದು ಎರಡುಕೈಗಳನ್ನು ಜೋಡಿಸಿ ತನ್ನ ತಲೆಯ ಮೇಲಿಟ್ಟಿತು.

ಎಲ್ಲರೂ ಈ ಕೌತುಕವನ್ನು ನೋಡಿ ವಿಸ್ಮಿತರಾದರು. ಶ್ರೀಗಳವರು ಮಗುವನ್ನು ಎತ್ತಿ ತೀರ್ಥಪ್ರೋಕ್ಷಿಸಿ, ರಕ್ಷೆ ಮಾಡಿ, ಶ್ರೀಭೂವರಾಹ ಸೇವೆಗೆ ಬಂದುದರಿಂದ **ವರಾಹ**ನೆಂಬ ಹೆಸರಿಟ್ಟು ರಾಮಾಚಾರ್ಯರನ್ನು ಕರೆದು "ನೀವು ನಮಗಾಗಿ ಈ ಬಾಲಕನಿಗೆ ಉಪನಯನಾಂತ ಸಂಸ್ಕಾರಗಳನ್ನು ತತ್ತತ್ಕಾಲದಲ್ಲಿ ಮಾಡಿ ಈತನ ಅದ್ಭುತಬಾಲಲೀಲೆಗಳಿಂದ ಆನಂದಪಡುತ್ತಾ ವಾಸಮಾಡಿರಿ. ಶ್ರೀದೇವರ ಸೇವೆಗೆ ಈತನು ಸಮರ್ಥನಾದಾಗ ಕರೆದುಕೊಳ್ಳುವೆವು" ಎಂದವರಿಗೆ ಶಿಶುವನ್ನಿತ್ತು ತಮ್ಮ ಮಠಕ್ಕೆ ಬಂದರು. ಈ ಬಾಲಕನು ವಾಯುಪದವಿಗೆ ಯೋಗ್ಯರಾದ ನೂರುಮಂದಿ ಋಜುದೇವತೆಗಳ ಗಣದಲ್ಲಿ ಮುಂದಿನ ಕಲ್ಪದಲ್ಲಿ ಪ್ರಧಾನವಾಯುಪದಕ್ಕೆ ಬರತಕ್ಕ **ಲಾತವ್ಯ**ನೆಂಬ ದೇವರ ಅವತಾರವು. ಈ ಅವತಾರ ವತ್ಸರವು ಸುಮಾರು ಶಾಲಿ. ಶಕ ೧೪೦೨. ಕ್ರಿ.ಶ. 1480ನೇ ಶಾರ್ವರಿ ಸಂವತ್ಸರವಾಗಿರಬೇಕೆಂದು ತಿಳಿಯುತ್ತದೆ. ಈ ಅವತಾರ ಸ್ಥಳವು ಈಗಲೂ ಗೌರಿಗದ್ದೆಯೆಂದು ಪ್ರಸಿದ್ಧವಾಗಿದೆ. ಇದರಿಂದ ರಾಮಾಚಾರ್ಯರ ಹೆಂಡತಿಯ ಹೆಸರು **ಗೌರೀ** ಎಂದಿರಬೇಕೆಂದು ಕೆಲವರು ಹೇಳುತ್ತಾರೆ. ಜನನಸ್ಥಳದಲ್ಲಿ ಶಿಲಾಮಂಟಪವೂ, ರಾಮಾಚಾರ್ಯರ ಮನೆಯೆಂಬುದು ಈಗ ನೋಡೆಮಠವಾಗಿ ಪರಿಣಮಿಸಿ ಈಗಲೂ ಪೂರ್ವ ಕಥೆಗಳನ್ನು ಸೂಚಿಸುತ್ತಿದೆ. ಶ್ರೀವಾದಿರಾಜರ ಪುಣ್ಯದಿನದ ನೈವೇದ್ಯಕ್ಕೆ ಆ ಗದ್ದೆಯಲ್ಲಿ ಬೆಳೆದ ಅಕ್ಕಿಯು ಪ್ರತಿವರ್ಷದಲ್ಲೂ ಕಳುಹಿಸಲ್ಪಡುವ ಸಂಪ್ರದಾಯವು ಈ ವರೆಗೂ ನಡೆಯುತ್ತಿದೆ.

॥ ಶ್ರೀವರಾಹಾಯ ನಮಃ ॥

## ಎರಡನೇ ಅಧ್ಯಾಯ.

ಆ ದಂಪತಿಗಳು ಗುರುಗಳ ಪರಮಾನುಗ್ರಹವೆಂದು ಆನಂದದಿಂದ ಶಿಶುವನ್ನೆತ್ತಿಕೊಂಡು, ಮನೆಯೊಳಗೆ ಪ್ರವೇಶಿಸಿ, ಇಂದಿಗೆ ತಮ್ಮ ದರಿದ್ರ

ಕುಟೀರವು ಸ್ವರ್ಗಭವನವಾಯಿತೆಂದು ಆನಂದಾಬ್ಧಿಯಲ್ಲಿ ಮುಳುಗಿ, ಬಾಲನನ್ನಾದರದಿಂದ ಕಾಪಾಡುತ್ತಿದ್ದರು. ಶುಕ್ಲಪಕ್ಷದ ಚಂದ್ರನಂತೆ ದಿನೇ ದಿನೇ ಬೆಳೆಯುತ್ತ ಬಾಲಕನು ಮಂದಹಾಸ ಸುಂದರವಾದ ತನ್ನ ಮುದ್ದು ಮುಖದಿಂದ ತಂದೆತಾಯಿಗಳ ಬಡತನದ ಸಕಲದುಃಖಗಳನ್ನು ಪರಿಹರಿಸುತ್ತಾ ಕ್ರಮವಾಗಿ ಅಂಬೆಗಾಲನ್ನಿಡುವುದಕ್ಕಾರಂಭಿಸಿ, ತಂದೆತಾಯಿಗಳ ಬಳಿಗೆ ಬಂದು "ಅಮ್ಮಾ! ತಿನ್ನಲಿಕ್ಕೆ ಕೊಡು. ಅಪ್ಪಾ! ಆಡುವುದಕ್ಕೆ ಕೊಡು" ಎಂದು ಚಿನ್ನದಂತಿರುವ ಶುಭಚಿಹ್ನೆಗಳಿಂದಲಂಕೃತವಾದ ಮೃದುಲಹಸ್ತವನ್ನು ನೀಡಿ, ಬೇಡುತ್ತಾ ಅವರಿಗೆ ಸ್ವರ್ಗ ಸುಖಕ್ಕೂ ಮಿಗಿಲಾದ ಹರ್ಷವನ್ನುಂಟುಮಾಡುತ್ತಿದ್ದನು. ಆತನ ದುಂಡುದುಂಡಾದ ಅವಯವಗಳು, ನಿಷ್ಕಲಂಕ ಚಂದ್ರನಂತಿರುವ ಮುಗುಳುನಗೆಯ ಮೊಗವು, ಕೆದರಿದ ತುಂಬಿಯಂತೆ ಕಪ್ಪಾದ ಮುಂಗುರುಳು, ವಿಶಾಲವಾದ ಕಣ್ಣುಗಳು, ಅಗಲವಾದ ವಕ್ಷಸ್ಥಳವು, ತನ್ನವಯಸ್ಸಿಗೆ ಮಿಗಿಲಾದ ದೀರ್ಘಪುಷ್ಟವಾದ ದೇಹವು, ಅಮಾನುಷತೇಜಸ್ಸು ಇವುಗಳೆಲ್ಲ ನೋಡುವವರ ಮನಸ್ಸನ್ನೂ ಕಣ್ಣುಗಳನ್ನೂ ಸೂರೆಗೊಳ್ಳುತ್ತಿದ್ದುವು. ಐದನೇ ವರ್ಷದಲ್ಲಿ ರಾಮಾಚಾರ್ಯರು ಸುಮುಹೂರ್ತದಲ್ಲಿ ಅಕ್ಷರೋಪದೇಶ ಮಾಡಿದರು. ಬಾಲಕನು ಗುರೂಪದೇಶ ನಿಮಿತ್ತಮಾತ್ರದಿಂದ ಅತಿ ಸುಲಭವಾಗಿ ಸಮಸ್ತ ವಿಷಯಗಳನ್ನು ಕಲಿತು ಗುರುಗಳಿಗೆ ತಿಳಿಯದ ವಿಷಯಗಳನ್ನು ಸುಲಭವಾಗಿ ತಾನು ತಿಳಿಸಿ ಆಶ್ಚರ್ಯಗೊಳಿಸಿದನು. ಗರ್ಭಾಷ್ಟಮವರ್ಷವು ಪ್ರಾಪ್ತವಾದಾಗ ಈತನು ಉಪನಯನ ಸಂಸ್ಕಾರವನ್ನು ಪಡದು, ತಂದೆಯ ಬಳಿ ವೇದವನ್ನೂ ಸಂಸ್ಕೃತಗ್ರಂಥವನ್ನೂ ಓದುವದಕ್ಕಾರಂಭಿಸಿದನು. ತಂದೆಯು ಮಗನ ಪಠನಚಮತ್ಕಾರವನ್ನೂ ತತ್ವಗ್ರಹಣದ ಚಾತುರ್ಯವನ್ನೂ ಕಂಡು ಈ ಬಾಲಕನ ಬುದ್ಧಿಯು ಅತಿ ಸೂಕ್ಷ್ಮವಾದುದು. ಮನುಷ್ಯರಿಗೆ ದುರ್ಲಭವಾದುದು. ಹೊರಗಿನವರು ಈತನ ಬುದ್ಧಿಚಮತ್ಕಾರವನ್ನು ನೋಡಿದರೆ ದೃಷ್ಟಿಯಾದೀತೆಂದು ಗೋಪ್ಯವಾಗಿ ವಿದ್ಯೆಯನ್ನು ಉಪದೇಶಿಸುತ್ತಿದ್ದರು.

ಈ ಪ್ರಕಾರ ರಾಮಾಚಾರ್ಯರು ಪತ್ನಿಯೊಡಗೂಡಿ, ತಮ್ಮ ದಿವ್ಯ ಬಾಲಕನ ಬಾಲಲೀಲೆಗಳಿಂದ ಮೋಹಿತರಾಗಿ ಸ್ವರ್ಗಸುಖವನ್ನನುಭವಿಸು

ನವರಂತೆ ೮-೧೦ ವರ್ಷಗಳನ್ನೂ ಒಂದು ಕ್ಷಣದಂತೆ ಸುಖಮಯವಾಗಿ ಕಳೆದರು. ಈ ಆನಂದಪ್ರವಾಹದಲ್ಲಿ ಶ್ರೀವಾಗೀಶತೀರ್ಥರಿಗೆ ಕೊಟ್ಟ ಭಾಷೆಯೂ ಮುಳುಗಿ ಹೋಗಿದ್ದಿತು. ಒಂದು ದಿನ ತಾಯಿತಂದೆಗಳು ಕುಳಿತು "ಮುದ್ದು ಕಂದನೇ! ನಿನಗೆ ಇಷ್ಟರಾದವರು ಯಾರು? ನಾನೋ? ಅಮ್ಮನೋ?" ಎಂದು ಬೆಸಗೊಳ್ಳಲು, ಬಾಲಕನು ನಗಾಡಿ "ಅಪ್ಪಾ! ನೀವಿಬ್ಬರೂ ಇಷ್ಟರಾದವರೇ ಇರುವಿರಿ. ಆದರೆ, ಅತ್ಯಂತಇಷ್ಟನಾದವನು ಭೂವರಾಹನು" ಎಂದಾಡಿದನು. ಕೂಡಲೆ ಆ ದಂಪತಿಗಳಿಗೆ ಶ್ರೀವಾಗೀಶತೀರ್ಥರ ಆಜ್ಞೆಯು ಮನಸ್ಸಿನಲ್ಲಿ ಹೊಳೆಯಿತು. ಎದೆಯು ನಡುಗಿತು. ಮೈ ಬೆವರಿತು. ಎಂದಿಗೆ ಈ ಪಸುಳೆಯನ್ನು, ಈ ಮನೋಮೋಹನನನ್ನು, ಈ ಚಿನ್ನದ ಗೊಂಬೆಯನ್ನು, ಈ ಗುಣಸಾಗರನನ್ನು ಕರೆದುಕೊಳ್ಳಲು ಶ್ರೀಗಳವರು ಉದ್ಯೋಗಿಸುವರೋ? ಎಂದು ಕಳವಳಿಸತೊಡಗಿದರು. ಆ ದಿನವೇ ಶ್ರೀಗಳವರ ಸೇವಕರು ಬಂದು, ಬಾಲಕನನ್ನು ಕಳುಹಿಸಬೇಕೆಂದು ಶ್ರೀಗಳವರ ಅಪ್ಪಣೆಯನ್ನು ತಿಳಿಸಿದರು. ಆಗಾದಂಪತಿಗಳು ಸ್ವಲ್ಪಹೊತ್ತು ಏನು ಮಾಡಬೇಕೆಂದು ತಿಳಿಯದೆ ದುಃಖಸಾಗರದಲ್ಲಿ ಮುಳುಗಿಬಿಟ್ಟರು. ಬಾಲಕನು ತಂದೆತಾಯಿಗಳ ದುಃಖವನ್ನು ನೋಡಿ, "ಅಪ್ಪಾ! ಅಮ್ಮಾ! ಏಕೆ ಚಿಂತಿಸುವಿರಿ? ನನ್ನನ್ನೊಬ್ಬನನ್ನೇ ಕಳುಹಿಸಲು ಇಷ್ಟವಿಲ್ಲದಿದ್ದರೆ ನನ್ನೊಡನೆ ನೀವೂ ಬನ್ನಿರಿ. ನಾವೆಲ್ಲರೂ ಸೇರಿ ಗುರುಗಳ ಸನ್ನಿಧಿಯಲ್ಲಿದ್ದರೆ ಅವರಾಗದೆನ್ನುವರೋ?" ಎಂದು ಗುರುಗಳ ಸನ್ನಿಧಿಗೆ ಹೋಗಲು ಕುತೂಹಲವನ್ನು ತೋರ್ಪಡಿಸಿದನು. ಪ್ರಕೃತದಲ್ಲಿ ಹಾಗೆ ಮಾಡುವುದೇ ಯೋಗ್ಯವೆಂದು ತಿಳಿದು ರಾಮಾಚಾರ್ಯರು ಸರಸ್ವತಿಯನ್ನೂ ಬಾಲಕನನ್ನೂ ಕರೆದುಕೊಂಡು ಶ್ರೀಗಳವರ ಸನ್ನಿಧಿಗೆ ಹೋಗಿ ವಂದಿಸಿದರು. ಶ್ರೀವಾಗೀಶಮುನಿಗಳು ಬಾಲಕನನ್ನು ಕರೆದು ತೊಡೆಯ ಮೇಲೆ ಕುಳ್ಳಿರಿಸಿಕೊಂಡು, ಪುತ್ರವಾತ್ಸಲ್ಯದಿಂದ ಮೈದಡವರಿಸಿ "ಮಗುವೇ! ಬಂದಿಯಾ? ಶ್ರೀಭೂವರಾಹನು ನಿನ್ನಿಂದ ಪೂಜಿತನಾಗಲು ಕುತೂಹಲ ಪಡುತ್ತಾನೆ." ಎಂದು ಹೇಳಿ ಬಳಿಯಲ್ಲಿದ್ದ ದೇವಸಮರ್ಪಿತ ಬಾಳೆಹಣ್ಣನ್ನು ತಿನ್ನಲಿಕ್ಕೆ ಕೊಟ್ಟರು. ಆ ಮೇಲೆ ಈ ಬಾಲಕನ ಬಾಲಲೀಲೆಗಳ ಪ್ರಸ್ತಾಪವನ್ನು

ಆ ದಂಪತಿಗಳತ್ತಿತ್ತ, ಅವರ ಮುಖದಿಂದ ಒಂದೊಂದಾಗಿ ವರ್ಣಿತವಾದ ಬಾಲಲೀಲೆಗಳನ್ನು ಕೇಳುತ್ತ ಆನಂದಭರಿತರಾದರು. ಬಾಲಕನು ಆ ಸಮಯಮೊದಲ್ಗೊಂಡು ಶ್ರೀಗಳವರ ಬಳಿಯಲ್ಲಿಯೇ ಎಡೆಬಿಡದೆ ಇರುತ್ತಿದ್ದನು. ಮರುದಿನ ಆದಂಪತಿಗಳು ಭೋಜನವಾದ ಮೇಲೆ ಶ್ರೀಗಳವರ ಬಳಿಗೆ ಬಂದು ವಂದಿಸಿ "ಸ್ವಾಮಿ! ಬಹುಕಾಲ ಸಂತಾನವಿಲ್ಲದೆ ಕೊನೆಗೆ ಸನ್ನಿಧಾನದ ಅನುಗ್ರಹದಿಂದ ದೊರೆತ ಪುತ್ರರತ್ನವನ್ನು ಅಗಲಿ ಬದುಕುವುದು ಹೇಗೆ? ಮಗನಿಲ್ಲದ ಮನೆಯು ಶ್ಮಶಾನದಂತೆ ತೋರುವುದು. ನಮಗೆ ಮುಂದೇನು ಗತಿ?" ಎಂದು ವಿಲಪಿಸಿದರು. ಗುರುಗಳು "ಆಚಾರ್ಯರೇ! ನೀವು ತಿಳಿದವರಾಗಿಷ್ಟು ದುಃಖಿಸುವುದೇಕೆ? ನಿಮ್ಮ ಮಗನಾದ ಈ ಬಾಲನು ಸಾಮಾನ್ಯಪುರುಷನಲ್ಲ. ಇವನ ಮಹಿಮೆಯು ಮುಂದೆ ತಿಳಿಯುವುದು. ಇವನ ಕೈಯಿಂದ ನಮ್ಮ ಮತಕ್ಕೂ, ನಮ್ಮ ಜಾತಿಗೂ, ನಮ್ಮ ಲೋಕಕ್ಕೂ ಉದ್ಧಾರಕಾರ್ಯವಾಗತಕ್ಕುದೆಂದು ಭಗವಂತನ ಸಂಕಲ್ಪವಿದೆ. ಈತನು ನಿಮ್ಮಲ್ಲಿ ಜನಿಸಿದುದರಿಂದ ನಿಮ್ಮ ವಂಶವೆಲ್ಲವೂ ಉದ್ಧಾರವಾಗಿದೆ. ಈತನು ಶ್ರೀಮಧ್ವಾಚಾರ್ಯರಂತೆ ಲೋಕಾದ್ಭುತ ಮಹಾಮಹಿಮಶಾಲಿಯಾಗಿ ನಿಮಗೆಂದರೇನು ಇಡೀ ಪ್ರಪಂಚಕ್ಕೆ ಆಶ್ಚರ್ಯವನ್ನುಂಟುಮಾಡುವನು. ಮನೆಯಲ್ಲಿ ಮಕ್ಕಳಿಲ್ಲವೆಂದು ಬೇಸರಪಡುವುದಾದರೆ ಶ್ರೀಮಧ್ವಾಚಾರ್ಯರಿಗೆ ತಮ್ಮನುದಯಿಸಿದಂತೆ ಈ ಬಾಲಕನಿಗೆ ಸೋದರನೊಬ್ಬನು ಹುಟ್ಟಿ ನಿಮ್ಮನ್ನಾನಂದಗೊಳಿಸುವನು" ಎಂದು ಸಂತೈಸಿ ಮಂತ್ರಾಕ್ಷತೆಕೊಟ್ಟು ಕಳುಹಿಸಿದರು.

ಆ ಮೇಲೆ ಶ್ರೀವಾಗೀಶತೀರ್ಥರು ಈತನು ಸನ್ಯಾಸಕ್ಕೆ ಯೋಗ್ಯತೆಯುಳ್ಳವನೋ? ಎಂದು ಪರೀಕ್ಷಿಸತೊಡಗಿದರು. ಒಂದುದಿನ ಉತ್ತಮವಾದ ಹಣ್ಣುಗಳನ್ನು ತರಿಸಿ, ಸಮಾನವಯಸ್ಸಿನ ಬಾಲಕನೊಡನೆ ಈ ವರಾಹಾಚಾರ್ಯನನ್ನು ಜೊತೆಗೂಳಿಸಿ, ಆ ಬಾಲಕನಿಂದ 'ಮಿತ್ರನೇ! ಇಲ್ಲಿ ಹೇರಳವಾಗಿ ಉತ್ತಮವಾದ ಹಣ್ಣುಗಳಿವೆ. ಬೇರೆಯಾರೂ ಇಲ್ಲವು. ನಾವೊಬ್ಬೊಬ್ಬರು ಒಂದೊಂದನ್ನು ತೆಗೆಯೋಣ" ಎಂದು ಹೇಳಿಸಿದರು. ಆಗ ವರಾಹಾಚಾರ್ಯನು "ಮೂರ್ಖನೇ! ನಿನಗೆ ಬುದ್ಧಿಯಿಲ್ಲ. ಮನುಷ್ಯ

ಬಿಟರೂ ಕಾಣದಿದ್ದರೂ, ಜಗತ್ತಿನ ಎಲ್ಲ ಕಡೆಯಲ್ಲಿಯೂ ಇರುವ ದೇವರು ನೋಡಲಾರನೇ? ಗುರುಗಳು ದೇವರ ಸಮರ್ಪಣೆಗೆ ಕೊಡಿಟ್ಟ ಹಣ್ಣುಗಳನ್ನು ಆತನಿಗೆ ಸಮರ್ಪಿಸದೆ, ಗುರುಗಳಿಗೆ ತಿಳಿಯದಂತೆ ತಿನ್ನಲು ನಮಗೇನು ಅಧಿಕಾರ? ಈ ಹಣ್ಣೊಂದನ್ನು ತಿಂದುಬಿಟ್ಟರೆ ನಮಗೆ ಸಾವು ತಪ್ಪಿ ಬಹುಕಾಲ ಜೀವಿಸಬಹುದೇನು? ಇಂದೋ ನಾಳೆಯೋ ನಾಶವಾಗುವ ಈ ಕುತ್ಸಿತದೇಹದ ಸಲುವಾಗಿ ಇಂತಹ ನೀಚಕೆಲಸವನ್ನು ಮಾಡಲು ನನ್ನ ಮನಸ್ಸು ಎಂದಿಗೂ ಒಪ್ಪದು" ಎಂದು ಹೇಳಿ, ಆ ಹುಡುಗರನ್ನು ದಾರಿಗೆ ತಂದನು. ಇನ್ನೊಂದು ಸಲ ಈತನ ಸಂಗಡಿಗರು "ಒಂದು ಆಟವನ್ನು ನೋಡಲಿಕ್ಕೆ ನೀನು ನಮ್ಮ ಸಂಗಡ ಬರಲೇಬೇಕು" ಎಂದು ಬಹಳವಾಗಿ ನಿರ್ಬಂಧಿಸಿದರು. ಆಗ ಈ ವಿಲಕ್ಷಣವಟುವು ಅವರನ್ನು ಕುರಿತು- "ಮಿತ್ರರೇ! ನೀವು ನಿಮ್ಮ ಕುತೂಹಲವನ್ನು ತೋರ್ಪಡಿಸಿದಿರಿ. ಆದರೆ, ಆಟಕ್ಕೆಹೋಗಲು ನನ್ನ ಮನಸ್ಸು ಒಪ್ಪುವುದಿಲ್ಲ. ಏಕೆಂದರೆ, ಅದನ್ನು ನೋಡಲು ಹೋದೊಡನೆ ನನ್ನ ವಿದ್ಯಾಭ್ಯಾಸಂಗಕ್ಕೆ ವಿಘ್ನವು ಬರುವುದು. ಆಟವನ್ನು ನೋಡಿದಮೇಲಂತೂ ಅದರ ವಿಷಯವೇ ಕಣ್ಣೆದುರಿಗೆ ಕಟ್ಟಿದಂತಾಗಿ ಬೇರೊಂದು ವಿಷಯವೂ ಮನಸ್ಸಿನಲ್ಲಿ ಬೇರೂರುವುದಕ್ಕೆ ಅವಕಾಶವು ದೊರೆಯಬಾರದು. ಒಂದಾಟವನ್ನು ಕಂಡರೆ ಮತ್ತೆಲ್ಲೆಲ್ಲಿ ಅದು ನಡೆಯುವುದೆಂದು ಕೇಳುವೆವೋ, ಅಲ್ಲಲ್ಲಿಗೆ ಎಷ್ಟು ಕಷ್ಟವಿರುವುದಾದರೂ ಹೋಗಿ ನೋಡಬೇಕೆಂಬ ಲವಲವಿಕೆಯೂ ಅಂಕುರಿಸುವುದು. ಮತ್ತು ಆಟಕ್ಕೆ ಅನೇಕರೀತಿಯ ಜನರು ಬರುವರು. ಅಲ್ಲಿ ಮಡಿಮೈಲಿಗೆ, ದೊಡ್ಡವರು ಚಿಕ್ಕವರು, ಒಳ್ಳೆಯವರು ಕೆಟ್ಟವರು, ಎಂಬ ತಾರತಮ್ಯವೇ ಇರುವುದಿಲ್ಲ. ನಿಷಿದ್ಧಗಳಾದ ವಸ್ತುಗಳನ್ನು ತಿನ್ನುವ ಪ್ರಸಂಗವೂ ಒದಗಬಹುದು. ಇಷ್ಟೇ ಅಲ್ಲದೆ, ಆಟದಲ್ಲಿ ಅತ್ಯಾಸೆಯುಂಟಾದರೆ ಗುರುಜನರ ಮಾತನ್ನು ಮೀರಿ, ಅಥವಾ ಅವರನ್ನು ವಂಚಿಸಿ ನಡೆಯುವ ಪ್ರಸಂಗವೂ ತಲೆದೋರುವುದು. ಆದುದರಿಂದ ಮೊತ್ತಮೊದಲು ಇಂತಹ ದುರ್ವ್ಯಾಸಂಗಕ್ಕೆ ಮನಸ್ಸನ್ನಿಡದಿರುವುದೇ ಉತ್ತಮಕಲ್ಪ. ನಾನಂತೂ ಶ್ರೀಗುರುಗಳ ಅಪ್ಪಣೆಯಿಲ್ಲದೆ ನಿಮ್ಮೊಡನೆ ಬರಲಾರೆನು" ಎಂದು ಹೇಳಿಬಿಟ್ಟನು.

ಆತನ ಈ ಯುಕ್ತಿಯುಕ್ತವಾದ ಉಪದೇಶದಿಂದ ಸಂಗಡಿಗರು ಬೆರಗಾಗಿ, ತಾವೂ ಕೂಡ ಆಟಕ್ಕೆ ಹೋಗುವುದನ್ನು ಬಿಟ್ಟುಬಿಟ್ಟರು. ಈ ವಿಷಯ ವನ್ನೂ ಶ್ರೀಗಳವರು ಅರಿತು ಆನಂದಭರಿತರಾದರು.

ಈ ರೀತಿಯಾಗಿ ಶ್ರೀವಾಗೀಶಗುರುಗಳು ಅನೇಕ ವಿಧಗಳಿಂದ ಈ ಬಾಲಕನನ್ನು ಪರೀಕ್ಷಿಸಿ, ಈತನು ಅತಿವಿರಕ್ತನೂ, ವಿವೇಕಿಯೂ, ಕುಶಾಗ್ರಬುದ್ಧಿಯುಳ್ಳವನೂ ಎಂದು ನಿಶ್ಚಯಿಸಿ, ಯೋಗ್ಯಸುಮುಹೂರ್ತ ದಲ್ಲಿ ಪರಮಹಂಸಸನ್ಯಾಸ ಕೊಟ್ಟು, ವಾದದಲ್ಲಿ ವಾದಿಗಳನ್ನೆಲ್ಲರನ್ನೂ ಜಯಿ ಸತಕ್ಕವನಾದುದರಿಂದ **ಶ್ರೀವಾದಿರಾಜತೀರ್ಥ** ಎಂಬ ಹೆಸರನ್ನಿಟ್ಟು, ವಿದ್ಯೋಪದೇಶ ಮಾಡಿ, ಶ್ರೀಭೂವರಾಹ ಪೂಜಾವಿಧಿಗಳನ್ನು ಉಪದೇಶಿಸಿ ಅನುಗ್ರಹಿಸಿದರು. ಇವರು ಮುಂದೆ ಗುರುಗಳಿಲ್ಲೆಲ್ಲಾ ಶ್ರೇಷ್ಠರೆನಿಸಿ ಕೊಂಡದ್ದರಿಂದ **ಶ್ರೀಗುರುರಾಜ**ರೆಂದೂ ಪ್ರಖ್ಯಾತರಾದರು.

॥ ಶ್ರೀಗುರುರಾಜಗುರವೇ ನಮಃ ॥

## ಮೂರನೇ ಅಧ್ಯಾಯ.

ಶ್ರೀ ಮದ್ವಾದಿರಾಜತೀರ್ಥಪರಮಹಂಸಶ್ರೇಷ್ಠರು ಕೆಲವುಕಾಲ ಲೋಕ ಮರ್ಯಾದೆಯಂತೆ ಗುರುಗಳಿಂದ ಸಕಲ ವಿದ್ಯೋಪದೇಶವನ್ನು ಪಡೆದು, ಗುರುಸೇವಾನಿರತರಾಗಿ ಶ್ರೀಭೂವರಾಹ ದೇವರನ್ನು ಪೂಜಿಸುತ್ತಿದ್ದು; ದಿಗ್ವಿಜಯಯಾತ್ರೆ ಮಾಡಿ ಶ್ರೀಮಧ್ವಮತವನ್ನು ಭೂಮಂಡಲದ ಲ್ಲೆಲ್ಲಾ ಪ್ರಚಾರಗೊಳಿಸಬೇಕೆಂದು ನಿರ್ಣಯಿಸಿ, ಗುರುಗಳ ಅನುಜ್ಞೆ ಯನ್ನು ಪಡೆದು, ತನ್ನ ಮಾತಾಪಿತೃಗಳಿಗೂ ಈ ವಿಷಯವನ್ನು ತಿಳಿಸಲು, ಸರಸ್ವತಿಯು– "ಸನ್ಯಾಸವನ್ನು ಪಡೆದಿದ್ದರೂ ಊರಲ್ಲಿಯೇ ಇದ್ದರೆ ನೋಡಿ ಕೊಂಡಾದರೂ ತೃಪ್ತಿಪಡೆಯುವೆನೆಂಬ ಆಶೆಯೂ ನಾಶವಾಗುವುದೇ?" ಎಂದು ವ್ಯಸನ ಮಾಡಿದುದಕ್ಕೆ ತನ್ನ ಪ್ರತಿಮೆಯನ್ನು ಮಾಡಿಸಿ, "ಈ ಪ್ರತಿ ಮೆಯನ್ನು ನೋಡುತ್ತಾ ನನ್ನ ಅಗಲಿಕೆಯ ದುಃಖವನ್ನು ದೂರ ಮಾಡು

ತ್ತಿ"ರೆಂದು ತಾಯಿಗೆ ಆ ಪ್ರತಿಮೆಕೊಟ್ಟು ಸಂತೈಸಿ, ಆ ಸೇತುಹಿಮಾಚಲ ಪರ್ಯಂತ ಸಮಸ್ತತೀರ್ಥಕ್ಷೇತ್ರ ದೇವಾಲಯಗಳನ್ನು ಸೇವಿಸುತ್ತಾ ಭಕ್ತಜನರನ್ನುದ್ಧರಿಸುತ್ತಾ ಶ್ರೀದ್ವೈತಮತವನ್ನು ಉಪದೇಶಿಸುತ್ತಾ ಅಲ್ಲಲ್ಲಿ ಅನೇಕ ಶಿಷ್ಯವರ್ಗವನ್ನು ಸಂಪಾದಿಸುತ್ತಾ ಅದ್ಭುತಚರಿತ್ರೆಗಳಿಂದುಂಟಾದ ಕೀರ್ತಿಯಿಂದ ಲೋಕವನ್ನೇ ಪ್ರಕಾಶಗೊಳಿಸುತ್ತಿದ್ದರು. ಪ್ರತ್ಯಕ್ಷವಾಗಿ ಸಂದರ್ಶಿಸಿದ ತೀರ್ಥಕ್ಷೇತ್ರಗಳ ಮಹಿಮೆಗಳನ್ನು **ತೀರ್ಥಪ್ರಬಂಧ**ವೆಂಬ ಗ್ರಂಥವನ್ನು ರಚಿಸಿ ಪ್ರಕಟಿಸಿದರು.

ಒಂದು ಕಡೆ ಜಹಗೀರುದಾರನ ಮಗಳಿಗೆ ವಿವಾಹೋತ್ಸವದ ಸಂಭ್ರಮವು ಜರಗುತ್ತಿತ್ತು. ಪುರೋಹಿತರು ಸಪ್ತಪದಿಯನ್ನು ತೊಡಗಿದ್ದರು. ಮದುಮಗನ ರುಮಾಲೆ (ಬಾಸಿಂಗ) ಯೊಳಗೆ ಹಾವು ಸೇರಿಕೊಂಡು ಅವನ ತಲೆಗೆ ಕಡಿದುಬಿಟ್ಟಿತು. ಅದು ಯಾರಿಗೂ ತಿಳಿದಿರಲಿಲ್ಲ. ಆಕ್ಷಣನೇ ವಿಷವೇರಿ ಮದುಮಗನು ಮೂರ್ಛಿತನಾದನು. ಎಲ್ಲರೂ ಚಕಿತರಾದರು. ಒಂದು ಕ್ಷಣದೊಳಗೆ ಮಂಗಲವಾದ್ಯ ಸಂಗೀತಗಳನ್ನು ಬದಿಗೊತ್ತಿ ಹಾಹಾಕಾರದ ಗಲಭೆಯೇ ವಿವಾಹಗೃಹದೊಳಗೆ ತುಂಬಿತು. ಆ ಕಾಲದಲ್ಲಿ ಶ್ರೀವಾದಿರಾಜರು ಸಮೀಪದಲ್ಲಿ ಬಂದಿದ್ದರು. ಇದನ್ನು ತಿಳಿದು ಜಹಗೀರದಾರನು ಬಂದು ಕಾಲಿಗೆರಗಿ, ತನ್ನ ಮಂಗಲಕಾರ್ಯವನ್ನು ನೆರವೇರಿಸಿಕೊಡಬೇಕೆಂದು ಬೇಡಿಕೊಂಡನು. ಶ್ರೀಗಳವರು ದಯಾರ್ದ್ರಹೃದಯದಿಂದ ಆ ಮದುಮಗನನ್ನು ಅಲ್ಲಿಗೆ ತರಿಸಿ, ತನ್ನ ತೊಡೆಯ ಮೇಲಿಟ್ಟು, ಈ ಹೊಸತೇ ಸ್ವಪ್ನದಲ್ಲಿ ಲಕ್ಷ್ಮೀದೇವಿಯು ಪ್ರಸನ್ನರೂಪದಿಂದ ಆಜ್ಞಾಪಿಸಿದಂತೆ ರಚಿಸಿರುವ **ಲಕ್ಷ್ಮೀಶೋಭನ**ವೆಂಬಪದವನ್ನು ಉಚ್ಚರಿಸಿ ಶ್ರೀಲಕ್ಷ್ಮೀನಾರಾಯಣರ ಅನುಗ್ರಹದಿಂದ ಆತನನ್ನು ಬದುಕಿಸಿದರು. ಅಂದಿನಿಂದ ವಿವಾಹಸಮಯದಲ್ಲಿ ವಧೂವರರಿಗೆ ಮಂಗಲಕ್ಕಾಗಿ ಶ್ರೀಲಕ್ಷ್ಮೀಶೋಭನ ಪದವನ್ನು ಮುತ್ತೈದೆಯರು ಹಾಡುವ ಪದ್ಧತಿಯಿದೆ.

ಇನ್ನೊಂದುಕಡೆ ಜಹಗೀರುದಾರನೊಬ್ಬನು ಸಂತಾನಾಭಿಲಾಷೆಯಿಂದ ಪತ್ನೀಸಮೇತನಾಗಿ ಶ್ರೀಗುರುರಾಜರಿಗೆ ವಂದಿಸಿ, ತನಗೆ ಪುತ್ರನು

ಜನಿಸುವಂತೆ ಅನುಗ್ರಹಿಸಬೇಕೆಂದು ಬೇಡಿಕೊಂಡನು. ಆಗ ಸ್ವಾಮಿಗಳು "ನಿನಗೆ ಈ ಜನ್ಮದಲ್ಲಿ ಸಂತತಿ ಲಾಭವಾಗಲಾರದು. ಈ ವಿಷಯದಲ್ಲಿ ವ್ಯರ್ಥಪ್ರಯಾಸವನ್ನು ಹೊಂದಬೇಡ. ನಿನಗಿರುವ ಸಂಪತ್ತನ್ನು ದೇವಬ್ರಾಹ್ಮಣರಿಗೆ ವಿನಿಯೋಗಿಸಿ ಭಗವದನುಗ್ರಹವನ್ನು ಸಂಪಾದಿಸು" ಎಂದು ಉಪದೇಶಿಸಿದರು. ಸ್ವಲ್ಪಕಾಲದ ಮೇಲೊಬ್ಬ ತುರುಕಮಂತ್ರವಾದಿಯು ಆ ಊರಿಗೆ ಬಂದನು. ಆತನು ಫಲವನ್ನು ಮಂತ್ರಿಸಿಕೊಟ್ಟರೆ ಹೇಳಿದ ಕಾಲದೊಳಗೆ ಗರ್ಭವುಂಟಾಗಿ ಮಕ್ಕಳು ಹುಟ್ಟುತ್ತಿದ್ದರು. ಈ ವಾರ್ತೆಕೇಳಿ ಜಹಗೀರುದಾರನ ಹೆಂಡತಿಗೂ ಆಮಾಂತ್ರಿಕನನ್ನು ಕರಿಸಬೇಕೆಂಬ ಆಶೆಯು ಅಂಕುರಿಸಿತು. ಗಂಡನು ಬೇಡವೆಂದರೂ ಹಠಮಾಡಿದಳು. ಕಡೆಗೆ ಮಾಂತ್ರಿಕನು ಕರೆಯಲ್ಪಟ್ಟನು. ಫಲವನ್ನು ಮಂತ್ರಿಸಿ "ಈ ಹಣ್ಣನ್ನು ತಿಂದ ಮೂರುತಿಂಗಳೊಳಗೆ ಗರ್ಭಚಿಹ್ನೆಯು ತೋರುವುದು. ಆಗ ೨೦೦೦ ಮೋಹರಿಗಳನ್ನು ಕೊಡಬೇಕು. ಮಗು ಹುಟ್ಟಿದೊಡನೆ ೩೦೦೦ ಮೋಹರಿಗಳನ್ನು ಕೊಡತಕ್ಕದ್ದು." ಎಂದು ನಿರ್ಣಯಿಸಿ ಆ ಹಣ್ಣನ್ನುಕೊಟ್ಟನು. ತಕ್ಕಸಮಯದೊಳಗೆ ಗರ್ಭಚಿಹ್ನೆಯು ತೋರಿ ಕಾಲದಲ್ಲಿ ಪುತ್ರಜನನವಾಯಿತು. ಜಹಗೀರುದಾರನು ಅತ್ಯಾನಂದದಿಂದ ಆ ಮಾಂತ್ರಿಕನಿಗೆ ೧೦೦೦೦ ಮೋಹರಿಗಳನ್ನು ಕೊಟ್ಟನು. ಅತಿ ಸುಂದರವಾಗಿದ್ದ ಶಿಶುವು ದಿನೇ ದಿನೇ ಬೆಳೆದು ಮಾತಾಪಿತೃಗಳಿಗೆ ಆನಂದದ ನಿಕ್ಷೇಪವಾಗಿದ್ದಿತು. ಶ್ರೀಗುರುರಾಜರು ಕಾಲಕ್ರಮೇಣ ತಿರುಗಿ ಅಲ್ಲಿಗೆಬಂದರು. ಭಕ್ತರೆಲ್ಲರೂ ಎದುರುಗೊಂಡರು. ಜಹಗೀರುದಾರರು ಮಾತ್ರ ಪುತ್ರಲಾಲನೆಯಲ್ಲಿ ನಿರತರಾಗಿ ಶ್ರೀಗಳವರ ದರ್ಶನದಲ್ಲಿ ಉದಾಸೀನರಾಗಿದ್ದರು. ಆಗ ಯತಿವರರು "ಜಹಗೀರುದಾರರೆಲ್ಲಿ?" ಎಂದು ಜನರನ್ನು ಕೇಳಲು 'ಸ್ವಾಮಿನ್! ಬಹುಕಾಲದ ಮೇಲೆ ಪುತ್ರನು ಜನಿಸಿದುದರಿಂದ ಒಂದರೆಕ್ಷಣವೂ ಅದನ್ನಗಲದೇ ಮನೆಯಲ್ಲೇ ಇರುತ್ತಾರೆ." ಎಂದರು. ಆ ಮೇಲೆ ಶ್ರೀಗಳವರ ಆಜ್ಞೆಯಿಂದ ಪಟ್ಟಣಿಕರವರನ್ನು ಕರೆತರಲು ಜಹಗೀರುದಾರನು ಬಂದು ವಂದಿಸಿದನು. ಪರಮ ಹಂಸರು ಕಂಡು "ಇದೇನು ನಮ್ಮ ಮೇಲೆ ಇಷ್ಟುಕೋಪ? ನಿಮ್ಮ ದರ್ಶನವೇ ದುರ್ಲಭವಾಗಿದೆ" ಎಂದರು.

ಅದಕ್ಕೆ ಗೃಹಸ್ಥನು- "ಸ್ವಾಮಿಾ! ಕೋಪವೇನೂ ಇಲ್ಲ. ಶ್ರೀಗಳವರ ಸೇವಾಫಲವೆಂದು ಬಹುಕಾಲದ ಮೇಲೆ ಸಂತತಿಲಾಭವಾಗಿದೆ. ಅದರ ವ್ಯಾಮೋಹದಿಂದ ಮನೆಯೊಳಗೇ ಇದ್ದ ಕಾರಣ ಶ್ರೀಗಳವರ ಆಗಮನವನ್ನರಿಯದೇ ವಿಳಂಬವಾಯಿತು. ಕ್ಷಮಿಸಬೇಕೆಂದನು. ಶ್ರೀಗಳವರು ಶಿಶುವನ್ನು ನೋಡಲು ಬಯಸಿದುದರಿಂದ ಸೇವಕರ ಮೂಲಕವಾಗಿ ಮಗುವನ್ನು ತರಿಸಿದನು. ಯತಿವರ್ಯರು ಅದನ್ನು ಕಂಡು 'ಈ ಮಗುವು ನಿನಗೆ ತಕ್ಕುದಲ್ಲ' ಎನ್ನಲು ಗೃಹಸ್ಥನು 'ಯಾವನಿಮಿತ್ತದಿಂದ ಇದು ನನಗೆ ಯೋಗ್ಯವಲ್ಲ'ವೆಂದು ಪ್ರಶ್ನೆಮಾಡಿದನು. ಸೇವಕನನ್ನು ಕೇಳಿಂದು ಯತಿಗಳ ಅಪ್ಪಣೆಯಾಗಲು ಈ ಮಗುವು ಚಂಡಾಲ ಬಾಲಕರೊಡನೆ ಆಟವಾಡುತ್ತಿದ್ದಿತೆಂದು ತಿಳಿದು "ಬಾಲ್ಯದಲ್ಲಿ ಅಜ್ಞಾನಾವಸ್ಥೆಯಿಂದ ಒಂದುವೇಳೆ ವ್ಯತ್ಯಾಸವನ್ನು ನಡೆಸಿದರೂ ಬುದ್ಧಿಬಂದ ಮೇಲೆ ದಾರಿಗೆ ಬಂದೀತೆಂದು" ಸ್ವಲ್ಪ ಆವೇಶದಿಂದ ಗೃಹಸ್ಥನು ಮಾತನಾಡಿದನು. ಕೂಡಲೇ ಯತಿವರೇಣ್ಯರು ತೀರ್ಥವನ್ನು ಆ ಮಗುವಿಗೆ ಪ್ರೋಕ್ಷಿಸಲು ಭಯಂಕರ ರೂಪವನ್ನು ತಾಳಿತು. ಗೃಹಸ್ಥನು ಹೆದರಿ ಚೀರಿ ಮೂರ್ಛಿತನಾದನು. ಸ್ವಲ್ಪ ಹೊತ್ತಿನ ಮೇಲೆ ಚೇತರಿಸಿಕೊಂಡು ಆತನು "ಸ್ವಾಮಿಾ! ನನ್ನ ಮಗುವು ಏನಾಯಿತು. ಈ ಘೋರರೂಪಿಯು ಯಾರು" ಎಂದು ನುಡಿಯಲು ಶ್ರೀಗಳವರು ಆ ಭಯಂಕರಮೂರ್ತಿಯನ್ನು ನೀನಾರೆಂದು ಕೇಳಿದರು. ಅದು ನಡುಗುತ್ತ "ಸ್ವಾಮಿಾ! ನಾನೊಬ್ಬ ಭೂತಗಣಕ್ಕೆ ಸೇರಿದವನು. ಆ ಮಾಂತ್ರಿಕನು ನನ್ನನ್ನು ವಶೀಕರಿಸಿ, ಇವನಿಗೆ ಮಗನಾಗಿ ಹುಟ್ಟಿ, ೭ ವರ್ಷಕಾಲಯಿದ್ದು, ಕಡೆಗೆ ಇವರಿಬ್ಬರನ್ನೂ ಕೊಂದುಬರಬೇಕೆಂದು ನನಗೆ ಕಟ್ಟುಮಾಡಿದಂತೆ, ಈ ದಂಪತಿಗಳಿಗೆ ಪುತ್ರನಾದೆನು. ನನ್ನಂತೆ ಅನೇಕ ಭೂತಗಳು ಅಲ್ಲಲ್ಲಿ ಹುಟ್ಟಿರುತ್ತವೆ. ಇದರಲ್ಲಿ ನನ್ನ ತಪ್ಪೇನೂ ಇಲ್ಲ. ಕಾಪಾಡಬೇಕೆಂದು" ಬೇಡಿಕೊಂಡಿತು. ಆಗ ಯತಿಗಳು "ಗೃಹಸ್ಥನೇ! ನಿನಗೆ ಮಗು ಬೇಕೇ! ನೋಡು ದುರ್ಜನರ ಕುತಂತ್ರವನ್ನು. ಹಣವನ್ನೆಲ್ಲ ವೆಚ್ಚಮಾಡಿದುದಲ್ಲದೆ ನಿಮ್ಮ ಪ್ರಾಣನಾಶವನ್ನೂ ಸಂಗ್ರಹಿಸಿರುವಿ. ಇದನ್ನು ತಿಳಿದು ನನ್ನ ಭಕ್ತನಾದ ನಿನ್ನನ್ನು ಕಾಪಾಡಬೇಕೆಂದು ಇಲ್ಲಿಗೆ ಬಂದೆನು.

ಎಂದು ಹೇಳಿ ಆ ಭೂತಕ್ಕೆ- "ನೀನು ಭಯಪಡಬೇಡ. ಈ ಗೃಹಸ್ಥನಿಗೆ ಯಾವ ಪೀಡೆಯನ್ನೂ ಮಾಡದಿರು. ನಿನಗೆ ಶಕ್ತಿಯನ್ನು ಕೊಡುವೆನು. ಆ ಮಾಂತ್ರಿಕನಿಗೆ ತಕ್ಕ ಪ್ರತೀಕಾರಮಾಡಿ ಸ್ವತಂತ್ರನಾಗಿರು" ಎಂದಪ್ಪಣೆಇತ್ತು ಕಳುಹಿಸಿ, ಗೃಹಸ್ಥನಿಗೆ ಇನ್ನುಮುಂದೆ ಇಂತಹ ಭ್ರಾಂತಿಗೊಳಗಾಗದೆ ಶ್ರೀಹರಿಸೇವೆಯನ್ನು ಮಾಡುತ್ತಿರುವಂತೆ ಉಪದೇಶಿಸಿ ಹೊರಟುಹೋದರು.

ಕುಂಭಘೋಣಕ್ಕೆ ಹೋಗಿ ಶ್ರೀವಾದಿರಾಜರು ಸಭೆಯಲ್ಲಿ ಅನೇಕ ಪಂಡಿತರನ್ನು ಜಯಿಸಿ ತನ್ನ ಭಕ್ತರನ್ನಾಗಿ ಮಾಡಿಕೊಂಡು, ಅಲ್ಲಿನ ಯತೀಶ್ವರರನ್ನು ವಾದಮಾಡಿ ಜಯಿಸಿದರು.

ಸಂಚಾರ ಕ್ರಮದಿಂದ ಶ್ರೀಶ್ರೀನಿವಾಸದೇವರ ದರ್ಶನಾಕಾಂಕ್ಷಿಗಳಾಗಿ ಶ್ರೀಶೇಷಾಚಲಕ್ಕೆ ಬಂದು, ಆ ಬೆಟ್ಟದ ಮೆಟ್ಟಲುಗಳಲ್ಲಿ ಅನೇಕ ಮಹರ್ಷಿಗಳು ತಪಸ್ಸನ್ನಾಚರಿಸುತ್ತಿರುವುದನ್ನು ಕಂಡು, ಪಾದತಲದಿಂದ ನಡೆಯುವುದು ಅಯುಕ್ತವೆಂದು ಮೊಣಕಾಲುಗಂಟನ್ನೂರಿಕೊಂಡೇ ಬೆಟ್ಟವನ್ನೇರಿ ಶ್ರೀಶ್ರೀನಿವಾಸನನ್ನು ಸಂದರ್ಶಿಸಿ, ಶಾಲಿಗ್ರಾಮ ಮಾಲಿಕೆಯನ್ನು ಆ ದೇವೋತ್ತಮನ ಕಂಠದಲ್ಲಿ ಅರ್ಪಿಸಿದರು. ಆ ಮಾಲಿಕೆಯು ಈಗಲೂ ಶ್ರೀನಿವಾಸದೇವರ ಕಂಠಾಭರಣವಾಗಿರುವುದು ಪ್ರತ್ಯಕ್ಷ ಸಿದ್ಧವಾಗಿದೆ.

ಶ್ರೀವಾದಿರಾಜರು ಭೀಮರಥೀತೀರಕ್ಕೆ ಬಂದಾಗ ಕೆಲವು ಉಠಾರರಾದ ಮೂರ್ಖಮ್ಲೇಂಛರು ಮಠದ ವಸ್ತುಗಳನ್ನು ಸುಲಿಗೆಮಾಡಲು ಪೂಗ್ಗೆಯನ್ನೆತ್ತಿಕೊಂಡು ಬರಲು, ಮಠದ ಜನರು ಕಂಡು ಪ್ರಾಣಭೀತಿಯಿಂದ ಸ್ವಾಮಿಗಳನ್ನೊಬ್ಬರನ್ನೇ ಬಿಟ್ಟು ಓಡಿಹೋದರು. ಆ ಮೂರ್ಖರು ಹತ್ತಿರ ಬಂದರೂ ಶ್ರೀಗಳವರು ಹಸನ್ಮುಖರಾಗಿ ಸ್ಥೈರ್ಯದಿಂದ ಕುಳಿತಿದ್ದುದನ್ನು ಕಂಡಕೂಡಲೆ ಶ್ರೀಗಳವರ ಮಹಿಮೆಯಿಂದ ಆ ದುಷ್ಟರ ದುರಭಿಪ್ರಾಯವು ದೂರವಾಯಿತು. ಆಗವರು ಪಶ್ಚಾತ್ತಾಪಪಟ್ಟು ತಮ್ಮ ತಪ್ಪನ್ನು ಮನ್ನಿಸಿ ಪ್ರಸನ್ನರಾಗಬೇಕೆಂದು ತಲೆಬಾಗಿ ಎರಗಿದರು. ಯತಿಶ್ರೇಷ್ಠರು ಅಭಯದಾನಮಾಡಿ ಅವರನ್ನು ಕಳುಹಿಸಿದರು.

ಪಂಢರಪುರದಲ್ಲಿ ಶ್ರೀಗಳವರು ಸಂಚಾರಕ್ಕೆ ಬಂದಾಗ ಒಬ್ಬ ಧನಿಕನ ಜಮೀನಿನಲ್ಲಿ ಬೆಳೆದ ಕಡಲೆಯನ್ನೆಲ್ಲಾ ಬಿಳಿ ಕುದುರೆಯು ಬಂದು

ತಿಂದಿತು. ಆಗ ಜಮೀನುದಾರನು ರೇಗಿ ಕುದುರೆಯನ್ನು ಬೆನ್ನಟ್ಟಿಬರಲು, ಕುದುರೆಯು ಬೆದರಿ ಓಡುತ್ತ ಶ್ರೀಗಳವರ ವಾಸಸ್ಥಳಕ್ಕೆ ನುಗ್ಗಿದಂತಾಯಿತು. ಕೂಡಲೇ ದಂಡಧಾರಿಯಾದ ಗೃಹಸ್ಥನು ಸಿಟ್ಟಿನಿಂದ ಬಂದು "ಸ್ವಾಮಿ! ತಮ್ಮ ಬಿಳಿಕುದುರೆಯು ನನ್ನ ಜಮೀನಿನ ಕಡಲೆಯನ್ನೆಲ್ಲಾ ತಿಂದು ಇಡೀವರ್ಷದ ಲಾಭವನ್ನೇ ಕೆಡಿಸಿತು. ಇದೆಂತಹ ಅನ್ಯಾಯವು!" ಎಂದು ಹೇಳಲು, ಯತೀಶ್ವರರು "ಗೃಹಸ್ಥರೇ! ನಮ್ಮಲ್ಲಿ ಬಿಳಿದೋ ಕಪ್ಪೋ ಕುದುರೆಯೇ ಇಲ್ಲವಲ್ಲ! ವ್ಯರ್ಥವೇಕೆ ಕೋಪಿಸುವಿರಿ?" ಎಂದರು. ಮತ್ತಷ್ಟು ರೇಗಿ ಗೃಹಸ್ಥನು– "ಏನೇನು ಕುದುರೆಯಿಲ್ಲವೇ? ತಮ್ಮ ಬಳಿಗೆ ಬಂದುದನ್ನು ಕಣ್ಣಾರೆ ಕಂಡುದೂ ಸುಳ್ಳಾಯಿತೇ?" ಎಂದನು. ಕಿರುನಗೆಯಿಂದ ಶ್ರೀಗಳವರು, ಹಯವದನನ ಮಹಿಮೆಯನ್ನು ಸ್ಮರಿಸಿ "ಹುಡುಕಿರಿ, ಕುದುರೆಯನ್ನಿಲ್ಲಿ ತೋರಿಸಿದೊಡನೆ ನಿಮಗಾದ ನಷ್ಟಕ್ಕೆ ನೂರುಪಾಲು ಸೇರಿಸಿ ದಂಡ ತೆರುವೆವು;" ಎನ್ನಲು, ಆತನು ಎಲ್ಲಕಡೆಯಲ್ಲಿಯೂ ಹುಡುಕಿ ಹುಡುಕಿ ಬೇಸತ್ತು ಕುದುರೆಯ ಕುರುಹನ್ನೇ ಕಾಣದೆ ಲಜ್ಜಾಭಯಗಳಿಂದ ಶ್ರೀಗಳವರಿಗೆ ವಂದಿಸಿ, ಇದರ ಮರ್ಮವೇನೆಂದು ಅರಿಕೆಮಾಡಿದನು. ಯತಿವರ್ಯರು "ನಮ್ಮಲ್ಲಿ ಸತ್ಯವಾಗಿಯೂ ಕುದುರೆಯಿಲ್ಲ. ಪರಂತು, ನಮ್ಮ ಉಪಾಸನಮೂರ್ತಿಯಾದ ಹಯಗ್ರೀವದೇವರು ನಿನಗನುಗ್ರಹಿಸಲೆಣಿಸಿ ಕುದುರೆಯ ರೂಪದಿಂದ ಕಡಲೆಯನ್ನು ಮೆದ್ದಿರಬಹುದು. ಇದಕ್ಕೆ ದೃಷ್ಟಾಂತವಾಗಿ ನಾಳೆ ಬೆಳಿಗ್ಗೆ ಹೊಲದಲ್ಲಿ ತಿಂದ ಧಾನ್ಯದ ನಷ್ಟಪರಿಹಾರಕ್ಕೆ ನೂರುಪಾಲು ಹೆಚ್ಚಾಗಿ ಚಿನ್ನದ ಕಡಲೆಗಳನ್ನು ನೀನು ನೋಡುವಿ. ಆಗ ಮನಸ್ಸಿಗೆ ಸಮಾಧಾನವಾಗುವುದು"ಯೆಂದು ಸಂತೈಸಿದರು. ಈ ಚಮತ್ಕಾರವನ್ನು ನೋಡಬೇಕೆಂದೊಪ್ಪಿ ಗೃಹಸ್ಥನು ಮುಂಜಾನೆ ಬೇಗನೆದ್ದು ಹೊಲದ ಕಡೆಗೋಡಿದನು. ಅಲ್ಲಿ ಎಲ್ಲ ನೋಡಿದರೂ ಚಿನ್ನದ ಕಡಲೆಗಳು ರಾಶಿರಾಶಿ ಗೊಂಚಲು ಗೊಂಚಲಾಗಿ ಜೋಲುತ್ತಿದ್ದುವು. ಅದನ್ನು ಕಂಡು ಬೆಚ್ಚಿ ಬೆರಗಾದನು. ತನ್ನ ತಪ್ಪಿಗಾಗಿ ನಡುಗಿದನು. ಎಲ್ಲಿ ಮಹಾತ್ಮರ ಕೋಪಾಗ್ನಿಗೆ ತುತ್ತಾಗುವೆನೋ? ಎಂದು ನೊಂದುಕೊಂಡನು. ಕಡೆಗೆ ಏನುಮಾಡುವುದು? ಒಡನೆ ಯತಿಗಳ ಪಾದಕ್ಕೆರಗಿ ಶ್ರೀಹಯಗ್ರೀವದೇವ

ರಿಗೆ ಆ ಹೊಲವನ್ನೇ ಧಾರೆಯೆರೆದನು. ಶ್ರೀಗಳವರಿಂದ ಫಲಮಂತ್ರಾಕ್ಷತೆ ಪಡೆದು, ತನ್ನ ನಿಷ್ಠುರವಚನದ ತಪ್ಪಿಗಾಗಿ ಕ್ಷಮೆಬೇಡಿ ಮನೆಗೆಹೋದನು. ಈಚೆಗೆ ಎರಡು ತಲೆಯು ಮುಂಚಿತವಾಗಿ ಸೋದೇಮಠದ ವೃಂದಾವನಾಚಾರ್ಯರ ಕಾಲದ ವರೆಗೂ ಅಲ್ಲಿನ ಕಡಲೆ ಮಠಕ್ಕೆ ಬರುತ್ತಿದ್ದಿತು.

ಯಾತ್ರಾವಸರದಲ್ಲಿ ಶ್ರೀಗುರುರಾಜರು ವಿಜಯನಗರ ರಾಜಧಾನಿಗೆ ಪ್ರಯಾಣಮಾಡಿದರು. ಅಲ್ಲಿ ಶ್ರೀಮದ್ರಾಜಾಧಿರಾಜ ಪರಮೇಶ್ವರ ಶ್ರೀ ವೀರಪ್ರತಾಪ ಶ್ರೀವೆಂಕಟಪತಿ ಮಹಾರಾಜನು ರಾಜ್ಯವನ್ನಾಳುತ್ತಿದ್ದನು. ಇವನು ಸ್ವತಃ ವಿದ್ವಾಂಸನೂ, ವಿದ್ವಜ್ಜನಪ್ರಿಯನೂ, ಶೂರನೂ, ಅತ್ಯುದಾರನೂ ಆಗಿದ್ದುದರಿಂದ ಅನೇಕ ಪಂಡಿತರು ಈತನನ್ನಾಶ್ರಯಿಸಿಕೊಂಡಿದ್ದರು. ರಾಜನು ಶ್ರೀಗಳವರನ್ನು ಪಲ್ಲಕಿಯಲ್ಲಿ ಕುಳ್ಳಿರಿಸಿ, ಅನೇಕರಾಜವಿಭವದೊಡನೆ ತನ್ನ ಅರಮನೆಯೊಳಗೆ ಕರೆತಂದು, ಪಾದಪ್ರಕ್ಷಾಲನ ಮಾಡಿ ಭಕ್ತಿಯಿಂದ ಪೂಜಿಸಿದನು. ಪಂಡಿತಮಂಡಿತವಾದ ಮಹಾರಾಜ ಸಭೆಯಲ್ಲಿ ಅನೇಕ ಪಂಡಿತರು ಮಾಡಿದ ವಿವಿಧ ಕಥಾಪ್ರಸಂಗಗಳಿಗೂ ಶ್ರೀಯತಿವರೇಣ್ಯರು ತಪ್ಪದೆ ಉತ್ತರಕೊಟ್ಟು, ಅನೇಕವಾದಗಳನ್ನೂ ಮಾಡಿ, ಅಲ್ಲಿ ನೆರದಿರುವ ವಾದಿಗಳನ್ನೆಲ್ಲಾ ಗೆದ್ದರು. ಮಹಾರಾಜನು ಸಂತುಷ್ಟನಾಗಿ ಶ್ರೀಗಳವರಿಗೆ **ಪ್ರಸಂಗಾಭರಣತೀರ್ಥರು** ಎಂಬ ಬಿರುದುನಾಮವನ್ನೂ, ಅನೇಕ ಬಿರುದುಗಳನ್ನೂ, ಅನೇಕ ಮರ್ಯಾದೆಗಳನ್ನೂ ಕೊಟ್ಟು ಸಂತೋಷಗೊಳಿಸಿದನು.

ಪುಣ್ಯ (ಪೂನಾ) ಪುರಿಯಲ್ಲಿ ಅಲ್ಲಿನ ರಾಜನು **ಶಿಶುಪಾಲವಧ**ವೆಂಬ ಮಾಘಕಾವ್ಯವನ್ನು ಕಾವ್ಯಗಳಲ್ಲೆಲ್ಲ ಶ್ರೇಷ್ಠವಾದುದೆಂದು ಆನೆಯ ಮೇಲೆ ಅಂಬಾರಿಹಾಕಿ ಅದರ ಮೇಲೆ ಮೆರವಣಿಗೆ ಮಾಡಿಸುವನೆಂದು ಶ್ರೀಗುರುರಾಜರು ತಿಳಿದು, ಕೂಡಲೆ ರಾಜನಲ್ಲಿಗೆ ಹೋಗಿ "ರಾಜಶ್ರೇಷ್ಠನೇ! ನಮ್ಮಲ್ಲಿ ಇದಕ್ಕಿಂತಲೂ ಉತ್ತಮಕಾವ್ಯವಿದೆ. ಇಂದು ಈ ಮೆರವಣಿಗೆ ನಿಲ್ಲಿಸು. ಇಂದಿನಿಂದ ೨೦ನೇ ದಿವಸ ಬೆಳಗ್ಗೆ ಅದನ್ನು ತರಿಸಿ ತೋರಿಸುವೆನು" ಎಂದು ಹೇಳಿ ಅರಸನಿಂದ ಒಪ್ಪಿಗೆ ಪಡೆದು, ದಿನಕ್ಕೆ ೧ಸರ್ಗದಂತೆ ೧೯ಸರ್ಗಗಳಿಂದ ಕೂಡಿದ **«ಶ್ರೀರುಗ್ಮಿಣೀಶವಿಜಯ»**ವೆಂಬ ಸರಸ ಮಹಾ

ಕಾವ್ಯವನ್ನು ಮಾಡಿ, ೨೦ನೇದಿನ ಬೆಳಿಗ್ಗೆ ರಾಜನಲ್ಲಿಗೆ ಕಳುಹಿಸಿದರು. ಅರಸನು ಆ ಕಾವ್ಯದ ರೀತಿ, ರಸ, ವರ್ಣನಾಶೈಲಿ, ಚಮತ್ಕಾರಗಳನ್ನು ನೋಡಿ, ಸಂತುಷ್ಟನಾಗಿ ಅದೇ ದಿನ ಶ್ರೀರುಗ್ಮಿಣೀಶ ವಿಜಯ ಮಹಾ ಕಾವ್ಯವೇ ಸರ್ವೋತ್ಕೃಷ್ಟಕಾವ್ಯವೆಂದು ಮೆರವಣಿಗೆ ಮಾಡಿಸಿ, ಡಂಗುರ ಹೊಡಿಸಿ, ಕಡೆಗೆ ೧೯ದಿನಗಳಲ್ಲಿಯೇ ಈ ಕಾವ್ಯವನ್ನು ಶ್ರೀವಾದಿರಾಜರೇ ರಚಿಸಿದರೆಂದು ತಿಳಿದು ಅವರಿಗೆ ಬಹಳವಾಗಿ ಸನ್ಮಾನಮಾಡಿದನು.

ಶ್ರೀವಾದಿರಾಜರು ಹೀಗೆ ಸಂಚರಿಸುತ್ತ ಡಿಲ್ಲಿ (ಇಂದ್ರಪ್ರಸ್ಥ) ರಾಜಧಾನಿಗೆ ಬಂದು, ಅಲ್ಲಿ ಮರಣಹೊಂದಿದ ರಾಜಪುತ್ರನ ಗೋರಿ (ಸಮಾಧಿ) ಮಾಡಿದ ಸ್ಥಳದಲ್ಲಿ ದೇವರ ಪೂಜೆಮಾಡಲು ತೊಡಗಿದರು. ಆಗ ಪಟ್ಟಣಿಗರು ಬಂದು ರಾಜಪುತ್ರನ ಶವವನ್ನು ಹೂಳಿದ ಸ್ಥಳವಾದುದರಿಂದ ಪೂಜೆಗೆ ಈ ಸ್ಥಳವು ಅಪವಿತ್ರವಾದುದೆಂದು ಬಿನ್ನೈಸಿದರು. ಶ್ರೀಗಳವರು ಅದನ್ನು ಕೇಳಿ, ಜೀವಂತನಾದ ರಾಜಪುತ್ರನ ಸಮಾಧಿಸ್ಥಳವು ಅಪವಿತ್ರವಾಗದೆಂದು ಉತ್ತರ ಕೊಟ್ಟು ಪೂಜೆಮಾಡಿಬಿಟ್ಟರು. ಜನರೆಲ್ಲರಿಗೂ ಆಶ್ಚರ್ಯವಾಯಿತು. ಸತ್ತುಹೋದ ರಾಜಪುತ್ರನ ಶವವನ್ನು ಹೂಳಿದುದು ಪ್ರತ್ಯಕ್ಷವಾಗಿ ನಮ್ಮ ಕಣ್ಣಿಗೆ ಗೋಚರವಾಗಿದೆ. ಬದುಕಿದ್ದವರನ್ನು ಯಾರೂ ಹೂಳುವುದಿಲ್ಲ. ಈ ಮಹಾತ್ಮರ ವಚನವು ಸುಳ್ಳಾಗಲಾರದು. ಇದನ್ನು ರಾಜನಿಗೆ ತಿಳಿಸಿಬಿಡಬೇಕೆಂದು ಒಡನೆ ರಾಜನ ಬಳಿಗೋಡಿ ಅರುಹಿದರು. ಪುತ್ರಶೋಕಪೀಡಿತನಾದ ತುರುಕರಾಜನು ಈ ಮಾತನ್ನು ಕೇಳಿದೊಡನೆ ಮಂತ್ರಿಯೊಡಗೂಡಿ ಓಡಿಬಂದು, ದೂರದಲ್ಲೇ ಎರಗಿ "ಮಹಾತ್ಮರೇ! ತಮ್ಮ ಮಾತನ್ನು ಸತ್ಯಗೊಳಿಸಿ ಪುತ್ರಶೋಕ ಸಾಗರದಲ್ಲಿ ಮುಳುಗಿದ ನನ್ನನ್ನುದ್ಧರಿಸಬೇ"ಕೆಂದು ಮೊರೆಯಿಟ್ಟನು. ಶ್ರೀಗಳವರು ಆ ಶವವನ್ನು ತೆಗೆದಿಡಲು ಆಜ್ಞಾಪಿಸಿ, ಅದಕ್ಕೆ ತೀರ್ಥವನ್ನು ಪ್ರೋಕ್ಷಿಸಿದರು. ರಾಜಪುತ್ರನು ಕೂಡಲೆ ನಿದ್ರೆಯಿಂದೆದ್ದವನಂತೆ ಎದ್ದು ಕುಳಿತು ಸುತ್ತಲೂ ನೋಡಿ, ತಂದೆಯ ಬಳಿಗೆ ಬಂದು ವಂದಿಸಿದನು. ಆಗ ವೃದ್ಧರಾಜನು ಕಂದನನ್ನು ಬಿಗಿದಪ್ಪಿ, "ಭೇಟಾ! ನಿನ್ನನ್ನು ಬದುಕಿಸಿದ ಆ ಮಹಾಮಹಿಮನಿಗೆ ನಮಿಸು" ಎಂದು ಮಗನೊಡನೆ ಬೀಳ್ಕೊಂಡು,

ಶ್ರೀಗಳವರ ಆಜ್ಞೆಪಡೆದು, ಅರಮನೆಗೆ ಹೋಗಿ, ನೂರಾರು ಒಂಟೆಗಳಿಂದ ಸುವರ್ಣದ ಮೋಹರಿಗಳನ್ನು ಹೊರಿಸಿ, ಗುರುಕಾಣಿಕೆಗೆ ಕಳುಹಿಸಿದನು. ಯತಿವರರು ಅದನ್ನು ಮುಟ್ಟದಿರಲು, ಅರಸನು ಹಠಮಾಡಿ ಶ್ರೀಗಳವರು ಸಂಚರಿಸುವಲ್ಲೆಲ್ಲಾ ಕಳುಹಿಸಿದನು. ಕ್ರಮವಾಗಿ ಯತಿವರೇಣ್ಯರು ಕಾಶಿಕ್ಷೇತ್ರಕ್ಕೆ ಬಂದರು. ಹಿಂದಿನಿಂದಲೇ ಬಂದ ಆ ಹಣವನ್ನು ಮಠದವರು ಇಷ್ಟವಿದ್ದವರು ತೆಗದುಕೊಳ್ಳಬಹುದೆಂದು ಅಪ್ಪಣೆಕೊಟ್ಟರೂ, ಗುರುಗಳಿಗೆ ಬೇಡವಾದುದು ನಮಗೂ ಬೇಡವೆಂದು ಯಾರೂ ಮುಟ್ಟಲಿಲ್ಲ. ಕಡೆಗೆ ಆ ಹಣದ ರಾಶಿಯನ್ನು ಗಂಗಾಪ್ರವಾಹಕ್ಕೆ ಹಾಕಿಸಿಬಿಟ್ಟರು.

ಕಾಶಿಯಲ್ಲಿ ರಾತ್ರಿಯು ಒದಗಿದಾಗ ಗಂಗಾನದಿಯ ದಡದಲ್ಲಿಯೇ ರಾತ್ರಿಪೂಜಾದಿಗಳನ್ನು ಮಾಡಿ ಮಠದವರೊಡನೆ ಶಯನಮಾಡಿದರು. ಆಗ ನೂರಾರು ದೊಡ್ಡದೊಡ್ಡ ಮೊಸಳೆಗಳು ತಿನ್ನಬೇಕೆಂದು ಮಠದವರನ್ನು ಸುತ್ತು ಹಾಕಲು, ಶ್ರೀಗಳವರು ಮಠದವರಿಗೆ ಧೈರ್ಯಹೇಳಿ, ಆ ಮಠದವರಸುತ್ತಲೂ ಮಂತ್ರರೇಖೆಯ ಮಂಡಲವನ್ನು ಬರೆಯಲು, ಮೊಸಳೆಗಳು ಅದನ್ನು ದಾಟಲಾರದೆ. ಹಿಂದಕ್ಕೆ ಹೋದವು. ಆ ಪುಣ್ಯಕ್ಷೇತ್ರದಲ್ಲಿ ವಾಸಮಾಡುತ್ತಿರುವಾಗ ತರ್ಕವ್ಯಾಕರಣ ಮೀಮಾಂಸಾದಿ ಸರ್ವಶಾಸ್ತ್ರಗಳಲ್ಲಿಯೂ ವಾದಮಾಡಿ ಮಹಾ ಮಹಾ ಪಂಡಿತರನ್ನೂ ಜಯಿಸಿದರು.

ಶ್ರೀಕಾಶೀಕ್ಷೇತ್ರದಿಂದ ಬ್ರಹ್ಮಾವರ್ತದ ಪ್ರಯಾಗಕ್ಷೇತ್ರಕ್ಕೆ ದಿಗ್ವಿಜಯ ಮಾಡಿದರು. ಆ ಕ್ಷೇತ್ರದೊಳಗೆ ಬ್ರಹ್ಮದೇವರ ಸಂಧ್ಯಾಮಠದಲ್ಲಿ ಶ್ರೀಗಳವರು ಜಪವನ್ನಾಚರಿಸುತ್ತಿರಲು, ಶ್ರೀವೇದವ್ಯಾಸದೇವರು ಜಟಾಧಾರಿಯಾದ ತಪಸ್ವಿವೇಷದಿಂದ ಅವರ ಬಳಿಗೆ ಬಂದು "ವತ್ಸ! ನಿನ್ನ ತಾಯಿಯು ಪುತ್ರನು ಜನಿಸಿದರೆ ಲಕ್ಷಾಭರಣಗಳನ್ನರ್ಪಿಸುವೆನೆಂದು ಹರಿಕೆ ಹೇಳಿದ್ದಳು. ಆ ಹರಿಕೆಯನ್ನು ನೀನರ್ಪಿಸಬೇಡವೇ? ನಮ್ಮಿಂದ ರಚಿತವಾದ ಮಹಾಭಾರತ ಗ್ರಂಥದಲ್ಲಿ ಲಕ್ಷಗ್ರಂಥಿ (ಕಠಿಣತಾತ್ಪರ್ಯ ಶಬ್ದ) ಗಳಿರುತ್ತವೆ. ಆ ಲಕ್ಷ ಶಬ್ದಗಳಿಗೆ ಟೀಕೆಬರೆದರೆ ಲಕ್ಷಾಭರಣಗಳನ್ನರ್ಪಿಸಿದಂತಾಗುವುದು" ಎಂದಪ್ಪಣೆ ಕೊಟ್ಟು ಅದೃಶ್ಯರಾದರು. ಈ ಕಥೆಯು ಲಕ್ಷಾಭರಣ ಗ್ರಂಥದಲ್ಲಿದ್ದ ಈ ಶ್ಲೋಕದಿಂದ ಸ್ಪಷ್ಟವಾಗುವುದು.

"ಪ್ರಯಾಗೇ ಬ್ರಹ್ಮಣಃ ಸಂಧ್ಯಾಮತೀ ಜಪಪರಾಯಣಃ |
ಅಹಮಾಸಂ ತದಾ ಲಕ್ಷಾಲಂಕಾರಂ ಕುರ್ವಿತಿ ಪ್ರಭುಃ" ||

ಶ್ರೀವಾದಿರಾಜರು ವ್ಯಾಸದೇವರ ಆಜ್ಞೆಯನ್ನು ಶಿರಸಾ ವಹಿಸಿ **ಲಕ್ಷಾಲಂಕಾರ**ವೆಂಬ ಮಹಾ ಭಾರತಗ್ರಂಥದ ಟೀಕೆಯನ್ನು ನಿರ್ಮಿಸಿದರು.

ಅಲ್ಲಿಂದ ಹಿಂದೆ ತಿರುಗಿ ಡಿಲ್ಲಿಯ ಮಾರ್ಗವಾಗಿ ಯತೀಶ್ವರರು ಬರಲು, ಡಿಲ್ಲೀಶ್ವರನು ಒಂಟೆಗಳಲ್ಲಿ ನಾಣ್ಯರಾಶಿಯನ್ನು ತೋರಿಸಿ, ಇದನ್ನು ತೆಗದುಕೊಳ್ಳಲೇಬೇಕೆಂದು ನಿರ್ಬಂಧಿಸಿದನು. ಆ ನಿರ್ಬಂಧವನ್ನು ವಿಾರಲಾರದೆ ಶ್ರೀಗಳವರು ಅದನ್ನು ಸ್ವೀಕರಿಸಿ, ಅಲ್ಲಿಂದ ಹೊರಟರು.

ಅಲ್ಲಲ್ಲಿ ಸಂಚರಿಸುತ್ತಾ ದ್ವಾರಾವತಿಗೆ ಹೋಗಿ, ಉಪವಾಸಮಾಡುತ್ತಾ ಕೆಲಂಗಳಲ್ಲಿ ತಪಸ್ಸುಮಾಡುತ್ತಿದ್ದರು. ಅಲ್ಲಿ ಶ್ರೀಮಧ್ವಾಷ್ಟಕವನ್ನು ರಚಿಸಿದರು. ಆ ಸಮಯದಲ್ಲಿ ಅಲ್ಲಿಯೇ ವಾಸಮಾಡುತ್ತಿದ್ದ ಕೃಷ್ಣನಾಮಕರಾದ ಯತಿಗಳು ಬಹಳ ಜ್ವರಪೀಡಿತರಾಗಿದ್ದರು. ಅವರಿಗೆ "ಶ್ರೀವಾದಿರಾಜರಿಂದ ರಚಿತವಾದ ಮಧ್ವಾಷ್ಟಕವನ್ನು ಜಪಿಸಿದರೆ ಜ್ವರಪೀಡೆಯು ಪರಿಹಾರವಾಗುವು"ದೆಂದು ಸ್ವಪ್ನವಾದುದರಿಂದ ಆ ಯತಿಗಳು ಶ್ರೀವಾದಿರಾಜರ ಬಳಿಗೆ ಬಂದು, ಸ್ವಪ್ನವಾರ್ತೆಯನ್ನು ಅರಿಕೆಮಾಡಿ, ಅನುಗ್ರಹಿಸಬೇಕೆಂದು ಬೇಡಿದರು. ಶ್ರೀಗುರುರಾಜರು ಆ ಯತಿಗಳಿಗೆ ಕೃಪೆಯಿಂದ ಮಧ್ವಾಷ್ಟಕವನ್ನುಪದೇಶಿಸಿ, ಅವರ ಜ್ವರವನ್ನು ಪರಿಹರಿಸಿ ಅನುಗ್ರಹಿಸಿದರು. ಆ ಮಹಾಪುರುಷರ ಅನುಗ್ರಹದಿಂದ ಹೋದಕ್ಕೆಲ್ಲ ಜಯಶೀಲರಾಗಿ ಕೃಷ್ಣಯತಿಗಳು ಶ್ರೀವಾದಿರಾಜರ ಕೀರ್ತಿಯನ್ನು ದಿಗ್ದೇಶಗಳಲ್ಲಿ ಹೇಳುತ್ತಾ ಸಂಚರಿಸುತ್ತಿದರು.

ಶ್ರೀವಾದಿರಾಜರು ದ್ವಾರಕೆಯಲ್ಲಿ ತಪಸ್ಸುಮಾಡುತ್ತಿರುವಾಗ ಅಕಸ್ಮಾತ್ತಾಗಿ ಶ್ರೀಹಯಗ್ರೀವದೇವರು ಹೃದಯದಲ್ಲಿ ಪ್ರಕಾಶಿಸಲು, ಆತನನ್ನೇ ಎಡೆಬಿಡದೆ ಉಪಾಸನೆಮಾಡುತ್ತಿದ್ದರು. ಒಂದು ದಿನ "ಈ ದ್ವಾರಾವತಿಯ ಒಂದು ಗುಹೆಯೊಳಗೆ ಹಯಗ್ರೀವ ಸಾಲಿಗ್ರಾಮವಿದೆ. ಅದನ್ನು ತಂದುಪೂಜಿಸೆ"ಂದು ಸ್ವಪ್ನವಾಗಲು, ಅದರಂತೆ ಆ ಗುಹೆಯೊಳಗೆ ಪ್ರವೇಶಿಸಿದೊಡನೆ

ಸೂರ್ಯನಂತೆ ಪ್ರಕಾಶವನ್ನು ಬೀರುತ್ತಿರುವ ಸಾಲಿಗ್ರಾಮವನ್ನು ಕಂಡು, ಭಕ್ತಿಯಿಂದ ಅದನ್ನು ತಂದು ಪೂಜಿಸುತ್ತಿದ್ದರು.

ದ್ವಾರಾವತಿಯಿಂದ ಹೊರಟು ಬೇರೆಕಡೆ ಸಂಚರಿಸುತ್ತಿರುವಾಗ ಒಂದು ಸ್ಥಳದಲ್ಲಿ ಧನಿಕನೊಬ್ಬನು ಅತಿ ಲೋಭಿಯಾಗಿದ್ದುದನ್ನು ಕಂಡು ಆತನಿಗೆ ಅನುಗ್ರಹಿಸಬೇಕೆಂದು, ತನ್ನಲ್ಲಿದ್ದ ಇನ್ನೊಂದು ಹಯಗ್ರೀವ ಸಾಲಿಗ್ರಾಮವನ್ನು ಆತನಲ್ಲಿಟ್ಟು, ತಿರುಗಿ ಇಲ್ಲಿಗೆ ತಾನುಬರುವ ತನಕ ಆ ಹಯಗ್ರೀವ ಪೂಜೆಯನ್ನು ಮಾಡುತ್ತಿರುವಂತೆ ಆಜ್ಞಾಪಿಸಿ ಹೊರಟು ಹೋದರು. ಅಂದಿನಿಂದ ಆತನು ಅತ್ಯುದಾರ ಸ್ವಭಾವದವನಾಗಿ ನಿತ್ಯದಲ್ಲಿಯೂ ಮಹಾ ಸಂಭ್ರಮದಿಂದ ಹಯಗ್ರೀವದೇವರಿಗೆ ವಿವಿಧಭಕ್ಷ್ಯ ಭೋಜ್ಯಗಳನ್ನು ಸಮರ್ಪಿಸಿ, ಬಹು ಬ್ರಾಹ್ಮಣಭೋಜನಾದಿಗಳನ್ನು ಮಾಡುತ್ತಿದ್ದನು.

ಈ ರೀತಿಯಾಗಿ ಶ್ರೀವಾದಿರಾಜರು ಗುಜರಾಥದೇಶದಲ್ಲಿ ಸಂಚರಿಸುತ್ತಿರುವಾಗ ಅನೇಕಾನೇಕ ಗುಜರಾಥಿಗಳು ಅವರ ಶಿಷ್ಯರಾಗಿ ಅನುಗ್ರಹವನ್ನು ಸಂಪಾದಿಸಿದರು.

ಯತಿಸಾರ್ವಭೌಮರು ಸಂಚರಿಸುತ್ತಾ ಹಂಪೆಗೆ ಬಂದರು. ಆವಾಗ ಅರಸರಾದ ಅಚ್ಯುತರಾಯ ಕೃಷ್ಣರಾಯರೆಂಬವರು ದೈವಯೋಗದಿಂದ ಬಹು ದರಿದ್ರರಾಗಿ, ಆ ದಾರಿದ್ರ್ಯಪರಿಹಾರಕ್ಕಾಗಿ ಶ್ರೀಗಳವರನ್ನು ಮರೆಹೊಕ್ಕರು. ಯತಿಕುಲತಿಲಕರು ಅವರಿಗೆ ಅಭಯದಾನಮಾಡಿ, ವಾಲಿಗುಹೆಯೊಳಗೆ ಪ್ರವೇಶಿಸಿ, ಒಂದು ಬಂಡೇಕಲ್ಲಿಗೆ ತೀರ್ಥವನ್ನು ಪ್ರೋಕ್ಷಿಸಿದರು. ಕೂಡಲೇ ಆ ಶಿಲೆಯು ಒಡೆಯಿತು. ಅದೊಂದು ಕಲ್ಲಿನ ಪುರಾತನ ಪೆಟ್ಟಿಗೆಯಾಗಿದ್ದಿತು. ಅದರೊಳಗೆ ಹೇರಳವಾಗಿ ಮುತ್ತುರತ್ನಗಳಿದ್ದುವು. ಶ್ರೀಗಳವರ ಆಜ್ಞೆಯಿಂದ ಆ ಭೂಪಾಲರು ಅದನ್ನು ಸ್ವೀಕರಿಸಿದರು. ಶ್ರೀಗಳವರಲ್ಲಿ "ತಮಗೆ ಬೇಕಾದಷ್ಟು ಸ್ವೀಕರಿಸಬೇಕೆಂದು" ಅವರು ಅರಿಕೆಮಾಡಲು, ಶ್ರೀಗಳವರು ೨ಪ್ರತಿಮೆಗಳನ್ನು ಮಾತ್ರ ಸ್ವೀಕರಿಸಿದರು. ಆ ಪ್ರತೀಕಗಳಲ್ಲಿ ೧ ವಾಲಿಪೂಜಿತ ವಿಟ್ಠಲಮೂರ್ತಿ, ೨ನೆಯದು ಸುಗ್ರೀವಾರ್ಚಿತ ರಾಮಮೂರ್ತಿ. ಈ ಎರಡು ಪ್ರತಿಮೆಗಳೂ

ಈಗ ಸೋದೇಮಠದಲ್ಲಿ ಪೂಜಿತಗಳಾಗುತ್ತವೆ. ಆ ಮೇಲೆ ಆ ಭೂಪತಿಗಳು ತಿರುಗಿ ಶ್ರೀಗಳವರ ಸನ್ನಿಧಿಗೆ ಬಂದು "ಗುರೂತ್ತಮರೇ! ತಮ್ಮ ಪರಮಾನುಗ್ರಹದಿಂದ ನಮಗೆ ಸಂಪತ್ತು ಬಂದಿರುತ್ತದೆ. ಆ ಸಂಪತ್ತಿನಿಂದ ಯಾವದಾದರೊಂದು ಉತ್ತಮವಾದ ಪರಿಸೇವೆಯನ್ನು ಮಾಡಿಸಿ ನಮ್ಮನ್ನುದ್ಧರಿಸಬೇ"ಕೆಂದು ನಿರ್ಬಂಧಿಸಲು "ನಮ್ಮ ಶ್ರೀಕೃಷ್ಣಪರ್ಯಾಯ ಪೂಜಾಸಮಯಕ್ಕೆ ಶ್ರೀರೂಪ್ಯಪೀಠಪುರಕ್ಕೆ ಬನ್ನಿರಿ. ಆಗ ನಿಮಗೆ ನಾನು ಉಪದೇಶಿಸಿದಂತೆ ಶ್ರೀಭಗವಂತನ ಸೇವೆಮಾಡಿ ಆತನ ಅನುಗ್ರಹಕ್ಕೆ ಪಾತ್ರರಾಗುವಿರಿ" ಎಂದಪ್ಪಣೆಯಿತ್ತು ಶ್ರೀರೂಪ್ಯಪೀಠಪುರಕ್ಕೆ ಬಂದರು.

॥ ಶ್ರೀಹಯಗ್ರೀವಾಯ ನಮಃ ॥

# ನಾಲ್ಕನೇ ಅಧ್ಯಾಯ.

ಶ್ರೀ ಗುರುರಾಜರು ಸ್ವದೇಶಕ್ಕೆ ಬಂದವರು ತಾಯಿಯ ಬಳಿಗೆ ಬಂದು "ಅಮ್ಮಾ! ನೀನು ಹಿಂದೆ ಹೇಳಿದಂತೆ ದೇವರಿಗೆ ಲಕ್ಷಾಲಂಕಾರವನ್ನು ಮಾಡಿ ಸಮರ್ಪಿಸಿದೆ"ನೆಂದು ಹೇಳಿದರು. ಮಾತೆಯು ಅದನ್ನು ನೋಡಬೇಕೆಂದು ಬಯಸಲು, ಆ ಗ್ರಂಥವನ್ನು ಆಕೆಯ ಮುಂದಿಟ್ಟು, ಅದರ ವಿಷಯವನ್ನೆಲ್ಲ ತಿಳುಹಿಸಿ ಆಕೆಯನ್ನು ಆನಂದಗೊಳಿಸಿದರು.

ಶ್ರೀಪರಶುರಾಮ ಕ್ಷೇತ್ರದೊಳಗೆ ಸಂಚರಿಸುತ್ತ ಶ್ರೀಗಳವರು ಮೂಡುಬಿದಿರೆಯೆಂಬ ಊರಲ್ಲಿ ಸಹಸ್ರಶಿಲಾಸ್ತಂಭಗಳಿಂದ ಅದ್ಭುತವಾದ ಬುದ್ಧಾಲಯದ ಬಳಿ ಪ್ರಯಾಣಮಾಡುತ್ತಿರಲು, ಬಂಗವಂಶದ ಜೈನರ ಅರಸನು ತನ್ನ ದೇವಾಲಯಕ್ಕೆ ಬಂದು ಅಲ್ಲಿನ ನವರತ್ನಮಯ ಬುದ್ಧದೇವರುಗಳನ್ನು ನೋಡಿಹೋಗಬೇಕೆಂದು ನಿರ್ಬಂಧಿಸಿದನು. ಮುನಿವರರು "ನಾವು ನೋಡಬಂದರೆ ನಿಮ್ಮ ಬುದ್ಧನು ನಮ್ಮವನಾದಾನು. ಕಡೆಗೆ ನೀವು ಪಶ್ಚಾತ್ತಾಪ ಪಡಬಹುದೆಂ"ದರು. ಆದರೂ ಆತನು ಕೇಳದಿರಲು, ಶ್ರೀಗಳವರು ದೇವಾಲಯದೊಳಗೆ ಹೋಗಿ ನವರತ್ನಗಳ ಬಿಂಭತ್ತು

ಬುದ್ಧಪ್ರತಿಮೆಗಳನ್ನು ನೋಡಿದರು. ಒಂದು ಹಸುರುಕಲ್ಲಿನ ಪ್ರತಿಮೆಯು ಲಕ್ಷಣಶಾಸ್ತ್ರಕ್ಕೆ ಯುಕ್ತವಾಗಿರುವುದೆಂದು ನಿರ್ಣಯಿಸಿ, ಆ ಪ್ರತಿಮೆಯಲ್ಲಿ ವಿಟ್ಠಲ ಮೂರ್ತಿಯನ್ನು ಧ್ಯಾನಮಾಡಿದರು. ಆಗಲಾಪ್ರತಿಮೆಯು ಬುದ್ಧರೂಪವನ್ನು ಬಿಟ್ಟು, ಒಂದುಕೈಯಲ್ಲಿ ಶಂಖವನ್ನು ಹಿಡಿದು, ಇನ್ನೊಂದು ಕೈಯನ್ನು ಸೊಂಟದಲ್ಲಿಟ್ಟುಕೊಂಡ ವಿಟ್ಠಲನ ಆಕಾರವನ್ನು ತಾಳಿತು. ಈ ಚಮತ್ಕಾರವನ್ನು ಅರಸನಿಗೆ ತೋರಿಸಲು ಸಂತುಷ್ಟನಾಗಿ ಆತನು ಶ್ರೀಗಳವರಿಗೆ ಆ ಮೂರ್ತಿಯನ್ನು ಸಮರ್ಪಿಸಿದನು. **ಪಚ್ಚೆ ವಿಟ್ಠಲ**ನೆಂಬ ಆಪ್ರತೀಕವು ಈಗಲೂ ಸೋದಾಮಠದಲ್ಲಿರುತ್ತದೆ.

ಶ್ರೀಗಳವರು ಧರ್ಮಸ್ಥಳದ ಹತ್ತಿರ ಪ್ರಯಾಣಮಾಡುತ್ತಿರಲು, ಆ ಸ್ಥಳದ ಅಧಿಪತಿಯು ಬಂದು, ಈದಿನ ಇಲ್ಲಿ ದೇವರಪೂಜೆಯಾಗಬೇಕೆಂದು ಬೇಡಿದನು. ಶ್ರೀಗಳವರು ಆಸ್ಥಳವು ಭೂತಾಲಯವಾದುದರಿಂದ ದೇವರಪೂಜೆಗೆ ಅಯುಕ್ತಸ್ಥಳವೆಂದು ಒಪ್ಪಲಿಲ್ಲ. ಆತನು ಬಹು ವಿನಯದಿಂದ ಮತ್ತೂ ನಿರ್ಬಂಧಿಸಲು, ಭೂತರಾಜರ ಮೂಲಕವಾಗಿ ಕದಿರೆ ದೇವಾಲಯದ ಮಂಜುನಾಥ ದೇವರನ್ನು ತರಿಸಿ, ಅಲ್ಲಿ ಯಂತ್ರೋದ್ಧಾರ ಮಾಡಿ, ಆ ದೇವರನ್ನು ಪ್ರತಿಷ್ಠೆಮಾಡಿ, ಭೂತರಾಜರನ್ನು ಒಂದಂಶದಲ್ಲಿ ಅಲ್ಲಿರುವಂತೆ ಆಜ್ಞೆಯಿತ್ತು, ದೇವರಪೂಜೆಯನ್ನು ಆ ದಿನ ಅಲ್ಲಿಯೇ ನೆರವೇರಿಸಿ, ಆ ದೇವಾಲಯದಲ್ಲಿ ನಿರಂತರ ಬ್ರಾಹ್ಮಣ ಭೋಜನಾದಿ ಧರ್ಮಗಳು ಚೆನ್ನಾಗಿ ನಡಿಸುವಂತೆ ಆ ಸ್ಥಳಾಧಿಪತಿಗೆ ಅಪ್ಪಣೆಮಾಡಿ, ಅನುಗ್ರಹಿಸಿ ಮುಂದಕ್ಕೆ ಪ್ರಯಾಣಮಾಡಿದರು.

ಕುಮಾರಧಾರಾ ನೇತ್ರಾವತೀನದಿಗಳ ಸಂಗಮದ ಹತ್ತಿರ ನಾನ್ತೂರು ಅಗ್ರಹಾರಕ್ಕೆ ಸೇರಿದ ಕಟಿಶಿವಾಲಯವೆಂಬ ಸ್ಥಳವಿದೆ. ಈ ಸ್ಥಳದಲ್ಲಿ ಶ್ರೀ ವಾದಿರಾಜರು ಸಂಚಾರಕ್ಕೆ ಬಂದಿದ್ದರು. ಆಗ ನದೀಸ್ನಾನಕ್ಕೆ ಬಂದವರು ಆ ಪ್ರದೇಶಗಳಲ್ಲಿ ಅಲ್ಲಲ್ಲಿ ಉದ್ಭವಿಸಿದ ಸಹಸ್ರಲಿಂಗಗಳಿಗೆ ಅಭಿಷೇಕ ಮಾಡಿಸಬೇಕೆಂದು ಆ ಸ್ಥಳಾಧಿಪತಿಗೆ ಹೇಳಿದರು. ಅದಕ್ಕವನು ಎತ್ತರವಾದ ಸ್ಥಳದಲ್ಲಿ ಅಲ್ಲಲ್ಲಿ ಉದಿಸಿದ ಲಿಂಗಗಳಿಗೆ ನೀರು ತರುವುದು ಹೇಗೆ? ಈ ಕಾರ್ಯವು ಮನುಷ್ಯರಿಗೆ ಸಾಧ್ಯವಾದುದಲ್ಲ"ವೆನ್ನಲು, ಯತಿಶ್ರೇಷ್ಠರು

ನಕ್ಕು "ಹಾಗಾದರೆ ನಾನು ಅಭಿಷೇಕ ಮಾಡುವೆನು. ನೋಡೆ"ಂದು ಹೇಳಿ, ತನ್ನ ದಂಡದಿಂದ ಹೊಳೆಯ ನೀರುಬರುವಂತೆ ಚಿಕ್ಕದೊಂದು ರೇಖೆಯನ್ನು ಬರೆದರು. ಕೂಡಲೆ ಆ ರೇಖಾಮಾರ್ಗವಾಗಿ ನೀರು ತುಂಬಿ ಮಹಾಪ್ರವಾಹವು ಆ ಸ್ಥಳಗಳಲ್ಲಿ ತುಂಬಿತು. ಕಡೆಗೆ ಆ ಗ್ರಾಮದ ಮೇಲೂ ಪ್ರವಾಹವು ಬರಲಾರಂಭಿಸಿತು. ಮಳೆಯ ಸುದ್ದಿಯೂ ಇಲ್ಲದಿದ್ದರೂ ಅಕಸ್ಮಾತ್ತಾಗಿ ಪ್ರವಾಹ ಬರಲು ಕಾರಣವೇನೆಂದು ಎಲ್ಲರೂ ಬೆರಗಾದರು. ಕಡೆಗೆ ಎಲ್ಲರೂ ಸೇರಿ ಗುರುಗಳಿಗೆರಗಿ ತಮ್ಮ ಗ್ರಾಮವನ್ನು ಉಳಿಸಿಕೊಡಬೇಕೆಂದು ಬೇಡಿದರು. ಶ್ರೀಗಳವರು ಕನಿಕರದಿಂದ ಆ ಜನರಿಗೆ ಅಭಯ ದಾನಮಾಡಿ, ಆ ನೀರು ಹಿಂದಕ್ಕೆ ಹೋಗುವಂತೆ ಮಾಡಿ, ಆ ಸ್ಥಳಕ್ಕೆ ದಂಡತೀರ್ಥವೆಂದು ಹೆಸರಿಟ್ಟರು. ಸ್ಥಳದ ಯಜಮಾನನು ಆಶ್ಚರ್ಯ ಸಂತೋಷ ಪರಾಧೀನನಾಗಿ ದೇವರಿಗೆ ಆ ಸ್ಥಳವನ್ನು ದಾನಮಾಡಿದನು. ಈಗಲೂ ಪುಂಡಿಬೈಲು ಎಂಬಾಸ್ಥಳವು ಸೋದಾಮಠದ್ದಾಗಿರುತ್ತದೆ.

ಶ್ರೀವಾದಿರಾಜರು ಸುಬ್ರಹ್ಮಣ್ಯ ಕಡ್ತಿಲ ಸಪ್ಟಂತಾದಿ ಕಣ್ವತೀರ್ಥ ಮೊದಲಾದ ಪುಣ್ಯಕ್ಷೇತ್ರಗಳನ್ನು ಸೇವಿಸುತ್ತ ಪರ್ಯಾಯಕಾಲವು ಬರಲು ಶ್ರೀರೂಪ್ಯಪೀಠಕ್ಕೆ ಬಂದು ಶ್ರೀಕೃಷ್ಣನಿಗೆ ಪರ್ಯಾಯೋತ್ಸವವನ್ನು ಮಹಾವಿಜೃಂಭಣೆಯಿಂದ ನಡಿಸಿದರು.

ಶ್ರೀಮಧ್ವಾಚಾರ್ಯರು ಎಂಟುಮಂದಿ ಶ್ರೀಗಳವರಿಗೂ ಎರಡೆರಡು ತಿಂಗಳಿಗೊಮ್ಮೆ ಶ್ರೀಕೃಷ್ಣನ ಪೂಜೆಯನ್ನು ಮಾಡುವಂತೆಯೂ, ಶ್ರೀಕೃಷ್ಣ ಪೂಜಾವಿನಿಯೋಗದ ಸಲುವಾಗಿ ಶ್ರೀಪದ್ಮನಾಭತೀರ್ಥ ಯತಿಗಳವರ ಪರಂಪರೆಯವರು ದ್ರವ್ಯವನ್ನು ಸಂಪಾದಿಸಿ ಕಳುಹಿಸಬೇಕೆಂದು ನಿರ್ಣಯಿಸಿದ್ದರೂ, ಕಾಲಕ್ರಮೇಣ ಆ ದ್ರವ್ಯಸಾಹಾಯ್ಯವು ಕಡಿಮೆಯಾಗಿ ಶ್ರೀಕೃಷ್ಣಪೂಜೆಗೆ ಬಹು ಕಷ್ಟವಾಗಿದ್ದಿತು. ಅಷ್ಟಮಠೀಯ ಯತಿಗಳವರಿಗೆ ಚಿಕ್ಕ ಪಟ್ಟದಲ್ಲಿ ದಿಗ್ವಿಜಯಮಾಡಬಹುದಾಗಿದ್ದಿತಲ್ಲದೆ ಮುಖ್ಯ ಪಟ್ಟಕ್ಕೆ ಬಂದಮೇಲೆ ಶ್ರೀಕೃಷ್ಣಪೂಜೆಯನ್ನು ಬಿಡಲಿಕ್ಕಾಗದೆ ದ್ರವ್ಯಾರ್ಜನೆ ಮಾಡಲು ಅನುಕೂಲವಾಗುತ್ತಿದ್ದಿಲ್ಲ. ಈ ಸಂಕಷ್ಟವನ್ನು ಪರಿಹರಿಸ

ಬೇಕೆಂದು ಶ್ರೀವಾದಿರಾಜರು ತನ್ನ ಪರ್ಯಾಯದ ಮೊದಲೇ "ಒಬ್ಬೊಬ್ಬರು ಎರಡೆರಡು ವರ್ಷಗಳಲ್ಲಿ ಶ್ರೀಕೃಷ್ಣಪರ್ಯಾಯ ಪೂಜೆಯನ್ನು ನಡಿಸಬೇಕು. ಉಳಿದವರು ಕಡ್ತಿಲ ಸಿದ್ಧಾಂತಾದಿಗಳಲ್ಲಿ ವ್ಯಾಸಪೂಜೆಯನ್ನು ನಡಿಸಿದ ಮೇಲೆ ದೇಶಗಳಲ್ಲಿ ಸಂಚರಿಸುತ್ತಾ ಶ್ರೀಮಧ್ವಮತವನ್ನು ವೃದ್ಧಿಗೊಳಿಸುತ್ತಾ ತಂತಮ್ಮ ಶ್ರೀಕೃಷ್ಣಪರ್ಯಾಯ ಪೂಜೆಗೆ ದ್ರವ್ಯಾರ್ಜನೆಯನ್ನು ಮಾಡಬೇಕು" ಎಂದು ನಿರ್ಣಯಿಸಲು, ಎಲ್ಲ ಶ್ರೀಪಾದಂಗಳವರೂ ಅದನ್ನು ಒಪ್ಪಿದರು. ಪ್ರತಿಯೊಂದು ಮಠದವರಿಗೂ ಪ್ರತ್ಯೇಕ ಪ್ರತ್ಯೇಕ ಮಠಗಳನ್ನೂ, ಆ ಮಠಗಳಲ್ಲಿ ಪೂಜಾವಿನಿಯೋಗಕ್ಕಾಗಿ ಪ್ರತ್ಯೇಕವಾಗಿ ಜಮಾಸುಗಳನ್ನೂ ಭಕ್ತರ ಸಾಹಾಯ್ಯದಿಂದ ಏರ್ಪಡಿಸಿದ್ದರು.

ಶ್ರೀವಾದಿರಾಜರ ಅಪ್ಪಣೆಯನ್ನು ಸ್ಮರಿಸಿಕೊಂಡು ಅವರ ಪರ್ಯಾಯಕಾಲದಲ್ಲಿ ಅಚ್ಯುತರಾಯ ಕೃಷ್ಣರಾಯರು ಉಡುಪಿಗೆ ಬಂದು, ಶ್ರೀಗಳವರಿಗೆ ವಂದಿಸಿದರು. ಆಗ ಯತಿವರರು ಪರಮಾನಂದದಿಂದ ಅವರನ್ನಾದರಿಸಿ, ಅವರ ಕೈಯಿಂದ ಶ್ರೀಮದನಂತೇಶ್ವರ ದೇವಸ್ಥಾನವನ್ನು ಶಿಲಾಮಯವಾಗಿ ಜೀರ್ಣೋದ್ಧಾರ ಮಾಡಿಸಿ, ಶ್ರೀಮಧ್ವಸರೋವರಕ್ಕೆ ನಾಲ್ಕು ಪಾರ್ಶ್ವಗಳಲ್ಲಿಯೂ ಕಲ್ಲುಗಳಿಂದ ಮೆಟ್ಟಲುಗಳನ್ನು ಕಟ್ಟಿಸಿದರು. ಆ ಸೇವೆಗೆ ತಕ್ಕ ಫಲವನ್ನು ಶ್ರೀಕೃಷ್ಣನು ಕೊಡುವಂತೆ ಅವರಿಗೆ ಅನುಗ್ರಹಿಸಿ ಸ್ವದೇಶಕ್ಕೆ ಕಳುಹಿಸಿದರೆಂದು ಐತಿಹ್ಯವಿದೆ. ಶ್ರೀಕೃಷ್ಣ ಮಠವನ್ನು ತಾವು ಜೀರ್ಣೋದ್ಧಾರ ಮಾಡಿಸಿದರು.

ವಿದೇಶ ಸಂಚಾರದಲ್ಲಿ ತಂದಿದ್ದ ಅಯೋಧ್ಯೆಯ ದ್ವಾರದ ಶ್ರೀಮುಖ್ಯಪ್ರಾಣ ಗರುಡ ಪ್ರತೀಕಗಳನ್ನು ಶ್ರೀಕೃಷ್ಣನ ವಾಯುವ್ಯ ನೈಋತ್ಯ ಭಾಗಗಳಲ್ಲಿ ಪ್ರತಿಷ್ಠೆ ಮಾಡಿದರು. ಶ್ರೀಕೃಷ್ಣ ಮಠದ ಉತ್ತರದ್ವಾರದಲ್ಲಿ ಶ್ರೀಮಧ್ವಪ್ರತಿಮೆಯನ್ನೂ ಪ್ರತಿಷ್ಠೆ ಮಾಡಿದರು. ಶ್ರೀಪಾಜಕಕ್ಷೇತ್ರದಲ್ಲಿಯೂ ಶ್ರೀಮಧ್ವಪಾದ ಸನ್ನಿಧಿಯಲ್ಲಿ ಶ್ರೀಮಧ್ವಪ್ರತೀಕವನ್ನು ಪ್ರತಿಷ್ಠೆ ಮಾಡಿದರು. ಡಿಲ್ಲಿ (ದೇಹಲಿ)ಯ ರಾಜನು ಕಳುಹಿಸಿದ ನಾಣ್ಯಗಳಿಂದ ಶ್ರೀಕೃಷ್ಣದೇವಾಲಯದ ಮಾಡಿಗೆ ಬಂಗಾರದ ತಗಡು ಮುಚ್ಚಿಸಬೇಕೆಂದು ಉದ್ಯೋಗಿಸುತ್ತಿರಲು, "ಈ ಕಲಿಯುಗದಲ್ಲಿ ಚಿನ್ನವನ್ನು ಮುಚ್ಚಿ

ಸುವ ಯೋಜನೆ ಬೇಡ"ವೆಂದು ಸ್ಪಷ್ಟವಾದ ಕಾರಣ ಆ ತಗಡುಗಳನ್ನು ಕೃಷ್ಣಮಠದ ಉತ್ತರಭಾಗದಲ್ಲಿ ಭೂಗತವಾಡಿ, ಕಲ್ಲುಮರಿಗೆ ಮುಚ್ಚಿಸಿ, ಅದರ ರಕ್ಷಣೆಗಾಗಿ ನಾಗಪ್ರತಿಷ್ಠೆ ಮಾಡಿದರು. ಈಗಲೂ ಆ ಸರ್ಪಗುಡಿಯು ಉಡುಪಿಯಲ್ಲಿದೆ. ಮಿಕ್ಕುಳಿದ ನಾಣ್ಯಗಳನ್ನು ಉಡುಪಿಯ ತನ್ನ ಮಠದೊಳಗೆ ಇಟ್ಟು ಅದರ ಮೇಲೆ ಭೂತರಾಜರನ್ನು ಪ್ರತಿಷ್ಠೆ ಮಾಡಿದರು.

ಒಂದು ದಿನ ಏಕಾದಶೀ ತಿಥಿಯಲ್ಲಿ ಅಲಂಕಾರಪೂಜೆಯ ತನಕ ಮಾಡಿ, ಧ್ಯಾನಿಸುತ್ತ ಮಾನಸಪೂಜೆಯನ್ನು ಮಾಡುತ್ತಾ ಕುಳಿತ ಶ್ರೀಗಳವರು ರಾತ್ರಿಕಳೆದು ಹೋದುದನ್ನೂ ತಿಳಿಯಲಿಲ್ಲ. ಕಡೆಗೆ ಧ್ಯಾನವನ್ನು ಮುಗಿಸಿನೋಡುವಾಗ ಸಾಧನದ್ವಾದಶೀಪೂಜಾಕಾಲವು ಒದಗಿರಲು, ಫಲಸಮರ್ಪಣೆಯಿಂದ ಅಂದಿನ ಪೂಜೆಯನ್ನು ಮುಗಿಸಿ, ಸ್ನಾನಾದಿಗಳನ್ನಾಚರಿಸಿ, ದ್ವಾದಶೀ ಪೂಜಾದಿಗಳನ್ನು ಮಾಡಿದರು. ಅಂದಿನಿಂದ ಆ ಮಠದಲ್ಲಿ ಏಕಾದಶೀದಿನದಲ್ಲಿ ಅಲಂಕಾರವಾದೊಡನೆ ಫಲಸಮರ್ಪಣೆ ಮಾತ್ರ ಮಾಡುವ ಸಂಪ್ರದಾಯವಿದೆ.

ಕೋಟಗ್ರಾಮದಬ್ರಾಹ್ಮಣರಿಗೂ ಕೋಟೇಶ್ವರದ ಬ್ರಾಹ್ಮಣರಿಗೂ ಗ್ರಾಮಗಡಿಯ ವಿವಾದವು ತಲೆದೋರಿ ಕೋಟೇಶ್ವರದವರನ್ನು ಕೋಟಗ್ರಾಮದವರು ಮಿಥ್ಯಾವಾದಿಗಳಂತೆ ಕಟ್ಟುಮಾಡಿ ಬಿಡಲು, ಅವರು ಶ್ರೀವಾದಿರಾಜರನ್ನು ಬಹು ದುಃಖದಿಂದ ಮರೆಹೊಕ್ಕರು. ಶ್ರೀಗಳವರು ಅವರಿಗೆ ವಿಧಿಪುರಸ್ಸರವಾಗಿ ತಪ್ತಮುದ್ರಾಧಾರಣ ಮಾಡಿಸಿ, ಅವರನ್ನು ಪುನೀತರನ್ನಾಗಿ ಮಾಡಿ, ತಿರುಗಿ ಆ ಗ್ರಾಮಸ್ಥರು ಕೂಡಿಕೊಳ್ಳುವಂತೆ ಅನುಗ್ರಹಿಸಿದರು. ಅಂದಿನಿಂದ ಕೋಟೇಶ್ವರದ ಬ್ರಾಹ್ಮಣರು ಸೋದೇಮಠದ ಶಿಷ್ಯರಾಗಿರುತ್ತಾರೆ. ಈ ಕಥೆಯು ಸಹ್ಯಾದ್ರಿಖಂಡ ಗ್ರಾಮಪದ್ಧತಿಯಲ್ಲಿದೆ.

ಶ್ರೀವಾದಿರಾಜರಲ್ಲಿ ಕೆಲವರು ಸ್ವಮತದವರೂ ಪರಮತದವರೂ ವಿದ್ಯಾಸಂಬಂಧ ಮತ್ಸರದಿಂದ ಶ್ರೀಗಳವರ ಮೇಲೆ ಅಪವಾದ ಹೊರಿಸಬೇಕೆಂದು ಆಲೋಚಿಸಿ, ಅವರ ಸೇವಕನಾದೊಬ್ಬ ಹುಡುಗನನ್ನು ಕೊಲ್ಲೂರಲ್ಲಿ ಅಡಗಿಸಿಟ್ಟು, ಶ್ರೀವಾದಿರಾಜರು ಆ ಹುಡುಗನನ್ನು ಕೊಲ್ಲಿಸಿದರೆಂದು ತಾವೇ ಅಲ್ಲಲ್ಲಿ ಸುಳ್ಳುವಾರ್ತೆಯನ್ನು ಪ್ರಕಟಿಸುತ್ತಿದ್ದರು. ಇದನ್ನು ಕೇಳಿ

ಯತಿವರರು 'ಇದಕ್ಕೆ ಕೊಲ್ಲೂರು ಮೂಕಾಂಬಿಕೆಯೇ ಸಾಕ್ಷಿಯಾಗಿರುತ್ತಾ"ಳೆಂದು ಹೇಳಿ ಸುಮ್ಮನಿದ್ದರು. ಅಂದಿನಿಂದ ಆ ಹುಡುಗನಿಗೆ ರಾತ್ರಿಯಲ್ಲಿ ಚಿಕ್ಕ ಹುಡುಗಿಯು ಬಂದು ಕುದುರೆ ಚಮ್ಮಟಿಯಿಂದ ಹೊಡೆದು ಶ್ರೀಗಳವರ ಬಳಿಗೆ ಹೋಗಬೇಕೆಂದು ಹೆದರಿಸಿದಂತಾಗುತಿತ್ತು. ಹುಡುಗನು ಹೆದರಿ, ಅಪವಾದ ಹೊರಿಸಿದವರ ಮುಂದುಗಡೆ ಓಡಿಬಂದು, ಶ್ರೀವಾದಿರಾಜರ ಪಾದಕ್ಕೆರಗಿ, ಎಲ್ಲ ಸಂಗತಿಯನ್ನು ಅರುಹಿ ನಿಂದಕರ ಮುಖಕ್ಕೆ ಕಪ್ಪು ಹಚ್ಚಿದನು. ಈ ಕಥೆಯು—"ಮೂಕಾಂಬಿಕಾ ಕೃಪಾಲೋಕಾದಾಕಾಂಕ್ಷಿತಫಲಪ್ರದಾ | ಮೂಕಾನಕೃತ ಮೇ ಶತ್ರೂನೇಕಾಂತಿಕಜನಪ್ರಿಯಾ ||" ಎಂಬ ತೀರ್ಥಪ್ರಬಂಧದ ಪದ್ಯದಲ್ಲಿ ಶ್ರೀವಾದಿರಾಜರಿಂದಲೆ ಹೇಳಲ್ಪಟ್ಟಿದೆ.

ಶ್ರೀಗಳವರು ಉಡುಪಿಯಿಂದ ೮ ಮೈಲು ದಕ್ಷಿಣವಾದ ಉಂಡಾರೆಂಬ ಗ್ರಾಮದಲ್ಲಿ ವಾಸಮಾಡುತ್ತಿದ್ದಾಗ ರಾಮಕೃಷ್ಣಪ್ರಭುಯೆಂಬ ಗ್ರಾಮಾಧಿಪತಿಯು ಸ್ವಾಮಿಗಳನ್ನು ಹೊಡೆದು ಮಠವನ್ನು ಸುಲಿಗೆ ಮಾಡಬೇಕೆಂದು ಅನೇಕ ಜನರಿಂದೊಡಗೂಡಿ ಮಠಕ್ಕೆ ಮುತ್ತಿಗೆಹಾಕಿದನು. ಆಗ ದಂಡವನ್ನು ಹಿಡಿದುಕೊಂಡು ಶ್ರೀಗಳವರು ಅವರೆದುರಿನಲ್ಲಿಯೇ ಹೋಗುತ್ತಿದ್ದುದನ್ನು ನೋಡದೆ ಶ್ರೀಗಳವರು ಮಠದೊಳಗಿಲ್ಲವೆಂದು ಭ್ರಾಂತಿಗೊಂಡು ಹಿಂದೆ ತಿರುಗಿದರು. ಕ್ರಿ. ಶ 1614ರಲ್ಲಿ ಶ್ರೀವೇದವೇದ್ಯರ ಪರ್ಯಾಯದಲ್ಲಿ ಚಿನ್ನಭಂಡಾರ ರಾಮಕೃಷ್ಣಪ್ರಭುವು ಶ್ರೀಕೃಷ್ಣದೇವರಿಗೆ ಉಂಬಳಿಬಿಟ್ಟನೆಂದು ಶ್ರೀಕೃಷ್ಣಮಠದ ಶಿಲಾಶಾಸನದಲ್ಲಿದೆ. ಇದರಿಂದ ಈತನೇ ಅವನಿರಬಹುದೆಂದು ಊಹಿಸಬಹುದು. ಶತ್ರುಪ್ರೇರಿತರಾದ ನೂರಾರು ಮಂದಿ ಭಟರು ಮಠವನ್ನು ನಾಶಗೊಳಿಸಬೇಕೆಂದು ರಾತ್ರಿಯಲ್ಲಿ ಬಂದು ಬೆಳಗಿನ ವರೆಗೆ ಸುತ್ತಿಸುತ್ತಿ ಮಠದ ಬಾಗಿಲನ್ನೇ ಕಾಣದೆ ಬೇಸತ್ತು ಹೊರಟುಹೋದರು.

ಒಬ್ಬ ಸ್ವರ್ಣಕಾರ(ನೊನ್ನೆಗಾರ)ನು ಒಂದು ಗಣಪತಿಪ್ರತಿಮೆಯನ್ನು ಪಂಚಲೋಹದಿಂದ ಮಾಡಲೆಳಸಿ, ಕರಗಿಸಿ ಹೊಯ್ದನು. ಅಕಸ್ಮಾತ್ತಾಗಿ ಅದು ಕುದುರೆಮುಖದ ಹಯಗ್ರೀವನ ಪ್ರತಿಮೆಯಾಯಿತು. ಆ ಕೆಲಸ

ಗಾರನು ಆಶ್ಚರ್ಯವ್ಯಸನಗಳಿಂದ ಎರಡು ಮೂರು ದಿನಗಳಲ್ಲಿ ಬಿಸಿ ತಣಿದ ಮೇಲೆ ಮರಳಿ ಹೊಯ್ಯಬೇಕೆಂದು ಮೂಲೆಯಲ್ಲಿಟ್ಟನು. ಮೂರು ದಿವಸವಾದರೂ ಈಗ ಕಾಸಿದಂತೆ ಅತಿ ಬಿಸಿಯಾಗಿಯೇ ಇದ್ದಿತು. ಅದನ್ನು ಕಂಡು ಅವನು ಬೆರಗಾದನು. ಹೇಗಾದರೂ ಮಾಡಿ ಅದನ್ನು ಒಡೆದು ಬೇರೆ ಮಾಡಬೇಕೆಂದು ದೊಡ್ಡ ಸುತ್ತಿಗೆಯಿಂದ ಎಷ್ಟೆಷ್ಟು ಹೊಡೆದರೂ ಒಡೆಯದಿರಲು, ಕೈಸೋತು ಬದಿಯಲ್ಲಿ ಬಿಸುಟನು. ಅಂದಿನ ರಾತ್ರಿಯಲ್ಲಿ ಸ್ವಪ್ನದೊಳಗೆ ಬ್ರಾಹ್ಮಣನು ಬಂದು "ಮೂರ್ಖನೇ! ದೇವತಾಸನ್ನಿಧಾನಯುಕ್ತವಾದ ಪ್ರತಿಮೆಯನ್ನು ಬಡಿದು ಬಡಿದೇಕೆ ನೊಂದುಕೊಳ್ಳುವೆ? ನಾಳೆ ಯತಿವರರೊಬ್ಬರು ಆ ಮೂರ್ತಿಯನ್ನು ಬಯಸುವರು. ಅವರಿಗೆ ಕೊಟ್ಟುಬಿಡು" ಎಂದು ಬೋಧಿಸಿದಂತಾಯಿತು. ಶ್ರೀವಾದಿರಾಜರಿಗೂ ಅದರಂತೆ "ವತ್ಸ! ನಿನ್ನ ಭಕ್ತಿಯುಕ್ತವಾದ ಪೂಜೆಯನ್ನು ಕೈಗೊಳ್ಳಲು ಕರಚರಣಾದಿ ಸರ್ವಾಂಗಸುಂದರವಾದ ಮೂರ್ತಿಯನ್ನು ನಾನೇ ಧರಿಸಿಕೊಂಡೆನು. ಆದರೆ ಕಸಬಲ್ಲಾವಾಸವೂ, ಸುತ್ತಿಗೆಯ ಹೊಡೆತವೂ ನನಗೀಗ ಪೂಜೆಯಾಗಿದೆ. ಬೇಗನೆ ಕರೆದುಕೊಳ್ಳಬಾರದೇ?" ಎಂದು ಸ್ವಪ್ನವಾಗಲು ಶ್ರೀಗಳವರು ಧ್ಯಾನದಿಂದ ಮೂರ್ತಿಯಿರುವ ಸ್ಥಳವನ್ನರಿತು, ಪ್ರಾತಃಕಾಲದಲ್ಲಿಯೇ ಆತನ ಬಳಿಗೆ ತಾನೇ ಹೋಗಿ ಅದನ್ನು ಕೇಳಿದರು. ಆತನು ನಡುಗುತ್ತ ಬೇಗನೇ ಆಮೂರ್ತಿಯನ್ನು ಕೊಟ್ಟು, ತನ್ನ ತಪ್ಪನ್ನು ಮನ್ನಿಸಿ ಕಾಪಾಡಬೇಕೆಂದು ಬೇಡಿದನು. ಶ್ರೀಗಳವರು ಅವನಿಗೆ ಅನುಗ್ರಹಿಸಿ ಸರಿಪಡಿಸಬೇಕಾದ ಅಂಶವನ್ನು ಅರದಿಂದ ತಾವೇ ಉಜ್ಜಿ, ಮಹಾಭಿಷೇಕಾದಿಗಳಿಂದ ಶುದ್ಧಿಮಾಡಿ, ನಿತ್ಯದಲ್ಲಿಯೂ ರಾಜೋಪಚಾರಗಳಿಂದಲೂ, ಐದು ಸೇರಿಗೆ ಕಡಿಮೆಯಾಗದಂತೆ ದಿವ್ಯವಾದ ಕಡಲೆ ಮಡ್ಡಿ ಮೊದಲಾದ ಭಕ್ಷ್ಯವಿಶೇಷಗಳಿಂದಲೂ, ಶ್ರೀಹಯಗ್ರೀವನನ್ನು ಪೂಜಿಸುತ್ತಿದ್ದರು. ಆ ಮೇಲೆ ಸ್ವರ್ಣಕಾರಜಾತಿಯವರು ಶ್ರೀವಾದಿರಾಜರ ಶಿಷ್ಯರಾಗಿ, ಶ್ರೀಹಯಗ್ರೀವನನ್ನೇ ತಮ್ಮ ಕುಲದೇವತೆ ಎಂದು ನಂಬಿ, ಗುರುಗಳಿಗೆ ಕಾಣಿಕೆಯನ್ನರ್ಪಿಸುತ್ತಾ ಮೂರುವರ್ಷಕ್ಕೊಮ್ಮೆ ಮುದ್ರಾಧಾರಣ ಮಾಡಿಸಿಕೊಂಡು, ಸೋದಾಮಠಕ್ಕೆ ಅನುವ್ರತರಾಗಿರುತ್ತೇವೆ ಎಂದು

ತಾಂಬ್ರಶಾಸನ ಬರೆದುಕೊಟ್ಟರು. ಆ ಜಾತಿಯವರೆಲ್ಲರೂ ಈಗಲೂ ಆ ಮಠದ ಶಿಷ್ಯರಾಗಿರುತ್ತಾರೆ.

ಶ್ರೀಗುರುರಾಜರು ನಿತ್ಯದಲ್ಲಿಯೂ ಪೂಜೆಯ ಸಮಯದಲ್ಲಿ ಬಾಗಿಲು ಮುಚ್ಚಿ, ಸಕ್ಕರೆಮಡ್ಡಿಯನ್ನು ಚಿನ್ನದ ಹರಿವಾಣದಲ್ಲಿಟ್ಟು, ತಲೆಯಲ್ಲಿ ಎತ್ತಿಹಿಡಿದ ಕೂಡಲೆ, ಶ್ರೀಹಯಗ್ರೀವನು ಬಿಳಿಕುದುರೆಯ ರೂಪದಿಂದ ಅವರ ಬೆನ್ನಿಗೆ ಹಾರಿ, ಎರಡು ಕಾಲುಗಳನ್ನು ಅವರ ಕುತ್ತಿಗೆಗೆ ಇಟ್ಟು, ಆ ಭಕ್ಷ್ಯವನ್ನು ತಿಂದು, ಕುದುರೆಯ ಸ್ವಭಾವದಂತೆ ಸ್ವಲ್ಪಕಾಲದಲ್ಲಿ ಅವರೊಡನೆ ಆಟವಾಡಿ, ತನ್ನ ಮುಖವನ್ನು ಅವರ ಮೈಗೆ ಪರಸಿ, ಉಪಾಸನಾ ಮೂರ್ತಿಯಲ್ಲಿ ಅಂತರ್ಧಾನವನ್ನು ಹೊಂದುತ್ತಿದ್ದನು. ಆ ಮೇಲೆ ಬಾಗಿಲು ತೆರದು ಶ್ರೀಗಳವರು ಪೂಜಿಸುತ್ತಿದ್ದರು. ಕಡೆಗೆ ಶ್ರೀಹಯಗ್ರೀವ ಪ್ರಸಾದವೆಂದು ಉಳಿದುದನ್ನು ತಾವೇ ಭಕ್ಷಿಸುತ್ತಿದ್ದರು. ಇದನ್ನು ನೋಡಿ ಕೆಲವು ಮತ್ಸರಿಗಳು ಹೇಗಾದರೂ ಈ ಮಹನೀಯರ ಕೀರ್ತಿಗೆ ಕಳಂಕವನ್ನು ತಂದೊಡ್ಡುವ ದುರಭಿಪ್ರಾಯದಿಂದ ಜನಸಮಾಜದಲ್ಲೆಲ್ಲ ಶ್ರೀಗಳವರ ಹಿಂದುಗಡೆ- "ಈ ವಾದಿರಾಜರು ಬಾಗಿಲು ಮುಚ್ಚಿ ಸಕ್ಕರೆ ಮಡ್ಡಿಯನ್ನು ತಾವೇ ತಿಂದು, ತನಗೆ ಪ್ರತ್ಯಕ್ಷನಾಗಿ ಹಯಗ್ರೀವನು ತಿನ್ನುತ್ತಾನೆಂದು ಸುಳ್ಳುವಾರ್ತೆಯಿಂದ ಜನರನ್ನು ವಂಚಿಸುತ್ತಾರೆ. ಈ ಕಲಿಯುಗದಲ್ಲಿ ದೇವರ ಪ್ರತ್ಯಕ್ಷದರ್ಶನವಾಗುವುದೆಂದರೆ ಚಿಕ್ಕನ ಕೋಡು ಕಂಡಂತೆಯೇ ಸರಿ" ಎಂದು ನಿಂದಿಸುತ್ತಿದ್ದರು. ಕಡೆಗೆ ಆ ದುಷ್ಟರೆಲ್ಲರೂ ಗುಟ್ಟಾಗಿ ಒಟ್ಟುಕೂಡಿ ಮಠದ ಚಿಕ್ಕ ಅಡಿಗೆಯವನನ್ನು ಹಣದಿಂದ ವಶಪಡಿಸಿ, ಆತನ ಮೂಲಕ ಆ ಭಕ್ಷ್ಯಕ್ಕೆ ವಿಷಹಾಕಿಸಿ, ಇಂದು ಶ್ರೀಗಳವರು ಅದನ್ನು ತಿಂದು ಯಮನ ಕಡೆ ಭಿಕ್ಷೆಗೆ ಸಿದ್ಧರಾಗುವರೆಂದು ಸಂತೋಷದಿಂದಿದ್ದರು. ಎಂದಿನಂತೆ ಯತಿವರೇಣ್ಯರು ಬಾಗಿಲು ಮುಚ್ಚಿ ಮಡ್ಡಿಯನ್ನು ಹರಿವಾಣದಲ್ಲಿಟ್ಟು ಸಮರ್ಪಿಸಲು, ಶ್ರೀಹಯಗ್ರೀವನು ಸ್ವಲ್ಪವೂ ಉಳಿಸದೆ ಅದನ್ನು ಪೂರ್ಣವಾಗಿ ತಿಂದು ದೂರದಲ್ಲಿ ನಿಂತಿದ್ದನು. ಮುನಿವರರು "ಶ್ರೀದೇವನು ನಿತ್ಯದಲ್ಲಾಚರಿಸುವ ಕ್ರೀಡೆಯನ್ನೇಕೆ ಆಚರಿಸುವುದಿಲ್ಲ? ಯಾವ ತಪ್ಪಿಗಾಗಿ ಸಿಟ್ಟುಗೊಂಡಿರಬಹುದು? ಬೆಳಗಾದ

ಸುಂದರಾಕೃತಿಯು ಇಂದು ಹಸುರಾಗಲು ಕಾರಣವೇನಿರಬಹುದು?" ಎಂದು ಧ್ಯಾನಿಸುತ್ತ ಆ ದುಷ್ಟರ ದುಷ್ಕೃತ್ಯವನ್ನು ತಿಳಿದು ಚಕಿತರಾಗಿ ಸಾಷ್ಟಾಂಗ ಪ್ರಣಾಮ ಮಾಡಿ, ತಿಳಿಯದೆ ವಿಷಮಿಶ್ರಿತ ಭಕ್ಷ್ಯವನ್ನು ನಿವೇದಿಸಿದ ತಪ್ಪನ್ನು ಕ್ಷಮಿಸಬೇಕೆಂದು ಆತನ ಪಾದದಲ್ಲಿ ಶಿರಸ್ಸನ್ನಿಟ್ಟು ಮರುಗಿದರು. ಆಗ ಹಯವದನನು "ವತ್ಸ! ನೀನೇಕೆ ಚಿಂತಿಸುವಿ? ನಿನ್ನ ತಪ್ಪೇನೂ ಇಲ್ಲ. ನಿನಗೆ ದೋಷ ಬರಬಾರದೆಂದೇ ಎಲ್ಲವನ್ನು ತಿಂದು ಬಿಟ್ಟೆನು. ವಿಷವನ್ನು ಹಾಕಿದವರೆಲ್ಲರೂ ನಾಳೆ ಮಧ್ಯಾಹ್ನದೊಳಗೆ ಯಮನ ಶಾಸನಕ್ಕೆ ಗುರಿಯಾಗುವರು. ನನ್ನ ದೇಹದ ಈ ಹಸುರುಬಣ್ಣವು ಹೋಗಿ ಮರಳಿ ಬಿಳಿಬಣ್ಣವು ಬರಬೇಕಾದರೆ ಉದಯಪುರ (ಉದ್ಯಾವರ) ದ ಪಾಪವಿನಾಶಿನೀ ಚಕ್ರತೀರ್ಥನದಿಯ ದಕ್ಷಿಣಭಾಗದಲ್ಲಿ ಮಟ್ಟು ಎಂಬ ಗ್ರಾಮವಿದೆ. ಅಲ್ಲಿ ಸ್ವಕರ್ಮಭ್ರಷ್ಟರಾದ ಬ್ರಾಹ್ಮಣರಿದ್ದಾರೆ, ಅವರನ್ನು ಶುದ್ಧೀಕರಿಸಿ, ಗುಳ್ಳ (ವೃಂತಾಕ)ದ ಬೀಜವನ್ನು ಕೊಟ್ಟು, ಅದನ್ನು ಬೆಳೆಯಿಸಲು ಸ್ಥಳವನ್ನು ಅಳತೆ ಮಾಡಿಕೊಟ್ಟು ಅಲ್ಲಿ ಬೆಳೆದ ಗುಳ್ಳದ ಕಾಯಿಯ ಶಾಕ (ಹುಳಿ) ವನ್ನು ಕೆಲ ದಿನಗಳಲ್ಲಿ ನನಗೆ ಸಮರ್ಪಿಸು. ಅದರಿಂದ ನನಗೆ ಈ ಹಸುರುಬಣ್ಣವು ಹೋಗುತ್ತದೆ. ಈ ಕಥೆಯ ಸ್ಮರಣೆಗಾಗಿ ಕಂಠದಲ್ಲಿ ಈ ಹಸುರುಬಣ್ಣವನ್ನು ಧರಿಸುವೆನು" ಎಂದಪ್ಪಣೆ ಕೊಟ್ಟು ಪ್ರತಿಮೆಯಲ್ಲಿ ಅಂತರ್ಹಿತನಾದನು. ಅದರಂತೆ ವಿಷದಾಯಿಗಳೆಲ್ಲರೂ ಯಮನ ಅತಿಥಿಗಳಾದರು. ಶ್ರೀಗಳವರು ಆ ಬ್ರಾಹ್ಮಣರನ್ನುದ್ಧರಿಸಿ, ಅವರು ತಂದುಕೊಟ್ಟ ಗುಳ್ಳದಿಂದ ಹುಳಿಯನ್ನು ಮಾಡಿಸಿ ಸಮರ್ಪಿಸಿದರು. ಶ್ರೀಹಯಗ್ರೀವನು ಅದರಿಂದ ಬಿಳಿಬಣ್ಣವನ್ನು ಧರಿಸಿದನು. ಆದರೆ ಕುತ್ತಿಗೆಯಲ್ಲಿ ಮಾತ್ರ ಹಸುರುಬಣ್ಣವು ನಿತ್ತದ್ದು ಈಗಲೂ ಪ್ರತ್ಯಕ್ಷವಾಗಿ ತೋರುವುದು.

ಶ್ರೀಮನ್ಮಧ್ವಾಚಾರ್ಯರು ನಸ್ಟಂತಾಡಿ (ಮಧ್ಯವಾಟ) ಮಠದಲ್ಲಿ ಅಷ್ಟಮಠದ ಶ್ರೀಪಾದಂಗಳವರಿಗೆ ಶ್ರೀವೇದವ್ಯಾಸ ಪೂಜೆಯು ಇರಬೇಕೆಂದು ಶ್ರೀವೇದವ್ಯಾಸದೇವರನ್ನು ಇಟ್ಟಿದ್ದರು. ಆ ಮೇಲೆ ಅಷ್ಟಮಠದವರೂ ಉಡುಪಿಯಲ್ಲಿ ತಮ್ಮ ಶ್ರೀಕೃಷ್ಣಪೂಜೆಯು ಅನ್ಯೋನ್ಯರ

ಪಾಲಿಗೆ ಬಂದಾಗ ಉಳಿದವರು ನಷ್ಟಂತಾಡಿ ಮಠದಲ್ಲಿ ವ್ಯಾಸಪೂಜೆ ಮಾಡುತ್ತಿದ್ದರು. ಹೀಗಿರಲು ಶ್ರೀಚಂದ್ರಿಕಾಚಾರ್ಯರೆಂದು ಪ್ರಖ್ಯಾತರಾದ ಪ್ರಹ್ಲಾದಾಂಶಸಂಭೂತರಾದ ಶ್ರೀವ್ಯಾಸರಾಯರು ಶ್ರೀಕೃಷ್ಣ ದರ್ಶನಕ್ಕೆ ಬಂದವರು ಮಧ್ಯವಾಟ ಮಠಕ್ಕೂ ಬಂದು, ತಾನು ವ್ಯಾಸ ಪೂಜೆ ಮಾಡುವ ಕಪಟದಿಂದ ಆ ವ್ಯಾಸಮೂರ್ತಿಯನ್ನು ತಮ್ಮ ದೇವರ ಪೆಟ್ಟಿಗೆಯಲ್ಲಿಟ್ಟು ತೆಗೆದುಕೊಂಡು ಹೋದರಂತೆ. ಆ ಮೇಲೆ ಅಷ್ಟಮಠದ ಶ್ರೀಗಳವರು ಅದನ್ನು ತಿಳಿದು, ಈ ವಿಷಯವನ್ನು ಶ್ರೀವಾದಿರಾಜರಿಗೆ ತಿಳುಹಿಸಿ, "ಶ್ರೀವ್ಯಾಸಮೂರ್ತಿಯಿಲ್ಲ. ನಿಶ್ಚಯವಾಗಿ ಚಂದ್ರಿಕಾಚಾರ್ಯರು ತೆಗೆದುಕೊಂಡು ಹೋದರು. ಅವರಿಂದ ಹಿಂದೆ ತರುವ ಬಗೆ ಹೇಗೆ?" ಎಂದೆಲ್ಲರೂ ಗೋಳಾಡಿದರು. ಆಗ ಶ್ರೀವಾದಿರಾಜರು "ಹೇಗಾದರೂ ಮಾಡಿ ನಾನು ತರಬಲ್ಲೆನು. ನನ್ನ ಶ್ರಮಕ್ಕೆ ತಕ್ಕ ಪ್ರತಿಫಲವೇನು?" ಎಂದು ಹೇಳಲು ಅಷ್ಟಮಠೀಯ ಶ್ರೀಗಳೆಲ್ಲವರೂ ಸೇರಿ, ಶ್ರೀಮಧ್ಯವಾಟ ಮಠವೂ, ಅಲ್ಲಿನ ಶ್ರೀವ್ಯಾಸದೇವರೂ ಶ್ರೀವಾದಿರಾಜರ ಮಠಕ್ಕೆ ಸೇರಬೇಕು. ತಮಗೆ ಅದರಲ್ಲಿ ಅಧಿಕಾರವಿಲ್ಲೆಂದು ತಾಂಬ್ರಶಾಸನ ಬರಿಸಿ ಕೊಟ್ಟರು. ಕೂಡಲೆ ಶ್ರೀಗುರುರಾಜರು ಶ್ರೀವ್ಯಾಸರಾಯರ ಶಿಷ್ಯರಾಗಿ ಅನೇಕ ಗ್ರಂಥಗಳನ್ನು ವ್ಯಾಸಂಗಮಾಡುವನೆವದಿಂದ ಅವರ ಬಳಿವಾಸ ಮಾಡಿದರು.

ನಾರಳವೆಂಬ ಗ್ರಾಮದ ನಾರಾಯಣಾಚಾರ್ಯರೆಂಬವರು ನಮ್ಮ ಕಥಾನಾಯಕರನ್ನು ಸೇವೆಮಾಡುತ್ತಲಿದ್ದರು. ಒಂದು ಸಾಧನದ್ವಾದಶೀದಿನದಲ್ಲಿ ಶ್ರೀವ್ಯಾಸರಾಯರು ಶ್ರೀವಾದಿರಾಜರನ್ನು ಭಿಕ್ಷೆಗೆ ಕಾದುಕೊಂಡಿರಲು, ಶ್ರೀಗುರುರಾಜರು ತಮ್ಮ ಜಪತರ್ಪಣ ಪೂಜಾದಿಗಳನ್ನೆಲ್ಲ ಬಿಟ್ಟು ಸ್ನಾನವಾದೊಡನೆ ಭಿಕ್ಷೆಗೆ ಬಂದುಬಿಟ್ಟರು. ಭಿಕ್ಷೆಯಾದ ಮೇಲೆ ಒಬ್ಬರೇ ನದೀತೀರದಲ್ಲಿ ಏಕಾಂತ ಸ್ಥಳವನ್ನು ಕಂಡು, ಅಲ್ಲಿ ತಾನು ಉಂಡ ಭೋಜ್ಯವಸ್ತುಗಳನ್ನೆಲ್ಲ ಊಟಮಾಡಿದ ರೀತಿಯಿಂದಲೇ ಬೇರೆ ಬೇರೆಯಾಗಿ ಬಾಯಿಯಿಂದ ತೆಗೆದಿಟ್ಟು, ತಿರುಗಿ ಸ್ನಾನಮಾಡಿ, ಜಪತರ್ಪಣ ಪೂಜಾದಿಗಳನ್ನು ಮಾಡುತ್ತಿದ್ದರು. ಈ ನಾರಾಯಣಾಚಾರ್ಯರು "ಇಂದು

ನಮ್ಮ ಸ್ವಾಮಿಗಳು ಸ್ನಾನಾನಂತರವೇ ಭಿಕ್ಷೆ ಮಾಡಿಬಿಟ್ಟರು. ಈಗ ಎಲ್ಲಿಗೋ ಹೋಗಿದ್ದಾರೆ. ಏನು ಮಾಡುವರು! ಎಲ್ಲಿರುವರು?" ಎಂದು ನೋಡಲಪೇಕ್ಷಿಸಿ, ಶ್ರೀಗಳವರನ್ನು ಕಂಡು ಹಿಡಿದು ಸಮೀಪದಲ್ಲಿ ತಿಳಿಯದ ಹಾಗೆ ಮರವನ್ನೇರಿ ಈ ಕೌತುಕವನ್ನೆಲ್ಲ ನೋಡುತ್ತಿದ್ದರು. ಶ್ರೀಗಳವರು ತನ್ನ ಕರ್ತವ್ಯವನ್ನು ನೆರವೇರಿಸಿ ಹಿಂದೆ ತಿರುಗತಕ್ಕವರು ಅಕಸ್ಮಾತ್ತಾಗಿ ಮರದ ಮೇಲಿರುವ ನಾರಾಯಣಾಚಾರ್ಯರನ್ನು ಕಂಡು, ಸಮೀಪಕ್ಕೆ ಕರೆದು,–"ಛೀ ಮೂಢನೇ! ನನ್ನನ್ನು ಪರೀಕ್ಷಿಸಲು ಬಂದೆಯಾ? ನೀನು ಬ್ರಹ್ಮರಾಕ್ಷಸನಾಗು" ಎಂದು ಶಪಿಸಿದರು. ಆ ಬ್ರಾಹ್ಮಣನು ವ್ಯಸನಾಕ್ರಾಂತನಾಗಿ ಪಾದದಲ್ಲಿ ಬಿದ್ದು, "ಆಶ್ರಿತಕಲ್ಪತರುವೇ! ಬುದ್ಧಿಹೀನನಾಗಿ ಈ ಸೇವಕನು ಮಾಡಿದ ತಪ್ಪನ್ನು ಮನ್ನಿಸಿ ಕಾಪಾಡಬೇಕು" ಎಂದು ಮನಮರುಗುವಂತೆ ಬಹಳವಾಗಿ ವಿಲಪಿಸಲು, ಕರುಣಾರ್ದ್ರಹೃದಯರಾದ ಯತೀಶ್ವರರು "ನನ್ನ ಮಾತು ಎಂದಿಗೂ ಸುಳ್ಳಾಗದು. ಸ್ವಲ್ಪ ಕಾಲ ಬ್ರಹ್ಮರಾಕ್ಷಸನಾಗಿ "ಅ ಕಾಮನಾಸ್ತ್ಯ" ಎಂದು ಕಂಡಕಂಡವರೆದುರು ಹೇಳುತ್ತಿರು. ಯಾವಾಗ ಈ ಅಕ್ಷರಗಳ ತಾತ್ಪರ್ಯವನ್ನು ನಿನಗೆ ಯಾರು ಉಪದೇಶಿಸುವರೋ; ಆಗ ಅವರಿಂದ ಈ ಶಾಪವು ನಿವೃತ್ತಿಯಾಗುವುದು" ಎಂದನುಗ್ರಹಿಸಿದರು.

ಒಂದು ದಿನ ಶ್ರೀವ್ಯಾಸರಾಯರು ದೇವರಿಗೆ ನಿರ್ಮಾಲ್ಯವಿಸರ್ಜನೆ ಪೂಜೆಮಾಡುವುದಕ್ಕಾಗಿ ಶ್ರೀವಾದಿರಾಜರನ್ನು ನಿಯೋಜಿಸಿದರು. ಶ್ರೀಗುರುರಾಜರು ಅದನ್ನೊಪ್ಪಿ ನಿರ್ಮಾಲ್ಯವಿಸರ್ಜನೆಯನ್ನು ಮಾಡಿ, ಶ್ರೀವ್ಯಾಸಮೂರ್ತಿಯನ್ನು ಹಿಡಿದುಕೊಂಡು, ತನ್ನ ಜನರೊಡನೆ ಮಧ್ಯವಾಟಕ್ಕೆ ಬಂದು, ಎಲ್ಲ ಶ್ರೀಗಳವರಿಗೂ ತೋರಿಸಿ, ಆ ಮಠದಲ್ಲಿಟ್ಟು ಪೂಜಿಸುತ್ತಿದ್ದರು. ಶ್ರೀವ್ಯಾಸರಾಯರು "(**ಶ್ರೀವಾದಿರಾಜೋ ಗತಃ**) ಶ್ರೀವಾದಿರಾಜರು ಹೊರಟುಹೋದರು" ಎಂದು ತನ್ನ ಮಠದವರು ಅರಿಕೆ ಮಾಡಿದ ಕೂಡಲೆ "(**ತರ್ಹಿ ವ್ಯಾಸೋಽಪಿ ಗತಃ**) ಹಾಗಾದರೆ ವ್ಯಾಸದೇವರು ಹೊರಟುಹೋದರು" ಎಂದು ಹೇಳಿ ಸುಮ್ಮಗಾದರು. ಈ ಕಥೆಯು ಶ್ರೀವ್ಯಾಸವಿಜಯದಲ್ಲಿಯೇ ಹೇಳಲ್ಪಟ್ಟಿದೆ. ಈ ಮಹನೀಯು

ಇಬ್ಬರೂ ಅಪರೋಕ್ಷ ಜ್ಞಾನಿಗಳು, ನಿಗ್ರಹಾನುಗ್ರಹ ಸಮರ್ಥರು. ಇಂಥವರು ಭಗವತ್ಪ್ರೇರಣೆಯಿಂದಲೇ ಕೆಲವು ಕಾಲ ವ್ಯಾಸಪೂಜೆಯನ್ನು ಮಾಡುವುದಕ್ಕಾಗಿ ಈ ಲೀಲೆಗಳನ್ನು ತೋರಿಸಿದರಲ್ಲದೆ, ಒಬ್ಬರಿಗೊಬ್ಬರು ವಂಚಿಸಿಕೊಂಡಿರುವುದಲ್ಲ. ಇಬ್ಬರೂ ಧ್ಯಾನದಿಂದ ಎಲ್ಲವನ್ನೂ ತಿಳಿಯಲು ಶಕ್ತರಿದ್ದಾಗ ಒಬ್ಬರನ್ನೊಬ್ಬರು ವಂಚಿಸುವ ಬಗೆ ಹೇಗೆ? ಲೋಕವಿಡಂಬನೆ ಮಾಡತಕ್ಕ ಅವತಾರ ಪುರುಷರು ಭಕ್ತರಿಗೆ ಭಕ್ತಿಯನ್ನು ವೃದ್ಧಿಗೊಳಿಸುವುದಕ್ಕಾಗಿಯೂ, ದ್ವೇಷಿಗಳಿಗೆ ದ್ವೇಷವನ್ನು ಬೆಳಸುವದಕ್ಕಾಗಿಯೂ ಕೆಲವು ಚಮತ್ಕಾರಗಳನ್ನು ತೋರಿಸುವುದು ಒಂದು ಪದ್ಧತಿಯಾಗಿದೆ. ಶ್ರೀಕೃಷ್ಣನು ಜಾರಚೋರಶಿಖಾಮಣಿಯಂತೆ ನಟಿಸಿದ್ದರಿಂದ ಸಜ್ಜನರಿಗೆ ಭಕ್ತಿಯುದಯಿಸಿದಂತೆ ಜರಾಸಂಧಸೃಗಾಲವಾಸುದೇವಾದಿಗಳಿಗೆ ದ್ವೇಷದಿಂದ ನಿಂದಿಸಲೂ ಆಸ್ಪದವಾಯಿತು. ಆದುದರಿಂದ ಈ ಮಹಾತ್ಮರಿಬ್ಬರ ಈ ಚಮತ್ಕಾರ ಲೀಲೆಯು ಸಜ್ಜನರಿಗೆಲ್ಲರಿಗೂ ಆನಂದದಾಯಕವೇ ಸರಿ.

|| ಶ್ರೀಹಯಮುಖಾಯ ನಮಃ ||

## ಐದನೇ ಅಧ್ಯಾಯ.

ಶ್ರೀ ವಾಗೀಶತೀರ್ಥರ ಅನುಗ್ರಹದಿಂದ ಶ್ರೀವಾದಿರಾಜರ ಸೋದರನು ಜನಿಸಿ, ಮಾತಾಪಿತೃಗಳಿಗೆ ಆನಂದವನ್ನುಂಟುಮಾಡಿದನು. ತಂದೆತಾಯಿಗಳು ಸ್ವರ್ಗಸ್ಥರಾದ ಮೇಲೆ ಅವರ ಅಂತ್ಯೇಷ್ಟಿಕರ್ಮವನ್ನಾಚರಿಸಿ, ತನ್ನ ಅಗ್ರಜರಾದ ಶ್ರೀವಾದಿರಾಜರನ್ನು ಸೇವಿಸುತ್ತ ಸಚ್ಛಾಸ್ತ್ರಗಳನ್ನು ಅಭ್ಯಾಸಮಾಡುತ್ತ ತಪೋವ್ರತನಿಯಮಾದಿಗಳಲ್ಲಿ ಅಗ್ರಗಣ್ಯನೆನಿಸಿ ವಿರಕ್ತಾಗ್ರಣಿಯಾಗಿದ್ದನು. ಅಚ್ಯುತಪ್ರೇಕ್ಷತೀರ್ಥರ ಸಂಸ್ಥಾನವಾದ ಭಂಡಾರಕೇರಿ ಮಠಕ್ಕೆ ಕಡೆಗೆ ಶ್ರೀವಾದಿರಾಜರು ತನ್ನ ಸೋದರನಿಗೆ ಸನ್ಯಾಸಾಶ್ರಮವನ್ನು ದಯಪಾಲಿಸಿದರು. ಇವರ ಹೆಸರು **ಶ್ರೀಸುರೋತ್ತಮತೀರ್ಥರು.**

ಶ್ರೀವಾದಿರಾಜರ ಸೋದರಿಯ ಗಂಡನು ವಿಷಪೀಡೆಯಿಂದ ಮೃತನಾಗಲು, ಆಕೆಯನ್ನು ಸಂತೈಸಿ, "ಭೀಮ ನಿನ್ನೀಮಮತಿನು" ಎಂಬ ಕೀರ್ತನೆಯನ್ನು ರಚಿಸಿ, ಶ್ರೀಭೀಮಸೇನಾನುಗ್ರಹದಿಂದ ಆತನನ್ನು ಬದುಕಿಸಿ, ಆ ದಂಪತಿಗಳಿಗೆ ಅನುಗ್ರಹಿಸಿದರು.

ಶ್ರೀಗಳವರು ಲೋಕಾನುಗ್ರಹಕ್ಕಾಗಿಯೂ ಶ್ರೀಮಧ್ವಮತವನ್ನು ವೃದ್ಧಿಗೊಳಿಸುವುದಕ್ಕಾಗಿಯೂ ಸಂಚರಿಸುತ್ತಿರುವಾಗ, ಒಂದು ಕಡೆಯಲ್ಲಿ ಒಬ್ಬ ಅರಸನು ರಾಜದ್ರೋಹದ ಸಲುವಾಗಿ ಅಪರಾಧಿಯನ್ನು ಕೊಲ್ಲಿಸಲು, ಆತನ ಹೆಂಡತಿಯು ಶ್ರೀಗಳವರ ಸನ್ನಿಧಿಗೆ ಬಂದು, ತನ್ನ ಮುತ್ತೈದೆತನವನ್ನು ರಕ್ಷಿಸಬೇಕೆಂದು ಮೊರೆಯಿಟ್ಟಳು. ಆಕೆಗೆ ಯತಿಶ್ರೇಷ್ಠರು ತೀರ್ಥವನ್ನೂ ಹಯವದನನ ಪ್ರಸಾದವನ್ನೂ ಕೊಟ್ಟು "ತೀರ್ಥವನ್ನು ಪ್ರೋಕ್ಷಿಸಿ, ಈ ಪ್ರಸಾದವನ್ನು ಆತನ ಬಾಯಿಗೆ ಮುಟ್ಟಿಸಿದೊಡನೆ ಬದುಕುವನೆ"ಂದು ಅನುಗ್ರಹಿಸಿ ಕಳುಹಿಸಿದರು. ಅದರಂತೆ ಆಕೆಯು ಆಚರಿಸಲು ಆ ಪುರುಷನು ಮರಳಿ ಬದುಕಿದನು.

ಈ ಮಹನೀಯರ ಭಕ್ತಾಗ್ರೇಸರನಾದ ಅಚ್ಯುತರಾಯನು ಎಂತಹ ವೈದ್ಯರಿಂದಲೂ ಪರಿಹರಿಸಲಸಾಧ್ಯವಾದ ಮಹಾ ವ್ಯಾಧಿಯಿಂದ ನರಳುತ್ತಿರಲು, ರಾಜಸೇವಕರಿಂದ ಈ ವಾರ್ತೆಯನ್ನು ತಿಳಿದ ಕೂಡಲೆ ಶ್ರೀಗಳವರು ಆತನಲ್ಲಿಗೆ ಬಂದು ಜಲವನ್ನಭಿಮಂತ್ರಿಸಿ, ಆತನಿಗೆ ಕುಡಿಸಿದರು. ಮರಣೋನ್ಮುಖನಾಗಿದ್ದ ರಾಜನು ಆ ಜಲಪ್ರಭಾವದಿಂದ ರೋಗವಿಮುಕ್ತನಾಗಿ, ಶ್ರೀಗಳವರ ಮಹಾಮಹಿಮೆಯನ್ನು ಕೊಂಡಾಡಿ, ಅನೇಕ ಬಿರುದುಗಳನ್ನರ್ಪಿಸಿದನು. ಈ ವಿಷಯವು "ವಾದಿರಾಜಮುನಿಪ | ಹಯಮುಖ | ಪಾದಕಮಲ ಮಧುಪ ||" ಎಂಬ ಕೀರ್ತನದಲ್ಲಿಯೂ, ಈ ಶ್ಲೋಕದಲ್ಲಿಯೂ ಸ್ಪಷ್ಟವಾಗುತ್ತದೆ.

"ಸ್ವಸಿಂಹಾಸನಮಾರೋಪ್ಯ ಸಂತುಷ್ಟೋಽಚ್ಯುತಭೂಪತಿಃ |
ಶ್ರೀವಾದಿರಾಜಗುರವೇ ಬಿರುದಾನ್ಯದದಾತ್ಪ್ರಭುಃ ||"

ಶ್ರೀಯತಿವರರು ಮರಳಿ ಲೋಭಿಯಾಗಿದ್ದ ಬ್ರಾಹ್ಮಣನ ಹತ್ತಿರ ಬಂದು, ಆತನು ಹಯಗ್ರೀವನ ಅನುಗ್ರಹದಿಂದ ಲೋಭವನ್ನೆಲ್ಲ ಬಿಟ್ಟು,

ತನ್ನ ದ್ರವ್ಯವನ್ನೆಲ್ಲ ಸತ್ಕಾರ್ಯದಲ್ಲಿ ವಿನಿಯೋಗಿಸಿ, ಭಗವದ್ಭಕ್ತನಾಗಲು ಯೋಗ್ಯತೆಯನ್ನು ಪಡೆದಿರುತ್ತಾನೆಂದು ತಿಳಿದು, ಶ್ರೀಹಯಗ್ರೀವ ಸಾಲಿಗ್ರಾಮವನ್ನು ಹಿಂದೆ ತೆಗೆದುಕೊಂಡರು. ಆ ಬ್ರಾಹ್ಮಣನು ಶ್ರೀವಾದಿರಾಜರ ಅನುಗ್ರಹದಿಂದ ವೈಕುಂಠದಾಸನೆಂದು ಪ್ರಸಿದ್ಧನಾಗಿ ದಾಸಕೂಟದಲ್ಲಿ ಪರಿಗಣಿತನಾದನು.

ದ. ಕ. ಜಿಲ್ಲೆಯ ಪ್ರಾಚೀನೇತಿಹಾಸವೆಂಬ ಗ್ರಂಥಾಧಾರದಿಂದ ಈ ಅಚ್ಯುತರಾಯನೂ ಕೃಷ್ಣರಾಯನೂ ಸಲುವ ನರಸನವಂಶದ ನರಸಿಂಹರಾಯನ ಮಕ್ಕಳು. ಕೃಷ್ಣರಾಯನು ಕ್ರಿ. ಶ. 1509-1530 ವರೆಗೆ ವಿಜಯನಗರವನ್ನಾಳಿದನು. ಅಚ್ಯುತರಾಯನು 1530-1542ರ ವರೆಗೆ ಆಳಿದನು. ವೀರಪ್ರತಾಪ ವೆಂಕಟಪತಿರಾಯನು 1586-1614ರ ವರೆಗೆ ಆಳಿದನೆಂದು ತಿಳಿಯುತ್ತದೆ. ಇದರಿಂದ ಶ್ರೀವಾದಿರಾಜರಿಗೆ **ಪ್ರಸಂಗಾಭರಣತೀರ್ಥ**ರೆಂಬ ಬಿರುದನ್ನು ಈ ಮೂವರಲ್ಲಿ ಯಾರಾದರೊಬ್ಬನು ಕೊಟ್ಟಿರಬೇಕೆಂದು ಊಹಿಸಬಹುದಾಗಿದೆ.

ಹಾಸನ ಬೇಲೂರಲ್ಲಿ ಸಂಚರಿಸುತ್ತಿರುವಾಗ ಒಬ್ಬ ಧನಿಕನ ಹೊಲದಲ್ಲಿ ಕಡಲೆಯನ್ನೆಲ್ಲ ಬಿಳಿಕುದುರೆಯು ತಿಂದುಬಿಟ್ಟಿತು. ಅದನ್ನು ಹುಡುಕುವಾಗ ಎಲ್ಲಿಗೆ ಹೋಯಿತೆಂದು ತಿಳಿಯಲಿಲ್ಲ. ಕಡೆಗೆ ಯಜಮಾನನೇ ಅದನ್ನು ಪರೀಕ್ಷಿಸಬೇಕೆಂದು ಕಾದುಕೊಂಡಿದ್ದು ಕುದುರೆ ಬಂದ ಕೂಡಲೆ ಓಡಿಸಿಕೊಂಡು ಹೋದನು. ಆ ಕುದುರೆಯು ಶ್ರೀಗಳವರ ಹತ್ತಿರ ಬಂದು ಅದೃಶ್ಯವಾಯಿತು. ಗೃಹಸ್ಥನು ತನಗಾದ ನಷ್ಟಕಷ್ಟಗಳನ್ನು ಅರಿಕೆಮಾಡಿ ಹೇಗಾದರೂ ಮಾಡಿ ಆ ಕುದುರೆಯನ್ನು ತನಗೆ ಹಿಡಿದು ಕೊಡಬೇಕೆಂದು ನಿರ್ಬಂಧಿಸಲು, ಮರುದಿನ ಬೆಳಿಗ್ಗೆ ಬರುವಂತೆ ಅಪ್ಪಣೆ ಕೊಟ್ಟರು. ಮರುದಿನ ಬೆಳಿಗ್ಗೆ ಆತನು ಬರಲು, ಯತಿವರರು ಒಂದು ಕಣ್ಣಿಗೆ ಬಟ್ಟೆಯಿಟ್ಟುಕೊಂಡು ಮತ್ತೊಂದು ಕಣ್ಣಿನಿಂದ ನೋಡಲಿಕ್ಕೆ ಹೇಳಿ, ತಾನು ಚಿನ್ನದ ಹರಿವಾಣದಲ್ಲಿ ಕಡಲೆ ಮಡ್ಡಿಯನ್ನು ತಲೆಯಲ್ಲಿ ಹೊತ್ತುಕೊಂಡರು. ಪಂಚಾಯುಧಗಳಿಂದ ಶೋಭಿತವಾದ ಚಂದ್ರನಂತೆ ಬಿಳಿದಾದ ಕುದುರೆಯು ಶ್ರೀಹಯಗ್ರೀವ ಪ್ರತಿಮೆಯಿಂದ ಹೊರಟು

ಶ್ರೀಗುರುಗಳ ಬೆನ್ನಿಗೆ ಹಾರಿ, ಆ ಭಕ್ಷ್ಯವನ್ನು ತಿಂದು, ಆ ಪ್ರತಿಮೆಯಲ್ಲಿ ಅಡಗಿಬಿಟ್ಟಿತು. ಗೃಹಸ್ಥನು ಕಂಡು ಬೆರಗಾದನು. ತೆರದಿದ್ದ ಕಣ್ಣು ಕೂಡಲೆ ಹೋಗಿಬಿಟ್ಟಿತು. ಬೆಣ್ಣೆಯೊತ್ತಿದ್ದ ಕಣ್ಣುಮಾತ್ರ ಉಳಿಯಿತು. ಆತನು ಶ್ರೀಗುರುಗಳಾಜ್ಞೆಯಿಂದ ಆ ಹೊಲವನ್ನೇ ದೇವರಿಗೆ ಧಾರೆಯೆರೆದನು. ಈಗಲೂ ಆ ಹೊಲವು ಸೋದಾಮಠಕ್ಕೆ ಸೇರಿರುತ್ತದೆ.

ಶ್ರೀವಾದಿರಾಜರಿಂದ ಶಾಪಗ್ರಸ್ತನಾದ ಬ್ರಹ್ಮರಾಕ್ಷಸನು ಮಹಾ ಭಯಂಕರನಾಗಿ "ಅಕಾಪಮಾಸ್ತ್ಯೈ" ಎನ್ನುತ್ತ ಉತ್ತರಕೊಡದಿದ್ದವರನ್ನು ತಿನ್ನುತ್ತಾ ಅಲೆಯುತ್ತಿರಲು, ಯಾತ್ರಾಕ್ರಮದಿಂದ ಎದುರುಬಂದ ಶ್ರೀವಾದಿರಾಜರನ್ನೇ ಕಂಡು, "ಅಕಾಪಮಾಸ್ತ್ಯೈ" ಎಂದು ಕೇಳಿದನು. ಶ್ರೀಗಳವರು "ಅಶ್ವಿನೇ ಕಾರ್ತಿಕೇ ಮಾಘೇ ವೈಶಾಖೇ ಸ್ನಾನತತ್ಪರಃ। ಬ್ರಹ್ಮರಾಕ್ಷಸ ಪೈಶಾಚಯೋನೇರ್ಮುಕ್ತೋ ಭವೇದ್ಧ್ರುವಮ್ ॥" ಎಂದುತ್ತರವಿತ್ತು, ಆ ಬ್ರಹ್ಮರಾಕ್ಷಸರೂಪದಿಂದ ಮುಕ್ತನಾಗುವಂತೆ ಅನುಗ್ರಹಿಸಿದರು. ಕೂಡಲೆ ಆತನು ಬ್ರಹ್ಮರಾಕ್ಷಸತ್ವವನ್ನು ಬಿಟ್ಟು ಶ್ರೀಗಳವರಿಗೆ ವಂದಿಸಿದನು. ಯತಿವರರು "ಎಲೋ ಭಕ್ತಾಗ್ರೇಸರನೇ! ನೀನು ಭೂತರಾಜನೆಂದು ಪ್ರಸಿದ್ಧನಾಗಿ, ನನ್ನ ಸಂಗಡ ಯಾವಾಗಲೂ ವಾಸಮಾಡುತ್ತಿದ್ದು; ಶಿಷ್ಟಪರಿಪಾಲನದಲ್ಲಿಯೂ, ದುಷ್ಟನಿಗ್ರಹದಲ್ಲಿಯೂ ನನಗೆ ಅನುಕೂಲನಾಗಿರಬೇಕು. ಶ್ರೀಹಯವದನನ ನಿರಂತರಸೇವೆಯಿಂದ ಮುಂದೆ ವೈರಾಗ್ಯಾಧಿಪತಿಯಾಗುವಿ" ಎಂದನುಗ್ರಹಿಸಿದರು. ಈ ಭೂತರಾಜರು ಭಾವಿರುದ್ರಪದವಿಗೆ ಬರತಕ್ಕವರೆಂದು ಬಲ್ಲವರು ಹೇಳುತ್ತಾರೆ.

ಒಂದುಕಡೆ ವಾದಿಯೊಬ್ಬನು ಮದಾಂಧನಾಗಿ ಪಾಂಡಿತ್ಯದಲ್ಲಿ ತನಗೆ ಸಮರಿಲ್ಲವೆಂದು, ತನ್ನ ಹೆಗ್ಗಳವನ್ನು ತಾನೇ ಕೊಂಡಾಡುತ್ತಾ ಶ್ರೀಗಳವರ ಬಳಿ ವಾದಕ್ಕೆ ಬಂದಾಗ; ಕೇವಲ ಮೂಢನಾದೊಬ್ಬ ಶಿಷ್ಯನಿಂದ ಅವನನ್ನು ಸೋಲಿಸಿ, ಆ ಶಿಷ್ಯನಿಗೆ ಪಾಂಡಿತ್ಯಬರುವಂತೆ ಅನುಗ್ರಹಿಸಿದರು.

ಗಿರಿನಾಮಕನಾದೊಬ್ಬ ಕುಷ್ಠರೋಗಿಯು ಸುಬ್ರಹ್ಮಣ್ಯಾದಿ ಕ್ಷೇತ್ರಗಳಲ್ಲಿ ಸೇವೆಮಾಡಿದರೂ ತನ್ನ ರೋಗವು ಪರಿಹಾರವಾಗದಿರಲು ಶ್ರೀಗುರು

ರಾಜರನ್ನು ಮರೆಹೊಕ್ಕನು. ಆತನಿಗೆ ಯತಿಗಳು ಯಂತ್ರಕಟ್ಟಿ, ಕುಷ್ಠರೋಗವನ್ನು ನಿವಾರಿಸಿ, ಅಪುತ್ರನಾದ ಆತನಿಗೆ ಸಂತಾನಲಾಭವಾಗುವಂತೆ ಅನುಗ್ರಹ ಮಾಡಿದರು. ಇನ್ನೊಬ್ಬ ಕುಷ್ಠಿಯ ಕುಷ್ಠರೋಗವನ್ನು ಸ್ವಪಾದ ಮೃತ್ತಿಕಾಲೇಪನದಿಂದಲೇ ಹೋಗಲಾಡಿಸಿದರು. ತನ್ನಪಾದ ಮೃತ್ತಿಕಾಲೇಪನಮಾತ್ರದಿಂದಲೇ ತುರುಕನೊಬ್ಬನ ಅಸಾಧ್ಯವಾದ ತಲೆನೋವನ್ನು ಕಳೆದರು. ಶೈವನೊಬ್ಬನ ಬಲವತ್ತರವಾದ ರೋಗವನ್ನು ತನ್ನ ಮೈತೊಳೆದ ನೀರಿನ ಸೇವನೆಯಿಂದಲೆ ಪರಿಹರಿಸಿದರು. ಈ ಮಹಾಪುರುಷರ ಉಚ್ಛಿಷ್ಟವನ್ನು ಮಹಾ ಪ್ರಸಾದವೆಂದು ಸ್ವೀಕರಿಸಿ ಬ್ರಾಹ್ಮಣನೊಬ್ಬನು ಮಹಾ ವ್ಯಾಧಿಯನ್ನು ತೊಲಗಿಸಿಕೊಂಡನು.

ಶ್ರೀದನೆಂಬೊಬ್ಬನು ಮೊದಲು ಅದ್ವೈತಮತದವನಾಗಿದ್ದು ಶ್ರೀಗಳವರ ಹತ್ತಿರ ವಾದದಲ್ಲಿ ಪರಾಜಿತನಾಗಿ ಶ್ರೀವಾದಿರಾಜರಿಂದ ಮಂತ್ರೋಪದೇಶಮುದ್ರಾಧಾರಣವನ್ನು ಪಡೆದು, ಮಾಧ್ವಮತವನ್ನವಲಂಬಿಸಿ, ವೈಷ್ಣವ ಕನ್ಯೆಯನ್ನು ಮದುವೆ ಮಾಡಿಕೊಂಡು ಗುರುಗಳಿಗೆ ಅತ್ಯಂತ ಭಕ್ತನಾಗಿದ್ದನು.

ಒಬ್ಬ ದರಿದ್ರಬ್ರಾಹ್ಮಣನು ಬಹುಋಣಪೀಡಿತನಾಗಿ ಋಣ ಪರಿಹಾರವಾಗುವಂತೆ ಅನುಗ್ರಹಿಸಬೇಕೆಂದು ಶ್ರೀಗುರುರಾಜರನ್ನು ಅನೇಕ ವೇಳೆ ಬೇಡುತ್ತಿದ್ದನು. ಆತನ ಸಲುವಾಗಿ ಯತಿವರರು– "ಯಾ ಸುಗಂಧಾ ಸ್ಯನಾಸಾವಿ..." ಎಂಬ ಶ್ರೀಸೂಕ್ತದ ಅರ್ಥಬೋಧಕವಾದ ಸ್ತೋತ್ರದಿಂದ ಸಂಪತ್ತಿಗೆ ಅಭಿಮಾನಿನಿಯಾದ ಮಹಾಲಕ್ಷ್ಮೀದೇವಿಯನ್ನು ಸ್ತುತಿಸಿ, ಸ್ವರ್ಣವೃಷ್ಟಿಯನ್ನು ಮಾಡಿಸಿ, ಆ ಬ್ರಾಹ್ಮಣನಿಗೆ ಅದನ್ನೆಲ್ಲ ಸ್ವೀಕರಿಸುವಂತೆ ಅಪ್ಪಣೆಕೊಟ್ಟರು. ಆ ದರಿದ್ರನು ಮಹಾಪ್ರಸಾದವೆಂದು ಪರಮಾನಂದದಿಂದ ಅದನ್ನು ತೆಗೆದುಕೊಂಡು, ತನ್ನ ಋಣವನ್ನೆಲ್ಲ ಪರಿಹರಿಸ ತೊಡಗಿದನು. ಆದರೆ ಕೊನೆಗೆ ನೋಡುವಾಗ ಆತನ ಋಣಪರಿಹಾರಕ್ಕೆ ಬೇಕಾದಷ್ಟೇ ಸ್ವರ್ಣವೃಷ್ಟಿಯಾಗಿದ್ದಿತು. ಅದನ್ನು ಕೇಳಿದು ಎಲ್ಲರೂ ಆಶ್ಚರ್ಯಪಟ್ಟರು.

ಒಬ್ಬ ಬ್ರಾಹ್ಮಣಶ್ರೇಷ್ಠನು ತಪ್ಪದೆ ಪ್ರತಿದಿನದಲ್ಲಿಯೂ ಶ್ರೀಮದ್ಭಾಗವತದ ದಶಮಸ್ಕಂಧವನ್ನು ಪಾರಾಯಣ ಮಾಡುವ ನಿಯಮವನ್ನು

ಹಿಡಿದು ಕೊಂಡಿದ್ದನು. ಕಡೆಗೆ ಮುದಿತನದಿಂದ ಆ ನಿಯಮವನ್ನು ನೆರವೇರಿಸಲು ಅಶಕ್ತನಾಗುತ್ತ ಶ್ರೀಗಳವರ ಬಳಿಗೆ ಬಂದೆರಗಿ ತನ್ನ ನಿಯಮಭಂಗವಾಗದಂತೆ ಅನುಗ್ರಹಿಸಬೇಕೆಂದು ಬೇಡಲು ಶ್ರೀಗಳವರು "ನೆನೆನೆನಮಿನ ನೀಲನೀರದವರ್ಣನಾ ಗುಣರನ್ನನಾ | ಮುನಿಜನಪ್ರಿಯ ಮುದ್ದು ಉಡುಪಿಯ ರಂಗನಾ ದಯಾಪಾಂಗನಾ" ಎಂಬ ದಶಮಸ್ಕಂಧಾರ್ಥಸಾರರೂಪವಾದ ಕೀರ್ತನೆಯನ್ನು ಮಾಡಿ, ಅದನ್ನು ನಿತ್ಯಪಠಿಸಿದರೆ ನಿಯಮ ಭಂಗವಾಗುವುದಿಲ್ಲವೆಂದು ಅನುಗ್ರಹಿಸಿದರು.

ಶ್ರೀಗಳವರು ಒಂದುಕಡೆ ತಪಸ್ಸುಮಾಡುತ್ತಿದ್ದಾಗ ಒಂದು ಘಟಸರ್ಪವು ಬಂದು ಇವರನ್ನು ಸುತ್ತುಹಾಕಿ ಕಡಿಯಬೇಕೆಂದು ಬಹಳವಾಗಿ ಪ್ರಯತ್ನಿಸಿತು. ಈ ಪ್ರಯಾಸದಿಂದ ಅದರ ಹಲ್ಲುಗಳು ಪುಡಿಪುಡಿಯಾದವು. ಹಾವು ಸೋತುಹೋಯಿತು. ಇಷ್ಟಾದರೂ ಶ್ರೀಗಳವರ ಧ್ಯಾನಕ್ಕೆ ತೊಡಕಾಗಲಿಲ್ಲ.

ಒಂದು ಇಲಿಯು ತಿಂಡಿಗಾಗಿ ತಿರುಗಾಡುತ್ತಿರಲು ಒಂದು ಹಾವು ಬೆನ್ನಟ್ಟಿಕೊಂಡು ಬಂದಿತು. ಇಲಿಯು ಹೆದರಿ, ಪ್ರಾಣದಾಸೆಯಿಂದ ಶ್ರೀಗಳವರ ಆಸನದ ಅಡಿಯಲ್ಲಿ ಓಡಿಬಂದು ಅಡಗಿಕೊಂಡಿತು. ಅದರ ಹಿಂದೆಯೇ ವೇಗದಿಂದ ಬುಸುಗುಟ್ಟುತ್ತ ಹಾವೂ ಬಂದಿತು. ಶ್ರೀಗಳವರ ಸನ್ನಿಧಿಗೆ ಬಂದೊಡನೆ ಆ ಸರ್ಪನಿಗೆ ವೈರಬುದ್ಧಿಯು ಮಾಯವಾಯಿತು. ತನ್ನ ಹೆಡೆಯನ್ನು ತಗ್ಗಿಸಿ, ತನ್ನ ತಪ್ಪಿತವನ್ನು ಕ್ಷಮಿಸಬೇಕೆಂದು ಬೇಡುವುದೋ ಎಂಬಂತೆ ಶ್ರೀಗಳವರ ಪಾದದ ಬಳಿಯಲ್ಲಿಯೇ ಸ್ವಲ್ಪಹೊತ್ತು ಬಿದ್ದುಕೊಂಡಿರಲು, ಯತಿವರರು ಕನಿಕರದಿಂದ ತನ್ನ ದಂಡದಲ್ಲಿರುವಂತೆ ಅಪ್ಪಣೆಕೊಟ್ಟರು. ಅಂದಿನಿಂದ ಶ್ರೀಗಳವರ ಸನ್ನಿಧಿಯಲ್ಲಿ ಆ ಇಲಿಯೂ ಹಾವೂ ವೈರವಿಲ್ಲದೆ ಸ್ನೇಹದಿಂದಿರುತ್ತಿದ್ದುವು.

ಈ ರೀತಿಯಾಗಿ ಅನೇಕಾದ್ಭುತಮಹಿಮೆಗಳಿಂದ ಭಕ್ತಜನರಿಗೆ ಆನಂದವನ್ನುಂಟುಮಾಡುತ್ತ ತನ್ನ ದರ್ಶನಸೇವಾದಿಗಳಿಂದ ಭೂಮಂಡಲದ ಸಜ್ಜನರ ಸರ್ವಪಾಪವನ್ನು ಕಳೆದು ಸಂಚರಿಸುತ್ತಿರುವಾಗ, ಎಲ್ಲ ಜೀವರೂ ತಮ್ಮ ಪ್ರಾರಬ್ಧಕರ್ಮ ಫಲವನ್ನುಣ್ಣಲೇ ಬೇಕೆಂಬುದನ್ನು ಎಲ್ಲರಿಗೂ

ಬೋಧಿಸುವುದಕ್ಕಾಗಿ, ಸ್ವಲ್ಪಕಾಲದಲ್ಲಿ ಅಂಧತ್ವವನ್ನನುಭವಿಸಿ, ದೃಢ ಭಕ್ತಿಯಿಂದ ಶ್ರೀಕೃಷ್ಣನನ್ನು ಮರೆಹೊಕ್ಕರೆ ಎಂತಹ ದುಃಖವೂ ಪರಿಹಾರವಾಗಿ ಸರ್ವಾರ್ಥೇಷ್ಟವೂ ಸಿದ್ಧಿಸುವುದೆಂಬುದನ್ನು ಭಕ್ತವರ್ಗಕ್ಕೆ ಬೋಧಿಸುವುದಕ್ಕಾಗಿ, "ಯದಿ ದಿಶಸಿ ನಯನಪಟುತಾಂ ತರ್ಹಿ ಭವಚ್ಚರಣಕಮಲಸೇವಾಯೈ | ಆಯಾಸ್ಯಾಮಿ ದಯಾಲೋ ಕೃಷ್ಣ ನ ಚೇತ್ ಪ್ರಾಜಯಾಮಿ ಕಥಮಂಧಃ" ಎಂಬ ಕೃಷ್ಣಸ್ತುತಿಯನ್ನೂ, "ಉನ್ಮೀಲಯ ಮನ್ನಯನೇ ತ್ವಂ ಮನ್ಯೇ ಲಕ್ಷ್ಮಿ ಲೋಕಮಾನ್ಯಾಸಿ | ಚಿನ್ಮಯ ಸುಭಗಾವಯವೇ ಕರ್ಮಕರಃ ಸ್ವಾಮಹಂ ಚ ತವ ಕಮಿತುಃ" ಎಂಬ ಆರ್ಯಾವೃತ್ತದ ಲಕ್ಷ್ಮೀಸ್ತುತಿಯನ್ನೂ ರಚಿಸಿ, ಅಂಧತ್ವವನ್ನು ಕಳೆದುಕೊಂಡು, ತನ್ನ ಪರ್ಯಾಯಪೂಜೆಗೆ ಶ್ರೀಕೃಷ್ಣಸನ್ನಿಧಿಗೆ ಬಂದು, ಮಹಾಸಂಭ್ರಮದಿಂದ ಶ್ರೀಕೃಷ್ಣದೇವರಿಗೆ ಪರ್ಯಾಯಪೂಜೆಯನ್ನು ಸಾಂಗವಾಗಿ ನೆರವೇರಿಸಿದರು.

॥ ಶ್ರೀತುರಗಾನನಾಯ ನಮಃ ॥

## ಆರನೇ ಅಧ್ಯಾಯ.

ಶ್ರೀ ವಾದಿರಾಜರು ಸಂಚರಿಸುತ್ತಿರುವಾಗ ಅವರ ಪಲ್ಲಕಿಯನ್ನು ಮುಂದಿನಿಂದ ಶ್ರೀಭೂತರಾಜರು ಹೊರುತ್ತಿದ್ದರು. ಹಿಂಬದಿಯಲ್ಲಿ ಭಕ್ತಶ್ರೇಷ್ಠರಾದ ಬ್ರಾಹ್ಮಣರು ಹೊರುತ್ತಿದ್ದರು. ಪಲ್ಲಕಿಯ ಮುಂದುಗಡೆ ಸ್ತುತಿಪಾಠಕರು --

"**ಉದ್ದಂಡೋದ್ದಂಡ ಪರವಾದಿಚಂಡ ಪ್ರಚಂಡಗಂಡಭೇರುಂಡ ಮಾಯಿಮತವಿಧ್ವಂಸಕ ಮಧ್ವಮತೋದ್ಧಾರಕ ಸುಧಾರಸಾಸ್ವಾದ ದಿಗ್ವಿಜಯೀಕೃತಾಸೇತುಮರ್ಯಾದಭಾವಿಹನುಮಚ್ಚಕ್ರವರ್ತಿನ್ ಗುರುಸಾರ್ವಭೌಮ ಪರಮಹಂಸ ಹಂಸಾರೂಢ ಶ್ರೀವಾದಿರಾಜ ಭೋಪರಾಕ್**" ಎಂದು ಸ್ತುತಿ

ಮಾಡುತ್ತಿದ್ದರು. ಆಗ ಪಲ್ಲಕಿಯು ಎದುರಿನಲ್ಲಿ ಯಾರೂ ಹೊತ್ತುಕೊಳ್ಳದೆ ತಾನಾಗಿ ಆಕಾಶದಲ್ಲಿ ಬರುವ ರಾಜಹಂಸದಂತೆ ಉಭಯಪಾರ್ಶ್ವದಲ್ಲಿ ಚಾಮರಗಳಿಂದ ಸೇವಿತವಾಗಿ ನೋಡುವವರಿಗೆ ಪರಮಾಶ್ಚರ್ಯವನ್ನುಂಟುಮಾಡುತ್ತಿದ್ದಿತು. ಈ ವೈಭವವನ್ನು ನೋಡಿ ಪರಮತಾಧಿಪತಿಗಳಿಬ್ಬರು ಮಂತ್ರಶಕ್ತಿಯಿಂದ ತಮ್ಮ ಪಲ್ಲಕಿಯನ್ನು ಎರಡು ಪಾರ್ಶ್ವಗಳಲ್ಲಿಯೂ ಭೂತಗಳಿಂದ ಹೊರಿಸಿ, ತಾವು ವಾದಿರಾಜರಿಂದ ಶ್ರೇಷ್ಠರಿದ್ದೇವೆ, ಎಂದು ಹೊಗಳಿಕೊಳ್ಳುತ್ತಿದ್ದರು. ಈ ವಾರ್ತೆಯನ್ನು ಕೇಳಿ ನಮ್ಮ ಕಥಾನಾಯಕರು "ಸ್ಪಷ್ಟಮಗ್ರೇ ಭವಿಷ್ಯತಿ" ಅಂದರೆ ಪ್ರತ್ಯಕ್ಷ ಸಂಘಟನವಾದಾಗ ಎಲ್ಲವೂ ಸ್ಪಷ್ಟವಾಗುವುದೆಂದರು. ದೈವಯೋಗದಿಂದ ಸ್ವಲ್ಪಕಾಲದಲ್ಲಿಯೇ ಇಬ್ಬರ ಪಲ್ಲಕಿಗಳೂ ಎದುರಾದವು. ಶ್ರೀವಾದಿರಾಜರ ಪಲ್ಲಕಿಯು ಮುಂದೆ ಶ್ರೀಭೂತರಾಜರ ಭಯಂಕರ ತ್ರಿಶೂಲಧಾರಿಯಾದ ಕೆಂಬಣ್ಣದ ರೂಪವನ್ನು ನೋಡಿದೊಡನೆ, ಸಂಹಾರಮೂರ್ತಿಯಾದ ಮಹಾರುದ್ರದೇವನ ರೂಪವನ್ನು ಕಂಡಂತಾಗಲು, ಆ ಭೂತಗಳು ಪರಯತಿಗಳ ಪಲ್ಲಕಿಯನ್ನು ಕೈಬಿಟ್ಟು ಓಡಿಹೋದವು. ಪಲ್ಲಕಿಯು ತಟ್ಟನೆ ಭೂಮಿಯನ್ನು ಆಶ್ರಯಿಸಿತು. ಎಲ್ಲರೂ ಪರಿಹಾಸ ಮಾಡಿದರು. ಆ ಯತಿಗಳು ಬಹಳವಾಗಿ ನಾಚಿಗೆಪಟ್ಟು, ಮಹಾಪುರುಷರಿಗೆ ಎದುರು ನಿತ್ತುದಕ್ಕೆ ತಕ್ಕ ಪ್ರಾಯಶ್ಚಿತ್ತವಾಯಿತು; ಇನ್ನು ಮುಂದೆ ಇಂತಹ ಅಯೋಗ್ಯಕಾರ್ಯಕ್ಕೆ ಉಪ್ಯೋಗಿಸಬಾರದೆಂದು ಸುಮ್ಮನಿದ್ದರು.

ಒಂದು ಸಲ ಉಡುಪಿಯಲ್ಲಿ ಶ್ರೀಕೃಷ್ಣನ ಲಕ್ಷದೀಪೋತ್ಸವದಲ್ಲಿ ಮಹತ್ತಾದ ಮಳೆಯು ಎಡೆಬಿಡದೆ ಸುರಿಯಲಾರಂಭಿಸಿತು. ಆ ಕಾಲದ ಪರ್ಯಾಯಸ್ಥರಾದ ಶ್ರೀಗಳವರು- "ಏನು ಮಾಡಲಿ. ದೀಪಹಚ್ಚುವುದು ಹೇಗೆ? ರಥೋತ್ಸವವಾಗುವುದು ಹೇಗೆ?" ಎಂದು ಕಳವಳಿಸಿ ಕಡೆಗೆ ಇತರ ಶ್ರೀಗಳವರಿಂದ ಕೂಡಿ, ಶ್ರೀವಾದಿರಾಜರಿಗೆರಗಿ, ಶ್ರೀಕೃಷ್ಣನ ರಥೋತ್ಸವವನ್ನು ನಡಿಸಿಕೊಡಬೇಕೆಂದು ಬೇಡಿದರು. ಕೂಡಲೆ ಕರ್ಪೂರವನ್ನು ತರಿಸಿ, "ಪಾಲ್ಗಡಲೊಡೆಯ ಬಾರೋ | ಮೇಲೆ ಕರುಣಾಮೃತದ

ರನಮಳೆಯು ಸುರಿವೃತಲಿ..." ಎಂಬ ಕೀರ್ತನೆ ಮಾಡಿ ಹಾಡುತ್ತಾ ದೇವರನ್ನು ರಥಕ್ಕೇರಿಸಿ, ತಾನು ರಥದ ಹಗ್ಗವನ್ನು ಹಿಡಿದು ಬರುತ್ತಿರಲು, ಆಜೀಜೆಗೆ ಮಳೆ ಸುರಿಯುತ್ತಿದ್ದರೂ ದೇವರ ರಥವು ಬರುತ್ತಿದ್ದಲ್ಲಿಗೆ ಮಳೆಯ ಹನಿಯೂ ಬೀಳಲಿಲ್ಲ. ಆಗ ಸಾಂಗವಾಗಿ ಉತ್ಸವವು ನಡೆಯಲು ಎಲ್ಲರೂ ಇವರ ಮಹಿಮೆಯನ್ನು ಕೊಂಡಾಡುತ್ತಲೇ ಅಂದಿನ ರಾತ್ರಿಯನ್ನು ಕಳೆದರು.

ಒಂದು ಕಡೆ ಸಂಚರಿಸುತ್ತಿರುವಾಗ ರಾತ್ರಿಸಮಯದಲ್ಲಿ ಕಗ್ಗತ್ತಲೆಯಲ್ಲಿ ಕಾರ್ಮುಗಿಲು ಆಕಾಶವನ್ನು ಮುಚ್ಚಿರಲು ಗೊಂಡಾರಣ್ಯದ ನಡುವೆ ಸಿಲುಕಿ ಮಠದವರನೆಲ್ಲರನ್ನು ಅಗಲಿ ಶ್ರೀವಾದಿರಾಜರು ಏಕಾಕಿಯಾಗಿ, ಮಠದವರನ್ನು ಕಂಡು ಹಿಡಿಯಲು ಉಪಾಯತೋರದೆ, ಎಷ್ಟು ಕಷ್ಟಪಡುವರೋ ತನ್ನ ಸೇವಕರು! ಎಂದು ವ್ಯಥೆಪಟ್ಟು ಕಟ್ಟಕಡೆಗೆ 'ಕಂಜಾಕ್ಷ ಕಾಯಯ್ಯ ಕರುಣಾನಿಧಿಯೇ ಬಲಿ | ಭಂಜನನನುಜ ಬಾಜನ್ನ..." ಎಂಬ ಕೀರ್ತನೆಯನ್ನು ರಚಿಸಿ ಸ್ತುತಿಸಿದೊಡನೆ ಕರೆದುಬಂದವರಂತೆ ಸುಖವಾಗಿ ಮಠೀಯರೆಲ್ಲರೂ ಶ್ರೀಗಳವರ ಬಳಿಗೆ ಬಂದರು.

ಒಂದು ಸಮಯದಲ್ಲಿ ಏಕಕಾಲದಲ್ಲಿ ಒಬ್ಬ ಬಡಬ್ರಾಹ್ಮಣನೂ ಇನ್ನೊಬ್ಬ ಮಹಾರಾಜನೂ ತಮ್ಮ ಮನೆಯಲ್ಲಿ ದೇವರಪೂಜೆ ಮಾಡಬೇಕೆಂದು ಪ್ರಾರ್ಥಿಸಲು ಶ್ರೀಗಳವರು ಬಡವನ ಮನೆಯ ಭಿಕ್ಷೆಗೇ ಕೈಸೇರಿದರು. ಈ ಬ್ರಾಹ್ಮಣನು ರಾಘವಾಚಾರ್ಯರ ಮಗನಾದ ರಘುನಾಥಾಚಾರ್ಯರು. ಇವರೇ ಶ್ರೀವಾದಿರಾಜಗುರುಗಳ ಚರಿತ್ರೆಯನ್ನು ಬೋಧಿಸುವ "ವೃತ್ತರತ್ನ ಸಂಗ್ರಹ" ವೆಂಬ ಸಂಸ್ಕೃತ ಗ್ರಂಥವನ್ನು ಮಾಡಿದವರು, ಶ್ರೀಮದ್ವಾದಿರಾಜರ ಭಕ್ತಾಗ್ರೇಸರರು. ಇವರು ಕರಾಡಿಬ್ರಾಹ್ಮಣರೆಂದು ಐತಿಹ್ಯವಿದೆ. ಇವರು ಚಿಕ್ಕವರಾಗಿದ್ದಾಗ ಇವರ ತಾಯಿಯು ಹೆತ್ತ ಮಗುವು ಮರಣಹೊಂದಲು, ಮೊಲೆಹಾಲು ಮೊಲೆಯಲ್ಲಿ ತುಂಬಿ ವ್ಯರ್ಥವಾಗಿ ಪೀಡಿಸುವುದೆಂದು ಅದನ್ನು ಒಣಗಿಸಲು ಮದ್ದು ಹಚ್ಚುತ್ತಿರುವಾಗ, ಈ ಚಿಕ್ಕಬಾಲಕನು "ಅಮ್ಮಾ! ನಾನಾದರೂ ಮೊಲೆಹಾಲನ್ನು ಕುಡಿಯುತ್ತಿದ್ದೆನು. ಏಕೆ ವ್ಯರ್ಥಗೊಳಿಸುವಿ" ಎಂದನಂತೆ. ಆಗಲೇ ಮನಸ್ಸು

ಕರಗಿ, ಇವನಿಗೆ ಹಾಲನ್ನುಣ್ಣಿಸುವೆನೆಂದು ಕೋರಿದಾಗ ಹಾಲು ಒಣಗಿ ಹೋಗಿದ್ದಿತು. ಆಗ ಅವರು ಶ್ರೀವಾದಿರಾಜರ ಭಕ್ತರಾಗಿದ್ದುದರಿಂದ ಗುರುಗಳ ಪಾದಮೃತ್ತಿಕೆಯನ್ನು ಹಾಲುಹುಟ್ಟುವಂತೆ ಹಚ್ಚಿದೊಡನೆ ಹಾಲುಕ್ಕಿಬಂದಿತು. ಶ್ರೀಗುರುರಾಜರ ಅನುಗ್ರಹದಿಂದುಂಟಾದ ಪವಿತ್ರ ಸ್ತನಕ್ಷೀರವನ್ನು ಪಾನಮಾಡಿದುದರಿಂದ ಕಡೆಗೆ ಈ ರಘುನಾಥಾಚಾರ್ಯರು ಗುರುಗಳಿಗೆ ಅತ್ಯಂತ ಭಕ್ತರಾದರು. ಶ್ರೀಗುರುಗಳ ಪಾದಮೃತ್ತಿಕಾಲೇಪನದಿಂದ ತನ್ನ ಹಲ್ಲುಗಳು ದೃಢವಾದವೆಂದು ಇವರು ತನ್ನ ಗ್ರಂಥದಲ್ಲಿ ಹೇಳಿರುತ್ತಾರೆ.

ಶ್ರೀವಾದಿರಾಜರು ಚತುಷ್ಷಷ್ಟಿಕಲಾಭಿಜ್ಞರೆಂದು ಎಲ್ಲರೂ ಕೊಂಡಾಡುತ್ತಿರಲು, ಸಮುಗಾರನೊಬ್ಬನು ನನ್ನ ವಿದ್ಯೆಯಲ್ಲಿ ತಮಗೆ ಪಾಂಡಿತ್ಯವಿರಲಾರದೆಂದು ಹಿಯ್ಯಾಳಿಸಿದನು. ಆಗವನೆದುರಿಗೆ ಕೃಷ್ಣಾಜಿನವನ್ನು ತರಿಸಿ, ಸಮುಗಾರರ ಪದ್ಧತಿಯಂತೆ ಚೂರಿಯಿಂದ ಕತ್ತರಿಸಿ, ಕಬ್ಬಿಣದ ಹರಿತವಾದ ಮೊನೆಯನ್ನು ತಟ್ಟನೆ ಮೂಗಿನೊಳಗೆ ತಗಲಿಸಿ, ಚರ್ಮವನ್ನು ತೂತುಮಾಡಲು ತೊಡಗಿದರು. ಚರ್ಮಕಾರನು ವಂದಿಸಿ, "ಜೀಯ! ಇನ್ನು ಸಾಕು. ಇದರಲ್ಲಿಯೂ ತಮ್ಮ ಕೌಶಲ್ಯವು ಬಹು ಚಮತ್ಕಾರವಾಗಿದೆ" ಎಂದನು. ಚರ್ಮವು ಒದ್ದೆಯಾದರೆ ಅದರಲ್ಲಿ ಹರಿತವಾದ ಮೊನೆಯ ತುದಿಯು ನುಸುಳಿಕೊಂಡು ಸುಲಭವಾಗಿ ತೂತುಮಾಡುವುದೆಂದು ಸಮುಗಾರರು ಪ್ರತಿಕ್ಷಣದಲ್ಲಿಯೂ ಅವರ ದೊಡ್ಡಕಬ್ಬಿಣದ ಸೂಜಿಯನ್ನು ಬಾಯಿ ನೀರಿನಿಂದ ತೋಯಿಸುವುದು ಪದ್ಧತಿಯಾಗಿದೆ. ಶ್ರೀಗಳವರು ಎಂಜಲು ಮಾಡಲಿಕ್ಕಾಗದೆ ಮೂಗಿನೊಳಗೆ ಮೊನೆಯನ್ನು ತಗಲಿಸಿದೊಡನೆ ಚರ್ಮಗಾರನು ಗುಟ್ಟು ಬಯಲಾಯಿತೆಂದು ಸಂತುಷ್ಟನಾದನು.

ಒಂದುಸಲ ಜ್ವರಾಭಿಮಾನಿದೇವತೆಯು ಏಕಾಂತದಲ್ಲಿ ಬಂದು "ಸ್ವಾಮಿ ನಿಮ್ಮ ಮಹಿಮೆಯಿಂದ ನನಗೆ ಯಾರಲ್ಲಿಯೂ ಪ್ರವೇಶಕ್ಕೆ ಅವಸರವೇ ದೊರಕುವುದಿಲ್ಲ. ಎಲ್ಲೆಲ್ಲಿಯೂ ತಮ್ಮ ಪ್ರಭಾವದಿಂದ ಅವಮಾನದ ಪರಂಪರೆಯೇ ಹೆಚ್ಚುತ್ತಿರುವುದು. ಇಂತಹ ದುರ್ದಶೆಯಲ್ಲಿ

ಜೀವಿಸುವುದೇ ಕಷ್ಟವಾಗಿದೆ. ಎಲ್ಲರ ಮೇಲೂ ತಮ್ಮ ಕರುಣೆಯನ್ನು ಬೀರುವಂತೆ ನನ್ನ ಮೇಲೂ ದಯೆಯನ್ನಿಟ್ಟು ಮನ್ನಿಸಬೇಕೆಂದು" ಬೇಡಲು, ಶ್ರೀಗಳವರು ಆ ಜ್ವರವನ್ನು ಪೋಷಿಸುವುದಕ್ಕಾಗಿ ಸ್ವಲ್ಪಕಾಲದಲ್ಲಿ ತನ್ನ ದೇಹವನ್ನೇ ಪ್ರವೇಶಿಸುವಂತೆ ಅಪ್ಪಣೆಕೊಟ್ಟರು. ಅದರಂತೆ ಜ್ವರವು ಅವರನ್ನು ಪ್ರವೇಶಿಸಲು, ಸ್ನಾನಪೂಜಾದಿವೇಳೆಯಲ್ಲಿ ಅದನ್ನು ತನ್ನ ದಂಡದಲ್ಲಿ ಆವಾಹಿಸಿ, ತಿರುಗಿ ತಾನು ತೆಗೆದುಕೊಳ್ಳುತ್ತಿದ್ದರು. ದಂಡದಲ್ಲಿ ಜ್ವರವು ಪ್ರವೇಶಿಸಿದಾಗ ದಂಡವು ತಾನಾಗಿ ಗಡಗಡನೆ ನಡುಗುತ್ತಿದ್ದಿತಂತೆ. ಈ ರೀತಿಯಾಗಿ ಸ್ವಲ್ಪಕಾಲ ಅದಕ್ಕೆ ಮರ್ಯಾದೆ ಕೊಟ್ಟು ಹಿಂದಕ್ಕಟ್ಟಿದರು.

ಉಡುಪಿಯಿಂದ ಒಂದುವರೆ ಮೈಲು ಪಶ್ಚಿಮದಲ್ಲಿರುವ ನಿಡಂಬೂರೆಂಬ ಗ್ರಾಮದ ಅಧಿಪತಿಗಳಾದ ಬಲ್ಲಾಳರೆಂದು ಪ್ರಸಿದ್ಧಿಗೊಂಡ ಬ್ರಾಹ್ಮಣೋತ್ತಮರು ಧನಿಕತ್ವಾಹಂಕಾರವನ್ನು ಬಿಟ್ಟು ಬಹುಕಾಲ ಸೇವಿಸಿದುದರಿಂದ ಶ್ರೀಗುರುರಾಜರು ಸಂತುಷ್ಟರಾಗಿ ಶ್ರೀಭೂವರಾಹದೇವರನ್ನು ಅವರಿಗೆ ಕೊಟ್ಟು, ಅವರ ಸ್ಥಳದಲ್ಲಿ ಋಜುಗಣ ಮಾಲಿಕಾಲಂಕೃತವಾದ ಕೆಳಗಡೆ ಶ್ರೀವಾದಿರಾಜ ಪ್ರತೀಕದಿಂದ ಕೂಡಿದ ಹನುಮದ್ಭೀಮ ಮಧ್ವಾತ್ಮ ಮೂರು ಅವತಾರದ ಶ್ರೀಮುಖ್ಯಪ್ರಾಣಶಿಲಾಪ್ರತಿಮೆಯನ್ನೂ ಪ್ರತಿಷ್ಠೆ ಮಾಡಿ, ನಿತ್ಯಪೂಜೆ ಮಾಡುವಂತೆ ಅವರಿಗೆ ಅನುಗ್ರಹಿಸಿದರು. ಅಂದಿನಿಂದ ಈ ವರೆಗೂ ಆ ವಂಶದ ಸದ್ಗೃಹಸ್ಥರು ಮಠೀಯ ಸಂಪ್ರದಾಯದಂತೆ ಪೂಜಾವಿನಿಯೋಗಗಳನ್ನು ನಡಿಸುತ್ತಲಿದ್ದಾರೆ. ಶ್ರೀವಾದಿರಾಜರ ಅನುಗ್ರಹದಿಂದ ಆ ಮನೆಯವರಿಗೆ ಮಠದವರ ಕಡೆಯಿಂದ ಉಚಿತ ಮರ್ಯಾದೆಗಳು ನಡಿಸಲ್ಪಡುತ್ತಿವೆ. ಇದರಂತೆ ಶ್ರೀವಾದಿರಾಜರು ಕೆಮ್ಮುಂಡೇಲು ಗ್ರಾಮದ ಸದ್ಗೃಹಸ್ಥರೊಬ್ಬರಿಗೂ ಶ್ರೀಲಕ್ಷ್ಮೀನಾರಾಯಣ ದೇವರನ್ನು ಕೊಟ್ಟು ಅನುಗ್ರಹಿಸಿರುತ್ತಾರೆ.

ಈ ಮಹಾ ಪುರುಷರಲ್ಲಿ ಎಂತಹ ವಿದ್ಯಾಪಾಂಡಿತ್ಯವಿದ್ದಿತೆಂಬುದು ಇವರು ರಚಿಸಿರುವ ಗ್ರಂಥಗಳಿಂದಲೇ ತಿಳಿದು ಬರುತ್ತದೆ. ಇವರ ಗ್ರಂಥಗಳೆಲ್ಲವೂ ಶ್ರೀಪರಮಾತ್ಮನ ಮಹಿಮೆಗಳನ್ನು ವರ್ಣಿಸತಕ್ಕವುಗಳಲ್ಲದೆ, ತುಚ್ಛ ವಿಷಯಗಳಿಂದ ಕೂಡಿದವುಗಳಲ್ಲ. ಇದರಿಂದ ಇವರು ಎಷ್ಟು

ವಿರಕ್ತರಾಗಿದ್ದರೆಂದು ಊಹಿಸಬಹುದಾಗಿದೆ. ಲಕ್ಷೋಪಲಕ್ಷ ಗ್ರಂಥಗಳಲ್ಲಿ ಒಂದೇಒಂದು ಗ್ರಂಥವಾದರೂ ಧನಾದಿ ದುರಭಿಲಾಷೆಯಿಂದ ಸಾಮಾನ್ಯ ರಾಜಾದಿಗಳನ್ನು ವರ್ಣಿಸತಕ್ಕದ್ದಿರುವುದಿಲ್ಲ. ಶ್ರೀಮಧ್ವಗ್ರಂಥಗಳಿಗೆ ಬೇರೆ ಬೇರೆ ಟೀಕಾಟಿಪ್ಪಣಿಗಳು ಬೇಕಾದಷ್ಟಿದ್ದರೂ, ಮುಖ್ಯ ತಾತ್ಪರ್ಯವನ್ನು ತಿಳಿಯಬೇಕಾದರೆ, ಅಥವಾ ನ್ಯಾಯವಾದ ಯುಕ್ತಿಯನ್ನು ಕಾಣಬೇಕಾದರೆ, ಶ್ರೀಮದ್ವಾದಿರಾಜರ ಟೀಕಾಟಿಪ್ಪಣಿಗಳನ್ನೇ ನೋಡಬೇಕು. ಇವರ ಯುಕ್ತಿಚಾತುರ್ಯವನ್ನು ನೋಡಬೇಕಾದರೆ **ಯುಕ್ತಿಮಲ್ಲಿಕಾ ಉಪನ್ಯಾಸರತ್ನಮಾಲಾ** ಗ್ರಂಥಗಳನ್ನು ನೋಡತಕ್ಕದ್ದು. ಸರಸವಾಕ್ಯ ಚಾತುರ್ಯವನ್ನು ನೋಡಬೇಕಾದರೆ **ಶ್ರೀರುಗ್ಮಿಣೀಶವಿಜಯ, ಸರಸ ಭಾರತೀವಿಲಾಸ** ಮೊದಲಾದ ಕಾವ್ಯಗಳನ್ನು ಗಮನಿಸಬೇಕು.

## ಶ್ರೀಮದ್ವಾದಿರಾಜರು ರಚಿಸಿರುವ ಗ್ರಂಥಗಳಲ್ಲಿ ಈಗ ದೊರೆತವು.

### ಸಂಸ್ಕೃತ ಗ್ರಂಥಗಳು.

೧. ಗುರುರಾಜೀಯ ಸುಧಾಟಿಪ್ಪಣೀ
೨. " ತತ್ವಪ್ರಕಾಶಿಕಾಟಿಪ್ಪಣೀ.
೩. " ಭಗವದ್ಗೀತಾಟಿಪ್ಪಣೀ.
೪. ಮಹಾಭಾರತ ಟಿಪ್ಪಣಿ (ಲಕ್ಷಾಲಂಕಾರ)
೫. ಮಹಾಭಾರತ ತಾತ್ಪರ್ಯ ನಿರ್ಣಯಟೀಕಾ.
೬. ತಂತ್ರಸಾರಟೀಕಾ.
೭. ಗುರ್ವರ್ಥದೀಪಿಕಾ.
೮. ಪ್ರಮೇಯಸಂಗ್ರಹ.
೯. ಯುಕ್ತಿಮಲ್ಲಿಕಾ.
೧೦. ರುಗ್ಮಿಣೀಶವಿಜಯ.
೧೧. ಸರಸ ಭಾರತೀವಿಲಾಸ.

೧೨. ತೀರ್ಥಪ್ರಬಂಧ.

೧೩. ಪಾಷಂಡ ಮತಖಂಡನ.

೧೪. ಏಕಾದಶೀನಿರ್ಣಯ.

೧೫. ಸಂಕಲ್ಪ ಪದ್ಧತಿ.

೧೬. ರೂಪ್ಯಪೀಠ ಕೃಷ್ಣಸ್ತುತಿಯೆ ಮೊದಲಾದ ೫೦ ಸ್ತೋತ್ರಗಳು ಈಗ ಸಿಕ್ಕಿರುತ್ತವೆ.

೧೭. ಭೂಗೋಳ.

೧೮. ಉಪನ್ಯಾಸ ರತ್ನಮಾಲಾ. ಇದರಲ್ಲಿ,

(ರು. ವಿ. ಕೃಷ್ಣಸ್ತುತಿರೂಪ ಗೋಪೀವಾಕ್ಯಾತ್ಮಕ ಶ್ಲೋಕ ೨ಕ್ಕೆ ೨ ಉಪನ್ಯಾಸಗಳು, ಪ್ರಮಾಣಪದ್ಧತಿಗೆ ೭ ಉಪನ್ಯಾಸಗಳು, ಮಾಯಾವಾದ ಖಂಡನಕ್ಕೆ ೧ ಉಪನ್ಯಾಸ ಒಟ್ಟಿಗೆ ೧೦ ಉಪನ್ಯಾಸಗಳು.)

ಇಷ್ಟೇ ಅಲ್ಲದೆ ಅಲ್ಲಲ್ಲಿ ಇನ್ನೂ ಅನೇಕ ಗ್ರಂಥಗಳಿವೆ.

## ಕನ್ನಡ ಗ್ರಂಥಗಳು.

೧. ಕನ್ನಡ ತಾತ್ಪರ್ಯ ನಿರ್ಣಯ.

೨. ವೈಕುಂಠವರ್ಣನೆ.

೩. ಗುಂಡಕ್ರಿಯೆಗಳು.

೪. ಸುಳಾದಿಗಳು.

೫. ಸಾವಿರಾರು ಕೀರ್ತನೆಗಳು.

೬. ಲಕ್ಷ್ಮೀಶೋಭನ.

೭. ಸ್ವಪ್ನಗದ್ಯ.

೮. ಭ್ರಮರಗೀತೆ. ಇತ್ಯಾದಿ,

ಒಟ್ಟಿಗೆ ಕನ್ನಡ ಭಾಷೆಯಲ್ಲಿ ಲಕ್ಷಗ್ರಂಥಗಳನ್ನು ರಚಿಸಿದ್ದಾರೆಂದು ಪ್ರಸಿದ್ಧಿಯಿದೆ.

ತುಳುಭಾಷೆಯಲ್ಲಿ ಕೂಡ ಹೊಲೆಯರ ಉಪಕಾರಕ್ಕಾಗಿ ದಶಾವತಾರ ಕಥೆಯಿಂದ ಕೂಡಿದ "ಪಾಡ್ದನ" ವೆಂಬ ಪದವನ್ನು ಮಾಡಿರುತ್ತಾರೆ.

ಒಂದು ಸಲ ಶ್ರೀಚಂದ್ರಿಕಾಚಾರ್ಯರೊಡನೆ ಶ್ರೀವಾದಿರಾಜರು ಸಂಚರಿಸುತ್ತಿರುವಾಗ ಸಿದ್ಧಾಪುರತಾಲೋಕಿನ ಬೇಗೆಯೆಂಬಲ್ಲಿ ತಮ್ಮ ಗ್ರಂಥಗಳನ್ನು ಸ್ಥಾಪಿಸಿ, ಶ್ರೀಲಕ್ಷ್ಮೀನಾರಾಯಣ ದೇವರನ್ನು ಪ್ರತಿಷ್ಠೆ ಮಾಡಿದರು. ಅಂದಿನಿಂದ ಈ ವರೆಗೂ ಆ ಸ್ಥಳದಲ್ಲಿ ಸೋದೇಮಠವಿದ್ದು ಮಠದ ಕಡೆಯಿಂದಲೇ ಅಲ್ಲಿನ ಪೂಜಾವಿನಿಯೋಗಾದಿಗಳು ನಡಿಸಲ್ಪಡುತ್ತಿವೆ.

॥ ಶ್ರೀತ್ರಿವಿಕ್ರಮಾಯ ನಮಃ ।

## ಏಳನೇ ಅಧ್ಯಾಯ.

ಉತ್ತರ ಕರ್ಣಾಟಕದೇಶದಲ್ಲಿ ಶಿರಸಿತಾಲೋಕಿನ ಹತ್ತಿರದಲ್ಲಿರುವ ಸೋದೆಯೆಂಬ ರಾಜ್ಯವನ್ನು ಒಬ್ಬ ಲಿಂಗಾಯತರಾಜನು ಆಳುತ್ತಿದ್ದನು. ಆತನಿಗೊಬ್ಬ ಗುರುವಿದ್ದನು. ಆ ಗುರುವು ಸಕಲವಿದ್ಯಾಪಾರಂಗತನಾಗಿ ಇಂದ್ರಜಾಲ ವಿದ್ಯೆಯಲ್ಲಿ ಅತ್ಯಂತ ನಿಪುಣನಿದ್ದುದರಿಂದ ಆಕಾಶಮಾರ್ಗವಾಗಿ ಕೈಲಾಸಕ್ಕೆ ಹೋಗಿ ಪಾರ್ವತೀಪರಮೇಶ್ವರರನ್ನು ಸಾಕ್ಷಾದ್ದರ್ಶನ ಮಾಡಿ ನಿತ್ಯದಲ್ಲಿಯೂ ಆರಾಧಿಸಿ ಬರುವನೆಂದು ಜನರಿಗೆ ಭ್ರಾಂತಿಯನ್ನುಂಟುಮಾಡಿದನು. ಇಂತಹ ಅಮಾನುಷವ್ಯಾಪಾರದಿಂದ ಜನರು ಈತನು ಸಾಕ್ಷಾತ್ ಶಿವಾವತಾರನೆಂದು ನಂಬಿ ಇವನ ಮಾತನ್ನು ತಪ್ಪದೆ ನಡಿಸುತ್ತಿದ್ದರು. ಇದರಿಂದ ಹಿಗ್ಗಿದ ಆ ಗುರುವು "ಬ್ರಾಹ್ಮಣರನ್ನೆಲ್ಲ ಲಿಂಗಾಯತರನ್ನು ಮಾಡಬೇಕೆಂದು ಪರಮೇಶ್ವರನ ಆಜ್ಞೆಯಾಗಿದೆ. ಈ ಬ್ರಾಹ್ಮಣರ ಕಡಿದ ಯಜ್ಞೋಪವೀತವು ಉಳೆ ಮಣವಾಗಬೇಕು. ಇಲ್ಲದಿದ್ದರೆ ಗೌರೀಶನ ಕೋಪಕ್ಕೆ ಪಾತ್ರರಾಗುವೆವು" ಎಂದು ಪ್ರೋತ್ಸಾಹಿಸಿ, ಸೋದಾರಾಜನ ಸಾಹಾಯದಿಂದ ಬ್ರಾಹ್ಮಣರನ್ನು ಬಲಾತ್ಕರಿಸಿದನು. ವಶರಾಗದವರನ್ನು ಆನೆಯಕಾಲಡಿ ತುಳಿಸುವುದು, ಶೂಲಕ್ಕೇರಿಸುವುದು, ಕಿವಿಮೂಗುಗಳನ್ನು ಕುಯಿಸುವುದು ಮೊದಲಾದ ಹಿಂಸೆಗಳನ್ನೇರ್ಪಡಿಸುತ್ತಿದ್ದನು. ಈ ದುರವಸ್ಥೆಯಿಂದ ಪಾರಗಾಣದೆ ಬ್ರಾಹ್ಮಣರು ಅನಾಥರಾಗಿ

ದೀನರಾಗಿ ಶ್ರೀಪಾದರಾಜರಲ್ಲಿ ತಮ್ಮ ಸಂಕಷ್ಟಗಳನ್ನು ಬಿನ್ನೈಸಿದರು. ಶ್ರೀಗಳವರು ಅವರನ್ನು ಸಂತೈಸಿ, ಕೂಡಲೆ ಸೋದಾನಗರಕ್ಕೆ ಪ್ರಯಾಣ ಮಾಡಿ, ನಗರದ ಹೊರಗೆಯಿರುವ ವನದಲ್ಲಿ ತಪಸ್ಸನ್ನಾಚರಿಸುತ್ತಿದ್ದರು. ಈಗ ಆ ಸ್ಥಳವು ಸೋದಾಮಠದಿಂದ ೨ ಮೈಲು ಉತ್ತರದಲ್ಲಿ ಶಾಲ್ಮಲೀ ನದೀ ತೀರದಲ್ಲಿ ತಪೋವನವೆಂದು ಪ್ರಸಿದ್ಧವಾಗಿದೆ.

ಆ ಸಮಯದಲ್ಲಿ ಸೋದಾರಾಜನ ಮೇಲೆ ಅಕಸ್ಮಾತ್ತಾಗಿ ಶತ್ರುರಾಜನು ದಂಡೆತ್ತಿ ಬಂದು ಯುದ್ಧವನ್ನು ಮಾಡಿದನು. ಉಭಯದಳದವರಿಗೂ ಘೋರಸಂಗ್ರಾಮವು ಸಂಘಟಿಸಿತು. ಸೈನ್ಯವೆಲ್ಲ ನಾಶಹೊಂದಲು ಸೋದಾರಾಜನು ಸೋತು, ಕುಟುಂಬಸಮೇತನಾಗಿ, ದಾರಿ ತಪ್ಪಿಸಿಕೊಂಡು, ಕಾಡುಪಾಲಾಗಿ ಓಡುತ್ತಿದ್ದನು. ದೈವಯೋಗದಿಂದ ಶ್ರೀಪಾದರಾಜರು ತಪಸ್ಸನ್ನು ಮಾಡುತ್ತಿರುವಲ್ಲಿಗೆ ಬಂದನು. ಅವರ ತಪಸ್ಸಿನ ತೇಜಸ್ಸುಕಾಣದೆ, ಬಳಿಯಲ್ಲಿ ಓಡುವ ರಾಜನ ಮೈಗೆ ಬೆಂಕಿಯು ಬಿಸಿ ತಗಲಿದಂತಾಗಲು, ಕೂಡಲೆ ರಾಜನು ಸುತ್ತಲೂ ನೋಡಿದನು. ವಿಶಾಲವಾದ ಶಿಲಾತಲದಲ್ಲಿ ದರ್ಭಾಸನದ ಮೇಲೆ ಪದ್ಮಾಸನದಿಂದ ಕುಳಿತು ಮೂಗಿನ ತುದಿಯಲ್ಲಿ ಕಣ್ಣುಗಳನ್ನು ಇಟ್ಟು, ಮುಖಕಾಂತಿಯಿಂದ ದಟ್ಟವಾಗಿ ಬೆಳೆದ ಮರಗಳಿಂದ ಹಗಲಲ್ಲಿಯೂ ಕತ್ತಲೆತುಂಬಿದ ಅಡವಿಯನ್ನು ಪ್ರಕಾಶಗೊಳಿಸುವ ತಾಪಸಶ್ರೇಷ್ಠರನ್ನು ಕಂಡನು. ಕಂಡು ಬೆರಗಾದನು. ಆಗ ಆತನ ಮನಸ್ಸು ಅವರನ್ನು ಮರೆಹೊಕ್ಕೆಂದು ಪ್ರೇರಿಸಿತು. ಬಲಗಣ್ಣು ಚಲಿಸುತ್ತ ಅದನ್ನು ಅನುಮೋದಿಸಿತು, ಈ ಮಹಾತ್ಮರಿಂದ ತನ್ನ ದುಃಖವು ನಾಶವಾದೀತೆಂದು ನಂಬಿ, ಅವರು ಧ್ಯಾನದಿಂದ ಏಳುವ ತನಕ ಕಾದಿದ್ದು, ಕಡೆಗೆ ದಂಡಪ್ರಣಾಮಮಾಡಿದನು. ಯತಿವರರು "ನೀನು ಯಾರು? ನಿನಗೇನಾಗಬೇಕು? ಎಂದು ಕೇಳಲು, ಅರಸನು ತನ್ನ ವಿಷಯವಾರ್ತೆಯನ್ನು ಅರುಹಿದನು. ಕೂಡಲೆ ಗುರುಗಳು "ಛೀ ಮೂರ್ಖ! ಬ್ರಾಹ್ಮಣದ್ರೋಹಿ! ಅನೇಕ ಬ್ರಹ್ಮಹತ್ಯೆಗಳನ್ನು ಮಾಡಿದ ಮಹಾ ಪಾತಕಿಯಾದ ನಿನಗೆ ದೇವರು ತಕ್ಕ ಫಲವನ್ನೀಗಲೆ ಕೊಟ್ಟಿರುತ್ತಾನೆ. ನಡಿ. ನಿನಗಿಲ್ಲಿ ಕೆಲಸವಿಲ್ಲ"ವೆಂದು ಪ್ರಲಯಕಾಲದ ರುದ್ರನಂತೆ ಆರ್ಭಟಿಸಿದರು.

ಅರಸನು ಹೆದರಿ ಮೂರ್ಛಿತನಾದನು. ಸ್ವಲ್ಪಕಾಲದ ಮೇಲೆ ಎದ್ದು "ಸ್ವಾಮಿನ್! ನಾನು ಮಹಾ ಪಾಪಿಷ್ಠನೆಂಬುದು ಸತ್ಯವು. ಆದರೆ, ಬ್ರಹ್ಮ ಹತ್ಯೆಯು ನನ್ನಿಂದಾದುದಲ್ಲ. ನನ್ನ ಗುರುವೇ ಅದಕ್ಕೆ ಕಾರಣನು. ಆತನ ಮಾತನ್ನು ವಿಚಾರಿಸದೆ ಮಾಡಿದ ತಪ್ಪನ್ನು ಒಮ್ಮೆಗೆ ಕ್ಷಮಿಸಿ ಕಾಪಾಡದಿದ್ದರೆ, ತಮ್ಮ ಪಾದದ ಬಳಿಯಲ್ಲಿಯೇ ಕುಟುಂಬ ಸಹಿತವಾಗಿ ಅನಶನ ವ್ರತದಿಂದ ಪ್ರಾಣವನ್ನರ್ಪಿಸುವೆನು. ಈ ಕಷ್ಟದಿಂದ ಪಾರಗಾಣಿಸಿದರೆ ಮುಂದೆ ತಮ್ಮ ದಾಸಾನುದಾಸನಾಗುವೆನು" ಎಂದು ಮೊರೆಯಿಟ್ಟನು. ಆಗ ಆತನ ಮತ್ತು ಆ ಕುಟುಂಬದ ಗೋಳನ್ನು ಕೇಳಿ ಶ್ರೀಗಳವರು ಕರುಣಾರ್ದ್ರಹೃದಯದಿಂದ- "ರಾಜನೇ ಇಗೋ! ಮಂತ್ರಾಕ್ಷತೆಯನ್ನು ಹಿಡಿದುಕೊಂಡು ನಿನ್ನ ರಾಜ್ಯವನ್ನು ಪ್ರವೇಶಿಸು, ನಿನ್ನ ಶತ್ರುವು ಪರಾಜಿತನಾಗಿ ಓಡುವನು. ರಾಜ್ಯವನ್ನು ಹೊಂದಿದೊಡನೆ ನನ್ನದೊಂದು ಮಾತನ್ನು ನಡಿಸು" ಎಂದು ಹೇಳಿ ಮಂತ್ರಾಕ್ಷತೆ ಕೊಟ್ಟರು. ಆಗಲಾ ರಾಜನು- "ಸ್ವಾಮಿ! ನಾನು ಏಕಾಂಗಿಯು, ಶತ್ರುವನ್ನು ಗೆಲುವ ಬಗೆ ಹೇಗೆ?" ಎನ್ನಲು ಯತಿಗಳು ನಮ್ಮ ಶ್ರೀಹಯವದನನೇ ನಿನಗೆ ಸಹಾಯಕ ನಿರುತ್ತಾನೆಂದು ಹೇಳಿದರು ರಾಜನಾವಮಾತನ್ನು ಶಿರಸಾ ವಹಿಸಿ, ರಾಜ್ಯಾಭಿಮುಖನಾಗಿ ಹೋಗುತ್ತಿರಲು, ಮುಂದುಗಡೆ ಚಕ್ರಶಂಖಾದಿಪಂಚಾಯುಧ ಧಾರಿಗಳಾದ ಸಾವಿರಾರು ಕುದುರೆಗಳು ಮನಸ್ಸನ್ನು ಸೂರೆಗೊಳ್ಳುವ ಚಮತ್ಕಾರದಿಂದ ಹೋಗುತ್ತಿರುವುದನ್ನು ಕಂಡು ಶ್ರೀಗಳವರ ಮಹಿಮೆಯನ್ನು ಮನಸ್ಸಿನಲ್ಲಿ ಕೊಂಡಾಡುತ್ತ ಪಟ್ಟಣಕ್ಕೆ ಸಾಗಿದನು. ಅಷ್ಟರಲ್ಲಿ ಈ ಕುದುರೆಗಳೇ ಶತ್ರುಪಡೆಯನ್ನು ನಿರ್ಮೂಲವಮಾಡಲು, ರಾಜನು ತನ್ನ ಸಿಂಹಾಸನವನ್ನೇರಿ, ಪತಾಕೆಯನ್ನೇರಿಸಿ, ಜಯಭೇರಿ ಹೊಡಿಸಿದನು. ಶತ್ರುರಾಜನು ಮರಳಿ ಕೂಡಲೆ ಸಂಭವಿಸಿದ ಸೈನ್ಯನಾಶದಿಂದ ಲಜ್ಜಾಖೇದಗಳಿಗೊಳಗಾಗಿ ಓಡಿಹೋದನು.

ಸೋದಾರಾಜನು ಕೂಡಲೆ ಚಿನ್ನದ ಪಲ್ಲಕಿ ಹೊರಿಸಿಕೊಂಡು ಶ್ರೀವಾದಿರಾಜರ ಸನ್ನಿಧಿಗೆ ಬಂದು, ನಮಿಸಿ, "ಮಹಾತ್ಮರೇ! ತಮ್ಮ ಕೃಪೆಯಿಂದ ದುಃಖಸಮುದ್ರವನ್ನು ದಾಟಿಬಂದೆನು. ನನ್ನ ರಾಜ್ಯಕ್ಕೆ ಚಿತ್ತೈಸಿ

ಅನುಗ್ರಹಿಸಬೇಕು” ಎಂದು ಬೇಡಲು, ಯತಿಗಳು ಪಲ್ಲಕಿಯೇರಿ, ಮಹಾವಿಭವದಿಂದ ರಾಜನರಮನೆಯನ್ನಲಂಕರಿಸಿದರು. ರಾಜನು ರಾಜೋಪಚಾರಗಳಿಂದ ಶ್ರೀಗುರುರಾಜರ ವಿರಾಜಿತ ಪಾದರಾಜೀವಗಳನ್ನು ಪೂಜಿಸಿ “ತಮ್ಮ ಆಜ್ಞೆಯನ್ನು ನಡಿಸಲು ಸನ್ನದ್ಧನಾಗಿರುವೆನು” ಎಂದು ಬಿನ್ನೈಸಲು ಶ್ರೀವಾದಿರಾಜರು “ರಾಜರಿಂದಲೂ ವಿದ್ವಜ್ಜನರಿಂದಲೂ ವಿರಾಜಿಸುವ ಸಭೆಯನ್ನು ಕೂಡಿಸಿ, ನಿನ್ನ ಗುರುವನ್ನು ಕರಿಸಬೇಕು. ಆತನೊಡನೆ ವಾದಮಾಡಬೇಕೆಂಬುದೇ ನನ್ನ ಕೋರಿಕೆ” ಎಂದರು. ಕೂಡಲೇ ಅವನು ಸಭೆಯನ್ನೇರ್ಪಡಿಸಿ, ಗುರುವಿನ ಬಳಿಗೆ ಸೇವಕರನ್ನಟ್ಟಿದನು. ಆ ಗುರುವು ಎಂದಿನಂತೆ ಕೈಲಾಸದಿಂದ ಬಂದೆನೆಂದು ತೋರಿಸಲು, ಆಕಾಶದಿಂದಿಳಿಯುವವನಂತೆ ನಟಿಸುತ್ತ ಬಂದನು. ಎಲ್ಲರೂ ತದೇಕದೃಷ್ಟಿಯಿಂದ ಈ ಕೌತುಕವನ್ನು ನೋಡುತ್ತಿದ್ದರು. ಶ್ರೀವಾದಿರಾಜರು ತಮ್ಮ ಮಂತ್ರಬಲದಿಂದ ಆತನ ಐಂದ್ರಜಾಲವನ್ನು ನಾಶಗೊಳಿಸಿದರು. ಆ ಗುರುವು ತಟ್ಟನೆ ಭೂಮಿಗೆ ಬಿದ್ದನು. ಇದೇಕೆ ಇಂತಹ ಅಪಮಾನವಾಯಿತೆಂದು ಆಶ್ಚರ್ಯವಶನಾದನು. ಅಕಸ್ಮಾತ್ತಾಗಿ ಇಷ್ಟರವರೆಗೆ ನಡೆಯದ ಸಭೆಯು ಕೂಡಿದುದನ್ನು ಕಂಡು ಚಕಿತನಾದನು. ಸುತ್ತಲೂ ನೋಡುತ್ತ ದಿವ್ಯ ತೇಜಸ್ವಿಗಳಾದ ತಪಸ್ವಿಗಳನ್ನು ಕಂಡನು. ಕೂಡಲೇ ಮೈ ಬೆವರಿತು. ಎದೆ ನಡುಗಿತು. ಮುಖವು ಕಳೆಗುಂದಿತು. ‘ಇಂದಿಗೆ ತನ್ನ ಕಪಟಕ್ಕೆ ತಿಲಾಂಜಲಿ, ಇಂದಿಗೆ ತನ್ನ ಪಾಪಸಮೂಹಕ್ಕೆ ಪ್ರಾಯಶ್ಚಿತ್ತವು.’ ಎಂದು ನಿರ್ಣಯಿಸಿ, ಇದ್ದಷ್ಟಿಗೆ ಧೈರ್ಯತಂದುಕೊಂಡು, ತನ್ನ ಮನೋವಿಕಾರವನ್ನು ಮುಚ್ಚಿಕೊಂಡು ಎಂದಿನಂತೆ ತನ್ನ ಆಸನವನ್ನಲಂಕರಿಸಿದನು. ಕೂಡಲೆ ರಾಜನು “ಈ ಮಹಾತ್ಮರು ನನ್ನ ಗುರುಗಳೊಡನೆ ವಾದಮಾಡಬೇಕೆಂದು ಕೋರಿದಂತೆ ಈ ಸಭೆಯನ್ನು ಕೂಡಿಸಿರುವೆನು. ನನ್ನ ಗುರುಗಳು ವಾದಕ್ಕೊಪ್ಪಿ, ತನ್ನ ಮರ್ಯಾದೆಯನ್ನು ಕಾಪಾಡಿಕೊಳ್ಳಲು ಸಿದ್ಧರಾದಾರೆಂದು ನಂಬುತ್ತೇನೆ” ಎಂದು ಹೇಳಿ ಸುಮ್ಮನಾದನು. ಆ ಮೇಲೆ ನಮ್ಮ ಕಥಾನಾಯಕರು ಸಭೆಯನ್ನು ಸಂಬೋಧಿಸಿ, “ನ್ಯಾಯಜ್ಞರಾದ ಅರಸರೇ! ವಿದ್ವನ್ಮಣಿಗಳೇ! ಈ ರಾಜಗುರುವು ನಮ್ಮ ಬ್ರಾಹ್ಮಣವರ್ಗಕ್ಕೆ ಎಂತಹ ಹಿಂಸಾಕಾರಿ

ಯೆಂಬುದನ್ನು ನೀವೆಲ್ಲರೂ ಅರಿತಿರುವಿರಿ. ಇಂದ್ರಜಾಲ ವಿದ್ಯೆಯಿಂದ ನಿಮ್ಮ ಮನಸ್ಸನ್ನು ಸೂರೆಮಾಡಿ ನಿಮ್ಮೆಲ್ಲರನ್ನೂ ಮೋಸಗೊಳಿಸಿರುವನೆಂದು ಇಂದಿನ ಅಧಃಪತನದಿಂದ ತಿಳಿಯುವಿರದು. ಇನ್ನು ಬ್ರಾಹ್ಮಣರನ್ನು ಲಿಂಗಾಯತಮತಕ್ಕೆ ಸೇರಿಸುವುದು ಪಾರ್ವತೀಪತಿಗೆ ಸಮ್ಮತವೋ ಅಲ್ಲವೋ ಎಂಬುದು ಪರೀಕ್ಷಿಸಬೇಕಾದ ವಿಷಯವು. ಇಂದಿನಿಂದ ನನಗೂ ಈತನಿಗೂ ೧೪ ದಿನಗಳ ವಾದವು ನಿಮ್ಮ ಸಮಾಧ್ಯಕ್ಷತೆಯಲ್ಲಿ ನಡೆಯತಕ್ಕದ್ದು. ಅದರಲ್ಲಿ ಮೊದಲನೆ ೭ ದಿನಗಳಲ್ಲಿ ಈತನು ವಾದಿಸಬೇಕು. ಕಡೆಯ ೭ ದಿನಗಳಲ್ಲಿ ನಾನು ವಾದಿಸುವೆನು. ೧೪ನೇ ದಿನ ನಾನು ಸೋತರೆ ಈತನ ಮತವನ್ನವಲಂಬಿಸುವೆನು. ಇವನು ಸೋತರೆ ಬ್ರಾಹ್ಮಣ ಸಂಘಕ್ಕೆ ಅಪಮಾನಿಸಿದ ಈತನಿಗೆ ವೇಶ್ಯಾಂಗನೆಯು ಎಡಗಾಲಿನಿಂದ ತುಳಿಸುವ ಪ್ರಾಯಶ್ಚಿತ್ತವು ಆಗತಕ್ಕದ್ದು" ಎಂದು ಅತಿಗಂಭೀರವಾದ ಧ್ವನಿಯಿಂದ ಆಜ್ಞಾಪಿಸಲು ಸರ್ವರೂ ಸಮ್ಮತಿಸಿದರು. ಆಗ ರಾಜಗುರುವಿನ ಎಡಗಣ್ಣು ಹಂದಾಡಿತು. ಸ್ವರವು ಕುಗ್ಗಿತು. ಅದರೂ ನಿರ್ವಾಹವಿಲ್ಲದೆ ವಾದಕ್ಕೆ ಕುಳಿತನು. ವೇದವೇದಾಂತಾದಿ ಸರ್ವಶಾಸ್ತ್ರಗಳಲ್ಲಿಯೂ ಸಂಗೀತಾದಿ ಚತುಷ್ಷಷ್ಟಿ ಕಲೆಗಳಲ್ಲಿಯೂ, ವಾದವು ನಡೆಯಿತು. ೧೪ನೇ ದಿನಗಳಲ್ಲಿ ರಾಜಗುರುವು ಪರಾಜಯವನ್ನು ಹೊಂದಿದನು. ಯತಿವರರು ಪ್ರತಿಜ್ಞೆಯಂತೆ ಅಪಮಾನವನ್ನು ಮಾಡಿಸಿದರು. ಆಗ ಆತನು ನಾಚಿಕೊಂಡು, ಓಡಿಹೋದನು. ಸೋದಾರಾಜನು ಶ್ರೀವಾದಿರಾಜರಿಗೆ ಶಿಷ್ಯನಾಗಿ, ಮುತ್ತಿನ ಸಿಂಹಾಸನ ಛತ್ರಚಾಮರ ಸ್ವರ್ಣಪಾದುಕಾ ಮುಕ್ತಾಕಿರೀಟ ಮೊದಲಾದ ೧೮ ಬಿರುದುಗಳನ್ನು ಅರ್ಪಿಸಿದನು. ತನ್ನ ಗುರುವಿನ ಬಸವನ ಘಂಟೆಯನ್ನು ಶ್ರೀಗಳವರ ಪೂಜೆಗೆ ಸಮರ್ಪಿಸಿದನು. ಈ ಕಥೆಯ ಜ್ಞಾಪನೆಗಾಗಿ ಅಂದಿನಿಂದ ಶ್ರೀವರಾಹಹಯಗ್ರೀವರ ಮಹಾಪೂಜಾದಿಗಳಿಗೆ ಆ ಘಂಟಾಮಣಿಯನ್ನು ಉಪಯೋಗಿಸುತ್ತಿದ್ದಾರೆ. ವೈಷ್ಣವಕ್ರಮಾನುಸಾರವಾಗಿ ಗರುಡಪ್ರಾಣ ಪ್ರತೀಕದ ಘಂಟೆಯು ಇರಬೇಕಾಗಿದ್ದರೂ, ಆ ಮಠದಲ್ಲಿ ಈ ಬಸವನ ಘಂಟೆಯೇ ಪೂಜೆಗೆ ಉಪಯೋಗಿಸಲ್ಪಡುತ್ತದೆ. "ಮಾಯಾವಾದಃ ಸ್ವೀಯಗುರೋರ್ವಾರಸ್ತ್ರೀಪಾದಕುಟ್ಟಿತಃ |

ಮಾನೇತರಂ ಕಾರಯಿತ್ವಾ ಗುರೋರ್ವರ್ಣನಮುದಾತ್ತಭುಃ ||" ಎಂಬ ಶ್ಲೋಕದಿಂದ ಈ ಕಥೆಯು ಸೂಚಿತವಾಗುತ್ತದೆ.

ಶ್ರೀಸೋದಾತ್ರಿವಿಕ್ರಮದೇವಾಲಯದ ದಕ್ಷಿಣಭಾಗದಲ್ಲಿ ತೇರು ಬೀದಿಯ ಬಯಿಯೊಳಗಿರುವ ಶಿಲಾಶಾಸನದ ಆಧಾರದಿಂದ ಈ ಸೋದಾ ರಾಜನು ವಿಜಯನಗರದ ರಾಜಾಧಿರಾಜ **ಶ್ರೀವೆಂಕಟಪತಿ**ಮಹಾರಾಜರ ಕೈಕೆಳಗೆ ಸಾಮಂತರಾಜನಾಗಿದ್ದ **ಅರಸಪ್ಪನಾಯಕ**ನೆಂದು ತಿಳಿದು ಬರುತ್ತದೆ.

ಈ ರಾಜನ ಮಗಳು ಗಂಡನು ಮರಣಪಟ್ಟಿರಲು, ಬಹಳದುಃಖದಿಂದ ಶ್ರೀಗುರುರಾಜರನ್ನು ಮರೆಹೊಕ್ಕಳು. ಕೂಡಲೆ ಶ್ರೀಗಳವರು ೧೦೮ ನಾರಾಯಣನಾಮವುಳ್ಳ ದಶಾವತಾರ ಕೀರ್ತನವನ್ನು ರಚಿಸಿ, ಶ್ರೀನಾರಾ ಯಣನನ್ನು ಸ್ತುತಿಸಿ, ಆತನನ್ನು ಬದುಕಿಸಿ, ಅರಸನಿಗೆ ಆನಂದವನ್ನುಂಟು ಮಾಡಿದರು.

ಸೋದಾರಾಜನು "ತನ್ನ ರಾಜ್ಯದಲ್ಲಿ ಉತ್ತಮವಾದ ದೇವಾಲಯ ವಿಲ್ಲದಕಾರಣ ದೇವಾಲಯಾದಿಗಳನ್ನೇರ್ಪಡಿಸಿ, ಈ ಸ್ಥಳವನ್ನು ಪವಿತ್ರೀ ಕರಿಸಬೇಕೆಂದು ಬೇಡಿಕೊಂಡನು. ಶ್ರೀಗಳವರು ಆತನ ಕೋರಿಕೆಯಂತೆ ಅಂದವಾದ ದೇವಾಲಯವನ್ನು ಕಟ್ಟಿಸುವಂತೆ ಅರಸನಿಗೆ ಅಪ್ಪಣೆಕೊಟ್ಟರು. ಆತನು ಕೂಡಲೆ ಅನೇಕ ಶಿಲ್ಪಿಗಳನ್ನು ಕರಿಸಿ, ದೇವಾಲಯವನ್ನು ಕಟ್ಟಿ ಸಿದನು. ಕಲ್ಲುಕುಟಿಗನು ದೇವಾಲಯದ ಮಹಡಿಗೆ ಒಂದು ದೊಡ್ಡ ಕಲ್ಲನ್ನು ನೂರಾರುಜನರಿಂದ ಮೇಲಕ್ಕೆತ್ತಿಸಿಡುವಾಗ ಆ ದೊಡ್ಡ ಶಿಲೆಯು ಕೆಳಗೆ ಬೀಳಲಿಕ್ಕಾಯಿತು. ಕೆಳಗೆ ಬಿದ್ದರೆ ನೂರಾರುಜನರ ಪ್ರಾಣವ್ಯಾ ನಾಶವಾದೀತು. ಇಂತಹ ಸಂಕಷ್ಟದಲ್ಲಿ ಶಿಲ್ಪಿಯು ಬೇರೆ ಉಪಾಯ ತೋರದೆ, ಆ ಕಲ್ಲಿಗೆ "ನೀನು ಕೆಳಗೆ ಬಿದ್ದರೆ ಶ್ರೀವಾದಿರಾಜರ ಆಣೆ ಯಿದೆ" ಎಂದು ಹೇಳಿದನು. ಕೂಡಲೆ ಆ ಶಿಲೆಯು ಅಲ್ಲಿಯೇ ನಿತ್ತಿತು. ಕಡೆಗೆ ಶ್ರೀಗಳವರು ಇದನ್ನು ತಿಳಿದು ಸುಲಭವಾಗಿ ತಾವೊಬ್ಬರೇ ಅದನ್ನು ಸರಿಯಾಗಿ ಕುಳ್ಳಿರಿಸಿದರು. ಆ ದೇವಾಲಯದ ಸಲುವಾಗಿ ಶಿಲ್ಪಿ ಗಳು ಒಂದು ದೊಡ್ಡ ಬಂಡೆಕಲ್ಲನ್ನು ಒಡೆಯಲಾರದೆ ಬಳಲುತ್ತಿರಲು,

ಶ್ರೀಗುರುರಾಜರು ತನ್ನ ಕಾಲಿನ ಅಂಗುಷ್ಠದಿಂದ ಮೆಟ್ಟಿ ಸರಿಯಾಗಿ ಒಡೆದುಬಿಟ್ಟರು. ಶ್ರೀಗಳವರ ಅನುಗ್ರಹದಿಂದ ಆ ದೇವಾಲಯವು ಪೂರ್ಣವಾಗಲು ಒಂದು ಸುಮುಹೂರ್ತವನ್ನು ಕಂಡು ಆ ಮುಹೂರ್ತಕ್ಕೆ ಸರಿಯಾಗಿ ಬದರೀಕ್ಷೇತ್ರದ ಸಮೀಪದಲ್ಲಿದ್ದ ರಥಾರೂಢ ಶ್ರೀತ್ರಿವಿಕ್ರಮದೇವರನ್ನು ರಥಸಮೇತವಾಗಿ ತರಲಿಕ್ಕೆ ಯತಿವರರು ಭೂತರಾಜರಿಗೆ ಆಜ್ಞೆ ಮಾಡಿದರು. ಭೂತರಾಜರು ಅಲ್ಲಿಗೆ ಹೋಗಿ, ಶ್ರೀದೇವರಿಂದೊಡಗೂಡಿದ ರಥವನ್ನೇ ಎತ್ತಿಕೊಂಡು ಬರುತ್ತಿರಲು, ಒಬ್ಬ ರಾಕ್ಷಸನು ಮುಂದೆ ಒಂದು ವಿಘ್ನವನ್ನು ಮಾಡಲಾರಂಭಿಸಿದನು. ಆಗ ಭೂತರಾಜರು ತಡಮಾಡಿದರೆ ಮುಹೂರ್ತವು ತಪ್ಪಿಹೋದೀತೆಂದು ತಟ್ಟನೆ ರಥದ ಒಂದು ಗಾಲಿ (ಚಕ್ರ) ಯನ್ನು ತೆಗೆದು, ಅದರಿಂದ ಆ ರಾಕ್ಷಸನನ್ನು ಕೊಂದು ಮುಹೂರ್ತವನ್ನು ಮೀರದೆ, ಶ್ರೀಗಳವರ ಸನ್ನಿಧಿಗೆ ಬಂದು ವಂದಿಸಿದರು.

ಶ್ರೀವಾದಿರಾಜರು ಶಾಲಿ. ಶ. ೧೫೦೪ನೇ ಚಿತ್ರಭಾನು ಸಂ|ದ ವೈಶಾಖ ಶು. ೧೫ಲ್ಲಿ ಮಹಾ ವೈಭವದಿಂದ ಶ್ರೀಮಧ್ವಾಚಾರ್ಯರು ಶ್ರೀಕೃಷ್ಣನನ್ನು ಪ್ರತಿಷ್ಠೆಮಾಡಿದಂತೆ ಭಕ್ತಜನರನ್ನುದ್ಧರಿಸುವುದಕ್ಕಾಗಿ ಶ್ರೀತ್ರಿವಿಕ್ರಮದೇವರನ್ನು ಪ್ರತಿಷ್ಠೆಮಾಡಿದರು. ಈ ಪ್ರತಿಷ್ಠಾದಿನವು ಅಲ್ಲಿನ ಶಿಲಾಶಾಸನದಲ್ಲಿ ಕಾಣುವುದು. ಅಲ್ಲಿಯೇ ಸ್ಥಳಾಂತರದಲ್ಲಿದ್ದ ಲಕ್ಷ್ಮೀದೇವಿಯು ಸ್ವಪ್ನದಲ್ಲಿ ತನ್ನನ್ನೂ ತನ್ನ ಪತಿಯ ಬಳಿಯಿರುವಂತೆ ಮಾಡಬೇಕೆಂದು ಸೂಚಿಸಿದುದರಿಂದ ತ್ರಿವಿಕ್ರಮನ ಎದುರು ದಕ್ಷಿಣಪಾರ್ಶ್ವದಲ್ಲಿ ಶ್ರೀಲಕ್ಷ್ಮೀದೇವಿಯನ್ನು ಪ್ರತಿಷ್ಠೆಮಾಡಿದರು. ಆ ದೇವಾಲಯದ ಉತ್ತರದಲ್ಲಿ ಶ್ರೀಮಧ್ವಸರೋವರದಂತೆ ಗಂಗಾಸನ್ನಿಧಾನದಿಂದ ಪವಿತ್ರವಾದ ಧವಲಗಂಗಾಯೆಂಬ ತೀರ್ಥದಿಂದ ಅಲಂಕೃತವಾದ ಸರೋವರವನ್ನು ನಿರ್ಮಿಸಿದರು. ಈ ದೇವಾಲಯಗಳ ನಿತ್ಯಪೂಜಾವಿನಿಯೋಗಕ್ಕೂ, ಪ್ರತಿವರ್ಷದ ರಥೋತ್ಸವಕ್ಕೂ ಆ ರಾಜನೂ ಅನೇಕ ದ್ರವ್ಯ ಹೊಲ ಮುಂತಾದ ಧರ್ಮಗಳನ್ನು ಬಿಟ್ಟನು. ಈ ವಿಷಯವು ಶಿಲಾಶಾಸನದಲ್ಲಿ ಸ್ಪಷ್ಟವಾಗಿ ಕಾಣುತ್ತದೆ. ಪ್ರತಿವರ್ಷ ಫಾಲ್ಗುನ ಶುದ್ಧ ನವಮಿಯಿಂದ ಪೂರ್ಣಿಮಾಪರ್ಯಂತ ರಥೋತ್ಸವವು ನಡೆದು ಮರುದಿನ ಅವಭೃಥಸ್ನಾನವಾ

ಜರಿಸಿ ಉತ್ಸವವನ್ನು ಪೂರ್ತಿಗೊಳಿಸುವಂತೆ ಶ್ರೀಗಳವರು ನಿಯಮಿಸಿದರು. ಈ ರೀತಿಯಾಗಿ ಆ ರಾಜನ ಇಷ್ಟವನ್ನು ಸಲಿಸಿ, ತಿರುಗಿ ಶ್ರೀರೂಪ್ಯಪೀಠ ಪುರಕ್ಕೆ ಬಂದು ಶ್ರೀಕೃಷ್ಣಸೇವೆಯನ್ನು ಮಾಡುತ್ತಿದ್ದರು.

॥ ಶ್ರೀಮುರಲೀಧರಾಯ ನಮಃ ॥

# ಎಂಟನೇ ಅಧ್ಯಾಯ.

ಶ್ರೀ ವಾದಿರಾಜತೀರ್ಥರ ಶಿಷ್ಯರಾದ **ಶ್ರೀವೇದವೇದ್ಯತೀರ್ಥರು** ಬಹಳವೃದ್ಧರಾಗಿ ತನಗೆ ಶ್ರೀಕೃಷ್ಣನ ಪರ್ಯಾಯಪೂಜೆ ದೊರಕದೆ ಚಿಕ್ಕ ಪಟ್ಟದಲ್ಲಿಯೇ ಅವಸಾನಕಾಲವು ಬರುವುದೆಂದು ಮನಸ್ಸಿನಲ್ಲಿ ನೊಂದುಕೊಂಡರು. ಸರ್ವಜ್ಞರಾದ ಶ್ರೀಗುರುರಾಜರು ಜ್ಞಾನದೃಷ್ಟಿಯಿಂದ ತನ್ನ ಭಕ್ತರಾದ ಶಿಷ್ಯಾಗ್ರೇಸರರ ಮನೋವ್ಯಥೆಯನ್ನು ತಿಳಿದು, ದಯೆಯಿಂದ ಶ್ರೀಕೃಷ್ಣನಿಗೆ ಪರ್ಯಾಯಪೂಜೆಯನ್ನು ಶ್ರೀವೇದವೇದ್ಯರೇ ನಡಿಸುವಂತೆ ಅಪ್ಪಣೆಕೊಟ್ಟು, ತಾನು ಶ್ರೀಸೋದಾಕ್ಷೇತ್ರದಲ್ಲಿ ತನ್ನ ಐದನೇ ಪರ್ಯಾಯಪೂಜೆ ಮಾಡಬೇಕೆಂದು ಆಲೋಚಿಸಿ, ಅಲ್ಲಿಗೆ ಪ್ರಯಾಣೋದ್ಯುಕ್ತರಾಗಿ, ಕಡೆಯ ಶ್ರೀಕೃಷ್ಣನ ದರ್ಶನವನ್ನು ಮಾಡುವಾಗ "ಮನ್ನಿಸೆನ್ನ ಮಧುಸೂದನ" ಎಂಬ ಕೀರ್ತನವನ್ನು ರಚಿಸಿದ್ದಾರೆ. ಈ ಕೀರ್ತನವು ಆ ಮಹನೀಯರಿಗೆ ಶ್ರೀಕೃಷ್ಣನಲ್ಲಿ ಎಂತಹ ಭಕ್ತಿಯಿದ್ದಿತೆಂಬುದನ್ನು ಪ್ರಕಟಿಸುತ್ತದೆ. ಭಕ್ತಿಮಯ ಕರುಣಾಮಯವಾದ ಆ ಪದವನ್ನು ಹಾಡುವಾಗ ಎಂತಹ ಕಲ್ಲೆದೆಯವನಾದರೂ ಮರುಗದಿರನು.

ಶ್ರೀವಾದಿರಾಜರು ಸೋದಾಕ್ಷೇತ್ರವನ್ನಲಂಕರಿಸಿ, ಮುರಲೀಧರ ಶ್ರೀಕೃಷ್ಣನನ್ನೂ, ಅನಂತೇಶ್ವರ ಚಂದ್ರೇಶ್ವರದೇವರನ್ನೂ, ಪ್ರತಿಷ್ಠೆ ಮಾಡಿ, ಮಹಾ ವಿಜೃಂಭಣೆಯಿಂದ ಶ್ರೀಕೃಷ್ಣಪರ್ಯಾಯ ಸೇವೆಯನ್ನು ಅಲ್ಲಿಯೇ ನಡಿಸಿದರು. ಪರದೇಶದ ಜನರೆಲ್ಲರೂ ಶ್ರೀಕೃಷ್ಣದರ್ಶನೆಗಾಗಿ ತಂತಮ್ಮ ದೇಶದಿಂದ ಹೊರಟಾಗ ಸ್ವಪ್ನದಲ್ಲಿ "ಶ್ರೀಕೃಷ್ಣನು ಸೋದಾ

ಕ್ಷೇತ್ರದಲ್ಲಿ ಪರ್ಯಾಯಪೂಜೆಯನ್ನು ಶ್ರೀವಾದಿರಾಜರಿಂದ ಸ್ವೀಕರಿಸುತ್ತಿದ್ದಾನೆಂದು" ಸೂಚಿತರಾಗಿ ಆ ಕ್ಷೇತ್ರಕ್ಕೆ ಪ್ರಯಾಣಮಾಡಿ, ಶ್ರೀತ್ರಿವಿಕ್ರಮಾದಿದೇವರ ಸೇವೆಯನ್ನು ಮಾಡಿ, ಶ್ರೀಗುರುವರರ ಅನುಗ್ರಹವನ್ನು ಸಂಪಾದಿಸಿ, ಬಹು ಸಂತೋಷದಿಂದ ಹಿಂದೆ ಹೋಗುತ್ತಿದ್ದರು. ಆ ದೇವಾಲಯದ ಹತ್ತಿರದಲ್ಲಿ ಆಕಾಶಗಂಗಾ, ಅಂತರಗಂಗಾ, ಅಮೃತಗಂಗಾ, ಪಾತಾಳಗಂಗಾ, ಈ ಮೊದಲೇ ನಿರ್ಮಿಸಿದ ಧವಳಗಂಗಾ ಎಂದು ಪಂಚಗಂಗಾತೀರ್ಥಗಳನ್ನು ನಿರ್ಮಿಸಿದರು.

"ಅಶ್ವತ್ಥಚೂತಪನಸಾಮ್ಲಸುನಾರಿಕೇಲಧಾತ್ರೀಕ್ಷುದಂಡಕದಳೀವನಮಧ್ಯಗಾ ಯಾ | ವೃಂದಾವನಾಷ್ಟಕಮಿನಾಕಿಜನೂಮತಾಂ ಚ ಮಧ್ಯೇ ಸ್ಥಿತಾ ತು ಧವಲೇತಿ ಸುವಿಖ್ಯಾತಾವಿಸ್ತಾ" ಎಂಬ ಶ್ಲೋಕದಲ್ಲಿ ಹೇಳಿದಂತೆ, ಅಶ್ವತ್ಥ, ಮಾವು, ಹಲಸು, ಹುಣಿಸೆ, ತೆಂಗು, ನೆಲ್ಲಿ, ಕಬ್ಬು, ಬಾಳೆ ಎಂದು ಧವಳಗಂಗೆಯ ಸುತ್ತಲೂ ಎಂಟು ವೃಕ್ಷಗಳನ್ನು ಸ್ಥಾಪಿಸಿದರು.

ಈ ರೀತಿಯಾಗಿ ಮುಂದಿನ ವಾಯುಪದವಿಗೆ ಯೋಗ್ಯರಾದ ಶ್ರೀವಾದಿರಾಜತೀರ್ಥಶ್ರೀಮಚ್ಚರಣರು ಶ್ರೀಮಧ್ವಾಚಾರ್ಯರಂತೆ ಅನೇಕಾದ್ಭುತ ವ್ಯಾಪಾರಗಳಿಂದ ತನ್ನ ಮಹಿಮೆಯನ್ನು ಜನರಿಗೆ ತೋರಿಸಿ, ವೇದಾಂತ ವಿದ್ಯಾರಾಜ್ಯ ಪರಿಪಾಲನದಲ್ಲಿ ಸಾರ್ವಭೌಮತ್ವನಿಸಿಕೊಂಡ ಶ್ರೀಮಧ್ವಾಚಾರ್ಯರ ಪಟ್ಟವನ್ನೇರಿದ ಯುವರಾಜರಂತೆ ಅತ್ಯದ್ಭುತ ಕಾರ್ಯಗಳಿಂದಲೂ, ಮತೋದ್ಧಾರ ಸರ್ವತೋಮುಖ ಪಾಂಡಿತ್ಯಗಳಿಂದಲೂ, ಭಕ್ತರ ಸರ್ವಾಭೀಷ್ಟಗಳನ್ನು ಕೊಡೋಣದರಿಂದಲೂ ತನ್ನ ಕೀರ್ತಿಯಿಂದ ಭರತಖಂಡವನ್ನೇ ಪ್ರಕಾಶಗೊಳಿಸಿದರು. ಇವರ ಮಹಿಮೆಗಳಿಗೆ ಪಾರವಿಲ್ಲ. ಈ ಮಹನೀಯರ ಭಕ್ತರು ಆ ಸೇತುಹಿಮಾಚಲದ ಪರ್ಯಂತವಾಗಿಯೂ ಇವರ ವಿಜಯಸ್ತಂಭಗಳಂತೆ ಮೆರೆದಾಡುತ್ತಿರುವುದೇ ಇದರ ಹೆಗ್ಗುರುತು.

ಶ್ರೀಪುಣ್ಯಶ್ಲೋಕರಾದ ಶ್ರೀಮದ್ವಾದಿರಾಜರು ಪ್ರತಿವರ್ಷವೂ ಅಧಿಕಾಧಿಕವಾಗಿ ೧೨ ವರ್ಷಗಳಲ್ಲಿ ಶ್ರೀತ್ರಿವಿಕ್ರಮನಿಗೆ ಉತ್ಸವವನ್ನು ನೆರವೇರಿಸಿ, ಅಲ್ಲಿನ ಅರಸನಿಗೆ ಪರಮಾನುಗ್ರಹವನ್ನು ಮಾಡಿ, ಪುತ್ರಿ

ವರ್ಷದಂತೆ ಶಾಲಿ. ಶ. ೧೫೯೩. ಕ್ರಿ. ಶ. 1600ನೇ ಶಾರ್ವರಿ ಸಂ|ದ ಫಾಲ್ಗುನ ಮಾಸದ ಶುಕ್ಲ ನವಮೀ ದಿನ ಅಂಕುರಾರೋಪಣ ಮಾಡಿಸಿ, ಮರುದಿನದಿಂದ ಚತುರ್ದಶೀ ವರೆಗೆ ಪುಷ್ಪರಥೋತ್ಸವವನ್ನೂ, ಪೂರ್ಣಿಮಾ ದಿನ ಮಹಾ ರಥೋತ್ಸವವನ್ನೂ, ನಡಿಸುತ್ತಿರುವಾಗ ತ್ರಿಲೋಕಾಧಿಪತಿಯಾದ ದೇವೇಂದ್ರನು ಶ್ರೀಗಳವರ ಇಷ್ಟದಂತೆ ದಿವ್ಯವಿಮಾನವನ್ನು ಕಳುಹಿಸಿದನು. ಆ ವಿಮಾನವನ್ನು ಹಯಗ್ರೀವ ಸಮುದ್ರದ ಬಳಿಯಲ್ಲಿರುವ ಅಶ್ವತ್ಥವೃಕ್ಷದಲ್ಲಿರುವಂತೆ ಆಜ್ಞಾಪಿಸಿ, ಶ್ರೀತ್ರಿವಿಕ್ರಮನಿಗೆ ಪ್ರತಿಪತ್ತಿಥಿಯಲ್ಲಿ ಶ್ರೀಭೂದೇವಿಯರ ಪ್ರಣಯಕಲಹ ಸಂವಾದ ವಿನೋದೋತ್ಸವವನ್ನು ನಡಿಸಿ, ಅವಭೃಥಸ್ನಾನಾನಂತರದಲ್ಲಿ ಉತ್ಸವವನ್ನು ಪೂರ್ತಿಗೊಳಿಸಿ. ಫಾಲ್ಗುನ ಕೃಷ್ಣದ್ವಿತೀಯಾ ತಿಥಿಯಲ್ಲಿ ಭಕ್ತರಿಗೆಲ್ಲ ಮಂತ್ರಾಕ್ಷತೆ ಕೊಟ್ಟು, ಮೊದಲೇ ಮಾಡಿಸಿದ ಪಂಚವೃಂದಾವನಗಳ ಮಧ್ಯದಲ್ಲಿರುವ "ವೃಂದಾವನದ ಒಳಗೆ ತಾನು ಕುಳಿತು, ಜಪಿಸುತ್ತಿರುವೆನು. ಕೈಯೊಳಗಿನ ಜಪಸರವು ಕೆಳಗೆ ಬಿದ್ದ ಕೂಡಲೆ ನನ್ನ ಸಂಮುಖಕ್ಕೆ ಕಲ್ಲು ಮುಚ್ಚಳವನ್ನು ಮುಚ್ಚಿಬಿಡಿರಿ" ಎಂದು ಅಪ್ಪಣೆಯಿತ್ತು ವೃಂದಾವನದೊಳಗೆ ಕುಳಿತು ಧ್ಯಾನತತ್ಪರರಾದರು. ಮರುದಿನ ಶಾಲಿ. ಶ. ೧೫೯೩ನೇ ಶಾರ್ವರಿ ಫಾಲ್ಗುನ ಕೃಷ್ಣಪಕ್ಷ ತೃತೀಯಾ ಬುಧವಾರ ಸ್ವಾತೀ ನಕ್ಷತ್ರದಲ್ಲಿ ಶ್ರೀಮಧ್ವಾಭಿಮತವಿಹಾರ ಋಜುಗಣಪ್ರಧಾನರಾದ **ಶ್ರೀಮದ್ವಾದಿರಾಜತೀರ್ಥ** ಪರಮ ಹಂಸ ಕುಲತಿಲಕರ ಹಸ್ತದಿಂದ ಜಪಸರವು ಕೆಳಗೆ ಬಿದ್ದಿತು. ಕೂಡಲೆ ವೃಂದಾವನದ ಮುಚ್ಚಳವನ್ನು ಆಜ್ಞೆಯಂತೆ ಜನರು ಮುಚ್ಚಿದರು.

ತತ್‌ಕ್ಷಣವೇ ಆಕಾಶದಲ್ಲಿ ಚಿಕ್ಕ ಘಂಟೆಗಳ ಸ್ವರವು ಕೇಳಿಸಿತು. ಎಲ್ಲರೂ ಮೇಲೆ ನೋಡಿದರು. ಕೋಟಿಸೂರ್ಯಪ್ರಕಾಶವಾದ ವಿಮಾನದಲ್ಲಿ ತೇಜೋಮೂರ್ತಿಗಳಾಗಿ ಗುರುವರೇಣ್ಯರು ಛತ್ರಚಾಮರಗಳಿಂದ ಸೇವಿತರಾಗಿ ಕುಳಿತಿದ್ದಾರೆ. ವಿಮಾನವು ಮೇಲಕ್ಕೇರುತ್ತಲಿದೆ.

ಎಲ್ಲರ ಹೃದಯವೂ ಗಡಗಡನೆ ನಡುಗಿತು. ಕಣ್ಣು ಕಾಣದಂತಾಯಿತು ಮನದಲ್ಲಿ ದಿಬ್ಬಮೊರಡದಾಯಿತು. ಆದರೂ ಕಷ್ಟದಿಂದ ಕೈ

ಯೆತ್ತಿ, "ಗುರುವರಾಧೀಶ್ವರ! ದೇವದೇವ! ಶ್ರೀಹಯವದನ ಪ್ರೇಮಾಮೃತಪಾತ್ರ! ಶ್ರೀಮಧ್ವಕುಲಾಂಬುಧಿ ಚಂದ್ರ! ಋಜುಗಣಪ್ರಧಾನ! ಭಾವಿಸಮೀರ! ಭಕ್ತಬಂಧೋ! ಕರುಣಾಸಿಂಧೋ! ಹಾಹಾ! ನಮ್ಮನ್ನು ಕೈಬಿಡುವಿರಾ! ನಮಗೇನು ಗತಿ?" ಎಂದೆಲ್ಲರೂ ಕೂಗಲಾರಂಭಿಸಿದರು.

ಶ್ರೀಗುರುವರರು ಸ್ವರ್ಣಪಾದುಕೆ, ಕಾಷ್ಠಪಾಟಿಗಳನ್ನು ಕೆಳಗೆ ಹಾಕಿ, "ಒಂದಂಶದಿಂದ ಈ ವೃಂದಾವನದಲ್ಲಿ ನೆಲಗೊಂಡು ಶ್ರೀಭೂತರಾಜನಿಂದ ಸೇವಿತನಾಗಿ ಸೇವಕರ ಸರ್ವಾಭೀಷ್ಟಗಳನ್ನು ಕೊಡುತ್ತಿರುವೆನು." ಎಂದು ಅಭಯಪ್ರದಾನಮಾಡಿದೊಡನೆ ವಿಮಾನವು ಮೇಲಕ್ಕೆ ಹಾರಿಬಿಟ್ಟಿತು.

ಜನರೆಲ್ಲರೂ ಸ್ವಲ್ಪ ಶೋಕಶೂನ್ಯಹೃದಯರಾಗಿ ವಿಮಾನವು ತೋರುವಷ್ಟು ದೂರ ಮೇಲೆನೋಡುತ್ತ ಕಡೆಗೆ ಪಾದುಕೆಗಳನ್ನೂ ಪಾಟಿಯನ್ನೂ ಶಿರಸಾ ವಹಿಸಿ, ಅದನ್ನೇ ವೃಂದಾವನದಲ್ಲಿಟ್ಟು ಪೂಜಿಸುತ್ತಿದ್ದರು.

ಶ್ರೀಮದ್ವಾದಿರಾಜಯತಿರಾಜರು ಒಟ್ಟಿಗೆ ೧೨೦ ವರ್ಷಗಳಲ್ಲಿ ಭಕ್ತರ ಅನುಗ್ರಹಕ್ಕಾಗಿ ಭೂಮಿಯಲ್ಲಿದ್ದರು. ವಿಮಾನಾರೋಹಣಾನಂತರದಲ್ಲಿಯೂ, ಒಂದಂಶದಿಂದ ಶ್ರೀವೃಂದಾವನಗತರಾಗಿ ಭಕ್ತರನ್ನುದ್ಧರಿಸುತ್ತಿದ್ದಾರೆಂಬುದಕ್ಕೆ ಅನೇಕ ಚರಿತ್ರೆಗಳಿವೆ. ಇವರ ಶಿಷ್ಯರಾದ ವೇದವೇದ್ಯತೀರ್ಥರು ಗುರುಗಳ ದರ್ಶನಸಂಭಾಷಣಗಳನ್ನು ಮರಳಿ ಬಯಸಿ ನಿರಂತರ ಸೇವೆಮಾಡುತ್ತಿರಲು, ಸ್ವಪ್ನದಲ್ಲಿ "ದರ್ಶನವೂ, ಸಂಭಾಷಣವೂ ಎರಡೂ ದೊರೆಯಲಾರದು. ಒಂದನ್ನು ಮಾತ್ರ ಬಯಸೆ"ಂದು ಸೂಚನೆಯಾಯಿತು. ಶ್ರೀವೇದವೇದ್ಯರು ದರ್ಶನಮಾತ್ರವನ್ನು ಕೋರಿ ಮರುದಿನ ವೃಂದಾವನದ ಸಂಮುಖಕ್ಕೆ ಬರಲು, ಭೂತರಾಜರು ಎದುರಿನ ಕಲ್ಲನ್ನು ತೆಗೆದೊಡನೆ ಧ್ಯಾನಪರರಾದ ಶ್ರೀಗುರುರಾಜರ ದಿವ್ಯತೇಜೋಮಯ ಮೂರ್ತಿಯ ಸಾಕ್ಷಾದ್ದರ್ಶನವನ್ನು ಒಂದು ಮುಹೂರ್ತಕಾಲದಲ್ಲಿ ಪಡೆದು ಪರಮಾನಂದವನ್ನು ಅನುಭವಿಸಿದರು. ಕಟ್ಟಕಡೆಗೆ ಒಂದು ಮಾತನ್ನಾದರೂ ಆಡಿಬಿಡಬೇಕೆಂದು ಆಲೋಚಿಸುತ್ತಿರಲು, ಕೂಡಲೆ ಕಲ್ಲು ಮುಚ್ಚಿಕೊಂಡಿತು. ಶ್ರೀವೇದವೇದ್ಯರ ಪರ್ಯಾಯಕಾಲದಲ್ಲಿ

ಶ್ರೀವೀರಪ್ರತಾಪ ವೆಂಕಟಪತಿರಾಯನ ಸಾಮಂತನಾದ ಇಕ್ಕೇರಿಯ ವೆಂಕಟಪ್ಪನಾಯಕನು ಹೂವಿನಕೆರೆ ಗ್ರಾಮವನ್ನು ಕ್ರಿ. ಶ. 1614ರಲ್ಲಿ ಶ್ರೀಕೃಷ್ಣದೇವರಿಗೆ ಉಂಬಳಿಬಿಟ್ಟನೆಂದು ಶ್ರೀಕೃಷ್ಣಮಠದ ಗೋಡೆಯ ಶಿಲಾಶಾಸನದಲ್ಲಿದೆ. ಇದರಿಂದ ಶ್ರೀವೇದವೇದ್ಯರು ಎರಡುಪರ್ಯಾಯ ಪೂಜೆಯನ್ನು ಮಾಡಿದರೆಂದೂ ಶ್ರೀವಾದಿರಾಜರು ಸೋದೆಯಲ್ಲಿ ತನ್ನ ಪರ್ಯಾಯದ ಮೇಲೆ ಎರಡು ವರ್ಷ ಇದ್ದರೆಂದೂ ಊಹಿಸಬಹುದಾಗಿದೆ.

ಶ್ರೀವೇದವೇದ್ಯರ ಪ್ರತಿಷ್ಯರಾದ **ಶ್ರೀವೇದನಿಧಿತೀರ್ಥರು** ಸೋದೆಯಲ್ಲಿ ತ್ರಿವಿಕ್ರಮದೇವರ ಮುಂದೆ ಶಿಲಾಸ್ತಂಭವನ್ನು ಪ್ರತಿಷ್ಠಿಸಬೇಕೆಂದು ಎಷ್ಟೆಷ್ಟು ಪ್ರಯತ್ನಿಸಿದರೂ ನಿಲ್ಲದಿರಲು, ಬಹಳ ವ್ಯಸನಾಕ್ರಾಂತರಾಗಿದ್ದರು. ಆ ದಿನರಾತ್ರಿ ಸ್ವಪ್ನದಲ್ಲಿ "ಹಂಸಾರೂಢವಾದ ನನ್ನ ಮೂರ್ತಿಯನ್ನು ಆ ಸ್ತಂಭದಲ್ಲಿ ಕೆತ್ತಿಸಿದರೆ ಆ ಸ್ತಂಭವು ನಿಲ್ಲುವುದೆ"ಂದು ಸೂಚನೆಯಾಗಲು, ಆ ಶ್ರೀಗಳವರು ಮರುದಿನ ಆ ಮೂರ್ತಿಯನ್ನು ಕೆತ್ತಿಸಿ ಸ್ತಂಭವನ್ನು ನಿಲ್ಲಿಸಲು ಘಟ್ಟಿಯಾಗಿ ನಿಂತಿತು. ಆ ಸ್ತಂಭವು ಈಗಲೂ ಅಲ್ಲಿರುತ್ತದೆ.

ಶ್ರೀವೇದನಿಧಿತೀರ್ಥರು ಶ್ರೀವಾದಿರಾಜರ ಮಹಿಮೆಯನ್ನು ತಿಳಿಯಬೇಕೆಂದು ಸೋದೆಯಲ್ಲಿ ಪಂಚವೃಂದಾವನಸ್ಥರಾದ ಶ್ರೀಗುರುರಾಜರನ್ನು ನಿರಂತರ ಸೇವಿಸುತ್ತಿರಲು, ಪ್ರತಿದಿನರಾತ್ರಿಯಲ್ಲಿ ಮಠದವರಲ್ಲಿ ಅತ್ಯಂತ ಸ್ತಬ್ಧನೂ ಮೂಕನೂ ಜಡಮೂಕನೂ ಆಗಿರುತ್ತಿದ್ದ ಬ್ರಾಹ್ಮಣನಿಗೆ ದಿನಕ್ಕೊಂದು ಅಧ್ಯಾಯದಂತೆ ತನ್ನ ಅದ್ಭುತಮಹಿಮೆಯನ್ನು ಶ್ರೀವಾದಿರಾಜರು ಬೋಧಿಸಿದರು. ಬೆಳಗಾದೊಡನೆ ಉಪದೇಶಿಸಲ್ಪಟ್ಟಿದ್ದನ್ನು ಶ್ರೀವೇದನಿಧಿಗಳ ಸನ್ನಿಧಿಯಲ್ಲಿ ಹೇಳಿ, ಆ ಬ್ರಾಹ್ಮಣನು ಮೂಕತ್ವವನ್ನನುಭವಿಸುತ್ತಿದ್ದನು. ಈ ಗ್ರಂಥವೇ **ಶ್ರೀಪಂಚವೃಂದಾವನಾಖ್ಯಾನ**ವೆಂದು ಪ್ರಸಿದ್ಧವಾಗಿದೆ. ಇದರಲ್ಲಿ ಶ್ರೀಗುರುರಾಜರ ಅನೇಕಾದ್ಭುತ ದಿವ್ಯಚರಿತೆಗಳು ವರ್ಣಿತಗಳಾಗಿವೆ. ಈದರ ಅರ್ಥವನ್ನು ಶ್ರೀವಾದಿರಾಜರ ಅನುಗ್ರಹಕ್ಕೆ ಪಾತ್ರರಾದವರು ಮಾತ್ರವೇ ತಿಳಿಯಲು ಶಕ್ತರಾಗುತ್ತಾರೆ. ಇದರಲ್ಲಿ ೨೨ ಅಧ್ಯಾಯಗಳಿವೆ. ಇದರ ಸಾರರೂಪವಾಗಿ ಶ್ರೀವೇದ

ಸಿದ್ಧತೀರ್ಥರು **ಅಣುವೃಂದಾವನಾಖ್ಯಾನ**ವೆಂಬ ಚಿಕ್ಕ ಗ್ರಂಥವನ್ನು ಸಂಗ್ರಹಿಸಿ, ವೃಂದಾವನದ ಒಂದು ಶಿಲೆಯಲ್ಲಿ ಕೆತ್ತಿಸಿದರು. ಆ ಶಿಲಾಲಿಪಿಯು ಈಗಲೂ ಅಲ್ಲಿರುತ್ತದೆ.

ಶ್ರೀಸೋದಾಕ್ಷೇತ್ರದಲ್ಲಿ ಪೂರ್ವಭಾಗದಲ್ಲಿ ಹಯಗ್ರೀವಸಮುದ್ರವೆಂಬ ಅತಿ ದೀರ್ಘವಾದ ಸರೋವರವು ಇದೆ. ಅದರ ಉತ್ತರಬದಿಯಿಂದ ಪಶ್ಚಿಮಕ್ಕೆ ಹೋಗುವದಾರಿಯಿಂದ ಮುಂದಕ್ಕೆಹೋದರೆ ಅಲ್ಲಿಯೇ ಉತ್ತರಪಾರ್ಶ್ವದಲ್ಲಿ ಅಶ್ವತ್ಥವೃಕ್ಷದ ಕಟ್ಟೆಯಿದೆ. ಅದರ ಮುಂದೆ ಪಶ್ಚಿಮದಲ್ಲಿ ಲಕ್ಷ್ಮೀದೇವಿಯ ಹೊದಲಿನ ಗುಡಿಯಿದೆ. ಹಾಗೆ ಸ್ವಲ್ಪ ಮುಂದೆ ಪಶ್ಚಿಮಕ್ಕೆ ಶ್ರೀತ್ರಿವಿಕ್ರಮದೇವಾಲಯದ ಧ್ವಜಸ್ತಂಭವು ಕಂಗೊಳಿಸುತ್ತದೆ. ಅದರ ಪಶ್ಚಿಮದಲ್ಲಿ ಮೂರು ಆವರಣಗಳಿಂದ ಸುಂದರವಾದ ಶ್ರೀತ್ರಿವಿಕ್ರಮದೇವಾಲಯವು ಶೋಭಿಸುತ್ತಲಿದೆ. ಅದರ ದಕ್ಷಿಣಪಾರ್ಶ್ವದ ತೇರುಬೀದಿಯಲ್ಲಿ ಅರಸಪ್ಪನಾಯಕರು ಸ್ಥಾಪಿಸಿದ ಶಿಲಾಶಾಸನವು ಶ್ರೀವಾದಿರಾಜರ ದೃಢವಾದ ಕೀರ್ತಿಯನ್ನು ಪ್ರಕಾಶಗೊಳಿಸುತ್ತದೆ. ಮೂರು ಗಾಲಿಗಳಿಂದ ಶೋಭಿಸುವ ರಥರೂಪವಾದ ಗರ್ಭಗೃಹದಲ್ಲಿ ಶ್ರೀತ್ರಿವಿಕ್ರಮಮೂರ್ತಿಯು ಭಕ್ತರ ಸರ್ವಾಭೀಷ್ಟಗಳನ್ನು ಸಲ್ಲಿಸಲು ಸನ್ನದ್ಧನಾಗಿರುತ್ತಾನೆ. ಆ ಗರ್ಭಗೃಹದ ಮಧ್ಯ ಮಂಟಪದ ದಕ್ಷಿಣಭಾಗದಲ್ಲಿ ಲಕ್ಷ್ಮೀದೇವಿಯು ಪತಿಯ ಕೃಪಾಕಟಾಕ್ಷಕ್ಕೆ ಗುರಿಯಾದವರಿಗೆ ಸರ್ವಸಂಪತ್ತುಗಳನ್ನು ಕೊಡಲು ಕುತೂಹಲ ಭರಿತಳಾದವಳಂತೆ ಕಂಗೊಳಿಸುತ್ತಾಳೆ. ಎರಡನೇ ಆವರಣದಲ್ಲಿ ಆಕಾಶಗಂಗೆಯು ಇದೆ. ಆ ದೇವಾಲಯದ ಹೊರಗೆ ಈಶಾನ್ಯದಲ್ಲಿ ಶ್ರೀಭೂತರಾಜರು ಕ್ಷೇತ್ರಪಾಲ ಸ್ಥಾನವನ್ನು ಅಲಂಕರಿಸಿರುತ್ತಾರೆ. ಈ ದೇವಾಲಯದ ಉತ್ತರದಲ್ಲಿ ಸುಮಾರು ೨೦ ಮೆಟ್ಟಲು ಇಳಿದರೆ ವಿಶಾಲವಾದ ರಾಜಾಂಗಣವಿದೆ. ರಾಜಾಂಗಣದ ಪಶ್ಚಿಮದಲ್ಲಿ ಶ್ರೀಸೋದೇಮಠವು ನಾಲ್ಕುಪೌಳಿಗಳಿಂದ ಕೂಡಿದ ಗರ್ಭಗೃಹದಿಂದ ಅಂದವಾಗಿದೆ. ಆ ಮಠದೊಳಗೆ ಈಶಾನ್ಯದಲ್ಲಿ ಅಂತರಗಂಗೆಯಿದೆ. ಆ ಪೌಳಿಯ ಪಡುವಲು ಬೇರೆ ನಾಲ್ಕು ಪೌಳಿಗಳಿವೆ. ಅದರ ಪಶ್ಚಿಮದಲ್ಲಿ ಅಮೃತಗಂಗೆಯು ಆನಂದಗೊಳಿಸುತ್ತದೆ. ಮಠದ

ಉತ್ತರದಲ್ಲಿ ಧವಲಗಂಗಾಸರೋವರವು ಕಮಲ ಕುಮುದಕಲ್ಹಾರಾದಿ ಪುಷ್ಪಗಳ ನಡುವೆ ಕ್ರೀಡಿಸುತ್ತಲಿರುವ ಹಂಸ ಚಕ್ರವಾಕಾದಿ ಪಕ್ಷಿಗಳ ಶಬ್ದಗಳಿಂದ ಮನೋಹರವೂ, ಶಿಲಾಸೋಪಾನಾವಳಿಗಳಿಂದ ಅಲಂಕೃತವೂ-ಆಗಿದ್ದು ದರ್ಶನಮಾತ್ರದಿಂದ ಮನಸ್ಸನ್ನು ನಿರ್ಮಲೀಕರಿಸುತ್ತದೆ. ಅದರ ದಕ್ಷಿಣದಡದಲ್ಲಿ ಚಂದ್ರೇಶ್ವರದೇವಾಲಯವೂ, ಅದರ ಬಳಿ ಶ್ರೀವಾದಿರಾಜರ ತಪಸ್ಥಿಲಾತಲವೂ, ಪಶ್ಚಿಮದಡದಲ್ಲಿ ಶ್ರೀಮುಖ್ಯಪ್ರಾಣಗುಡಿಯೂ, ವಾಯುವ್ಯೋತ್ತರದಲ್ಲಿ ಮುರಲೀಧರ ಶ್ರೀಕೃಷ್ಣದೇವಾಲಯವೂ, ಈಶಾನ್ಯದಡದಲ್ಲಿ ಅನಂತೇಶ್ವರಗುಡಿಯೂ, ಆ ಸರೋವರದ ಪೂರ್ವದಲ್ಲಿ ಶ್ರೀವಾದಿರಾಜಯತಿ ಸಾರ್ವಭೌಮರ ಪಂಚವೃಂದಾವನಗಳಿಂದ ಸುಂದರವಾದ ಮಠವೂ ಆ ಮಠದ ಗರ್ಭಗೃಹದೊಳಗೆ ಶ್ರೀಪಂಚವೃಂದಾವನಗಳೂ, ದಕ್ಷಿಣಪಶ್ಚಿಮೋತ್ತರಗಳಲ್ಲಿ ವೃಂದಾವನದರ್ಶನಕ್ಕೆ ಅನುಕೂಲವಾಗುವಂತಿರುವ ಕಿಟಿಕಿಗಳೂ, ಪೂರ್ವದಲ್ಲಿ ದ್ವಾರವೂ, ಪಶ್ಚಿಮದಲ್ಲಿ ಅಣುವೃಂದಾವನಾಖ್ಯಾನ ಶಿಲಾಲಿಖಿತವೂ, ವಾಯುವ್ಯದಲ್ಲಿ ಅಶ್ವತ್ಥನಾರಾಯಣ ದೇವರೂ, ದಕ್ಷಿಣದಲ್ಲಿ ಶ್ರೀವೇದವೇದ್ಯತೀರ್ಥರ ವೃಂದಾವನವೂ, ಅಲ್ಲಿಯೇ ಸಮೀಪದಲ್ಲಿ ಶ್ರೀಭೂತರಾಜರ ಸ್ಥಳವೂ, ಪಂಚವೃಂದಾವನದ ಹೊರಗೆ ಪೂರ್ವದಲ್ಲಿ ಶ್ರೀವೇದವ್ಯಾಸಗುಡಿಯೂ, ಅದರ ಪೂರ್ವದಲ್ಲಿ ಸೋದಾ ಮಠದ ಯತಿ ಪರಂಪರೆಯವರ ವೃಂದಾವನಗಳೂ ವಿರಾಜಿಸುತ್ತಿವೆ. ಈ ದೇವಾಲಯದ ಉತ್ತರ ೨ ಮೈಲು ದೂರದಲ್ಲಿ ಈ ಕ್ಷೇತ್ರಕ್ಕೆ ಮೂರು ಭಾಗಗಳಲ್ಲಿ ಪ್ರದಕ್ಷಿಣಾಕಾರವಾಗಿ ಪ್ರವಹಿಸುವ ಶಾಲ್ಮಲೀನದಿಯ ಉತ್ತರ ತೀರದಲ್ಲಿ ಶ್ರೀಮದ್ವಾದಿರಾಜರು ಅರಸನಿಗೆ ಅನುಗ್ರಹಿಸಿದ ಸ್ಥಳವಾದ ತಪೋವನವು ಇದೆ. ಶ್ರೀಪಂಚವೃಂದಾವನಗಳಲ್ಲಿ ಸಾಮಾನ್ಯವಾಗಿ ಸುತ್ತಲೂ ಬ್ರಹ್ಮದೇವರು, ಮುಖ್ಯಪ್ರಾಣದೇವರು, ಮಹಾವಿಷ್ಣುವು, ರುದ್ರದೇವರು, ಮಧ್ಯದಲ್ಲಿ ಶ್ರೀವಾದಿರಾಜರು ಈ ಬ್ರಹ್ಮಾದಿಗಳಲ್ಲಿ ಮಹಾವಿಷ್ಣುವು ನಿಯಾಮಕನಾಗಿಯೂ ಪ್ರತ್ಯೇಕವಾಗಿ ಆವಾಸ ಮಾಡುತ್ತಾರೆ. ಇನ್ನೊಂದು ಕ್ರಮದಲ್ಲಿ ಉಪವೃಂದಾವನಗಳಲ್ಲಿ ದಕ್ಷಿಣಪೂರ್ವದಲ್ಲಿ ಮತ್ಸ್ಯ ಕೂರ್ಮ ವರಾಹರೂ, ದಕ್ಷಿಣಪಶ್ಚಿಮದಲ್ಲಿ

ನರಸಿಂಹ ವಾಮನರೂ, ಉತ್ತರ ಪಶ್ಚಿಮದಲ್ಲಿ ಪರಶುರಾಮರಾಮರೂ, ಉತ್ತರ ಪೂರ್ವದಲ್ಲಿ ಕೃಷ್ಣ ಬುದ್ಧ ಕಲ್ಕಿ ಮೂರ್ತಿಗಳೂ ಅಲಂಕರಿಸಿರುತ್ತಾರೆ. ಈ ದೇವತೆಗಳನ್ನು ಧ್ಯಾನಿಸುತ್ತಾ ಮಧ್ಯವೃಂದಾವನದಲ್ಲಿ ಶ್ರೀವಾದಿರಾಜರೂ, ತದಂತರ್ಗತ ಶ್ರೀಹಯಗ್ರೀವ ಭೂವರಾಹ ದೇವರೂ ಸನ್ನಿಹಿತರಾಗಿರುತ್ತಾರೆ. ಭಕ್ತರಾದವರು ಈ ಪಂಚವೃಂದಾವನದಲ್ಲಿ ಈ ದೇವತೆಗಳನ್ನು ಧ್ಯಾನ ಮಾಡಿ ಸೇವಿಸಿದವರು ಪ್ರತ್ಯಕ್ಷವಾಗಿ ದುರ್ಲಭಗಳಾದ ಸಮಸ್ತ ಅಭೀಷ್ಟಗಳನ್ನೂ ಖಂಡಿತವಾಗಿ ಹೊಂದುತ್ತಾರೆ. ಈ ಪಂಚವೃಂದಾವನದ ಮಹಿಮೆಯನ್ನು ತಿಳಿಯಲಪೇಕ್ಷಿಸುವವರು ಶ್ರೀವೃಂದಾವನಾಖ್ಯಾನಸ್ತೋತ್ರವನ್ನಾದರೂ ನೋಡಿಕೊಳ್ಳತಕ್ಕದ್ದು.

ಶ್ರೀಗುರುರಾಜರ ಉಪಾಸನಮಾಡತಕ್ಕವರು ಶಾಲ್ಮಲೀ ನದೀಸ್ನಾನ, ಧವಳಗಂಗೆಯಲ್ಲಿ ತ್ರಿಕಾಲಸ್ನಾನ, ಶ್ರೀತ್ರಿವಿಕ್ರಮದರ್ಶನ, ವೃಂದಾವನಸೇವಾ, ವಾದಿರಾಜಕವಚಾದಿ ಪಾರಾಯಣ ಪುನಶ್ಚರಣಗಳನ್ನು ನಿತ್ಯದಲ್ಲಿ ಭಕ್ತಿಯಿಂದಾಚರಿಸಿ, ಸಕಲಾರಿಷ್ಟನಿವಾರಕವೂ, ಸಕಲಾಭೀಷ್ಟಸಾಧಕವೂ ಆಗಿರುವ ಶ್ರೀವೃಂದಾವನದ ಮೃತ್ತಿಕಾಲೇಪನ ತೀರ್ಥಪ್ರಾಶನ ಪ್ರಸಾದಸ್ವೀಕಾರ ಮಾಡಿ, ಅನೇಕಾನೇಕ ಜನರು ಅಸಾಧ್ಯರೋಗಗಳಿಂದಲೂ, ರಾಕ್ಷಸಪಿಶಾಚಾದ್ಯುಪಹತಿಗಳಿಂದಲೂ, ಮುಕ್ತರಾಗಿದ್ದಾರೆ. ಎಷ್ಟೋ ಸೇವಕರು ಸ್ವಪ್ನದಲ್ಲಿ ತಮ್ಮಿಷ್ಟಸೂಚನೆಯಾಗುವಂತಹ ಅನುಗ್ರಹಕ್ಕೆ ಪಾತ್ರರಾಗಿದ್ದಾರೆ. ಎಷ್ಟೋ ಸಂತಾನಾಭಿಲಾಷಿಗಳು ಸತ್ಸಂತಾನವನ್ನು ಪಡೆದಿರುತ್ತಾರೆ. ಅಭಕ್ತರಾದವರು ಸೇವೆಗೆಂದು ಬಂದು ಅನೇಕಾನರ್ಥಕ್ಕೆ ಗುರಿಯಾದವರೂ ಅನೇಕರಿರುತ್ತಾರೆ.

ಈ ಕ್ಷೇತ್ರದಲ್ಲಿ ಸಾಕ್ಷಾದ್ವಾದಿರಾಜರು ಬಂದುಂಟುಂಟಿದ್ದು ಭಕ್ತರನ್ನು ಅನುಗ್ರಹಿಸುವುದು ಮಾತ್ರವಲ್ಲದೆ, ಎಲ್ಲೆಲ್ಲಿಯೂ ತಮ್ಮ ಭಕ್ತರು ನಂಬಿದಲ್ಲೆಲ್ಲಾ ಸನ್ನಿಹಿತರಾಗಿ ಸಕಲ ಮನೋರಥಸಿದ್ಧಿಯನ್ನೂ ಸಾಧಿಸಿಕೊಡುತ್ತಾರೆ. ಶ್ರೀಭೂತರಾಜರೂ ವೃಂದಾವನ ಸನ್ನಿಧಾನದಲ್ಲಿ ವಾಸಮಾಡುತ್ತ ಭಕ್ತಜನರಿಗೆ ಇಷ್ಟಾರ್ಥಗಳನ್ನು ಕೊಡುವುದು ಮಾತ್ರವಲ್ಲದೆ,

ನಂಬಿದವರ ಬಳಿಯಲ್ಲಿಯೂ ಸನ್ನಿಹಿತರಾಗಿ ಅವರ ಕಾಮಿತಗಳನ್ನು ದಯ
ಪಾಲಿಸುತ್ತಾರೆಂಬುದು ಈಗಲೂ ಪ್ರತ್ಯಕ್ಷ ಸಿದ್ಧವಾಗಿದೆ. ಈಗಲೂ
ಈ ಮಹನೀಯರ ಪೀಠಾಧಿರೂಢರೂ, ನಂಬಿದ ಅನೇಕ ಭಕ್ತರೂ
ಶ್ರೀವಾದಿರಾಜಗುರುವರರ ಮತ್ತು ಶ್ರೀಭೂತರಾಜರ ಅನುಗ್ರಹದಿಂದ
ಶ್ರೀವೃಂದಾವನ ಮೃತ್ತಿಕಾಪಾತ್ರವನ್ನು ಕೊಟ್ಟಾಗಲೀ, ಶ್ರೀವಾದಿರಾಜ
ಕವಚಾದಿಗಳನ್ನು ಪಠನೆಮಾಡಿಯಾಗಲೀ, ಜನರ ಕಷ್ಟಗಳನ್ನು ಪರಿಹರಿಸಿ,
ಇಷ್ಟವನ್ನು ಸಾಧಿಸಿಕೊಡುತ್ತಾರೆ. ಶ್ರೀವಾದಿರಾಜರ ಮೃತ್ತಿಕಾಲಂಕೃ
ತವಾದ ವೃಂದಾವನವನ್ನು ಮಾಡಿಕೊಂಡು ತಂತಮ್ಮ ಸ್ಥಳಗಳಲ್ಲಿಯೇ
ಸೇವಿಸಿ ಭಕ್ತಜನರು ಇಷ್ಟವನ್ನು ಪಡಿಯುತ್ತಾರೆ.

ಶ್ರೀಗುರುರಾಜರ ಸಂಕಲ್ಪದಂತೆ ಪ್ರತಿವರ್ಷವೂ ಸೋದಾಕ್ಷೇತ್ರ
ದಲ್ಲಿ ಫಾಲ್ಗುನಮಾಸದಲ್ಲಾಗುವ ಉತ್ಸವಕ್ಕೆ ಆ ಮಠಾಧಿಪತಿಗಳಾದ
ಶ್ರೀಗಳವರು ಅಲ್ಲಿಗೆ ಹೋಗಿ, ಮಹಾಸಂಭ್ರಮದಿಂದ ಉತ್ಸವವನ್ನು ನೆರ
ವೇರಿಸುತ್ತಾರೆ. ಶ್ರೀವಾದಿರಾಜತೀರ್ಥರ ಪುಣ್ಯದಿನವಾದ ಫಾಲ್ಗುನ ಕೃಷ್ಣ
ತೃತೀಯಾ ತಿಥಿಯಲ್ಲಿ ಪೂಜಾನಂತರ ವೃಂದಾವನದ ಹತ್ತಿರ ಮುತ್ತಿನ
ಕಿರೀಟ ಚಿನ್ನದ ಚಾಮರ ಕಾಪಿರಾಟಿ ಸ್ವರ್ಣಪಾದುಕೆಗಳನ್ನಿಟ್ಟು ಗುರು
ಪೂಜೆ ಮಾಡಿ, ಲಿಂಗಾಯತ ಗುರುವಿಗೆ ನಡಿಸಿದ ಅಪಮಾನದ ಗುರುತಿ
ಗಾಗಿ, ಜಂಗಮರಿಂದ ಗೋಧಿಕಣಕ ಕುಟ್ಟಿಸುವ ಸಂಪ್ರದಾಯವಿದೆ.
ಆ ಪೀಠಾಧಿರೂಢರು ಎಲ್ಲಿದ್ದರೂ ಶ್ರೀಗುರುರಾಜರ ಪುಣ್ಯದಿನದಲ್ಲಿ ಶ್ರೀ
ಸ್ವರ್ಣಪಾದುಕೆಯ ಮುಂದುಗಡೆ ಈ ಕಣಕಕುಟ್ಟುವದು ನಡಿಯತಕ್ಕದ್ದು.

ಸ್ವಾಪ್ನವೃಂದಾವನಾಖ್ಯಾನವನ್ನು ಶ್ರೀವಾದಿರಾಜರಿಂದ ಕೇಳಿ ಶ್ರೀ
ವೇದನಿಧಿಗೆ ಹೇಳಿದ ಬ್ರಹ್ಮಣ್ಯೋತ್ತಮರೇ ಮುಂದೆ ಆ ಮಠದಲ್ಲಿ **ಶ್ರೀವಿ
ಶ್ವಪ್ರಿಯತೀರ್ಥ**ರೆಂದೂ, **ಶ್ರೀವೃಂದಾವನಾಚಾರ್ಯ**ರೆಂದೂ
ಪ್ರಖ್ಯಾತರಾಗಿ ಆ ಸೇತುಹಿಮಾಚಲದೊಳಗಿನ ತೀರ್ಥಕ್ಷೇತ್ರಗಳನ್ನು
ಸೇವಿಸಿ, ಅನೇಕ ಭಕ್ತರನ್ನುದ್ಧರಿಸಿ, ತನ್ನ ಶಾಸ್ತ್ರಪಾಂಡಿತ್ಯದಿಂದ
ದಿಗ್ದೇಶಗಳಲ್ಲಿ ಮೆರದಾಡಿ, ಮಹಾ ಕೀರ್ತಿಯನ್ನು ಸಂಪಾದಿಸಿರುತ್ತಾರೆ.
ಇವರು ಇಂದ್ರಾಂಶಸಂಭೂತರೆಂದು ಬಲ್ಲವರು ಹೇಳುತ್ತಾರೆ. ಶ್ರೀವಿಶ್ವ

ಪ್ರಿಯತೀರ್ಥರ ಕರಕಮಲಸಂಜಾತರು ಶ್ರೀವಿಶ್ವಾಧೀಶತೀರ್ಥರು. ಇವರು ಮಹಾಮಹಿಮರಾದ ಶ್ರೀಕೃಷ್ಣಾಪುರಮಠಾಧೀಶ ಶ್ರೀವಿದ್ಯಾಧೀಶತೀರ್ಥ ಯತಿವರರಲ್ಲಿ ವ್ಯಾಸಂಗ ಮಾಡಿ ಜಗದ್ವಿಖ್ಯಾತಪಂಡಿತಾಗ್ರೇಸರರೆನಿಸಿದರು. ಈ ಮಹನೀಯರ ಕರಕಮಲ ಸಂಜಾತರು ಶ್ರೀವಿಶ್ವೇಂದ್ರತೀರ್ಥ ಶ್ರೀಮಚ್ಚರಣವರರು ಆ ಪೀಠಾಧಿರೂಢರಾಗಿರುತ್ತಾರೆ. ಶ್ರೀವಿಶ್ವಾಧೀಶತೀರ್ಥರಲ್ಲಿ ವ್ಯಾಸಂಗ ಮಾಡಿ, ಶ್ರೀಮದದಮಾರುಮಠಾಧೀಶ್ವರರಾದ ಶ್ರೀವಿಬುಧಪ್ರಿಯತೀರ್ಥ ಶ್ರೀಪಾದವರೇಣ್ಯರು ಪಂಡಿತಾಗ್ರಗಣ್ಯರೆನಿಸಿಕೊಂಡು ಶ್ರೀರೂಪ್ಯಪೀಠಪುರಕ್ಕೆ ಅಲಂಕಾರ ಭೂತರಾಗಿರುತ್ತಾರೆ.

**ಶ್ರೀಗುರುವರವಾದಿರಾಜಮುನಿಪೂಜಿತ**
**ಹಯಗ್ರೀವಾರ್ಪಣಮಸ್ತು.**

ಸಮಾಪ್ತಿ.

ಲೇಖಕ:— ಬಿ. ಶ್ರೀನಿವಾಸಭಟ್ಟ,
ಸಾಹಿತ್ಯಶಿರೋಮಣಿ.

## ಶಿಲಾಶಾಸನದ ಆದ್ಯಂತ.

ಸ್ವಸ್ತಿ ಶ್ರೀಜಯಾಭ್ಯುದಯಶಾಲಿವಾಹನ ಶಕವರ್ಷ ೧೫೧೫ನೇ ವಿಜಯ ಸಂ|ರದ ಕಾರ್ತಿಕ ಶುದ್ಧ ೧೫ಲ್ಲಿ ಶ್ರೀಮದ್ರಾಜಾಧಿರಾಜ ಪರಮೇಶ್ವರ ಶ್ರೀವೀರಪ್ರತಾಪ ಶ್ರೀವೆಂಕಟಪತಿಮಹಾರಾಯರು ಸಮಸ್ತವನ್ನು ಸದ್ಧರ್ಮದಿಂದ ಪ್ರತಿಪಾಲಿಸುತ್ತಿದ್ದ ಸಮಯದಲ್ಲಿ ಅವರ ಆಜ್ಞಾಧಾರಕರಾದ ಸೋದೆಯ ಅರಸಪ್ಪನಾಯಕರು ಸೋದೆಯ ರಾಜ್ಯವನ್ನು ಸದ್ಧರ್ಮದಿಂ ಪ್ರತಿಪಾಲಿಸಿಕೊಂಡು ಬಹುಕಾಲದಲ್ಲಿ ಅವರ ಗುರುಗಳು ಶ್ರೀಮತ್ಪರಮ ಹಂಸ ಪರಿವ್ರಾಜಕಾಚಾರ್ಯ ಪದವಾಕ್ಯ ಪ್ರಮಾಣ ಶ್ರೀಮದ್ವೈಷ್ಣವಸಿದ್ಧಾಂತ ಪ್ರತಿಷ್ಠಾಪನಾಚಾರ್ಯರಾದ ಶ್ರೀಮದ್ವಾಗೀಶ ತೀರ್ಥ ಶ್ರೀಪಾದಒಡೆಯರ ಕರಕಮಲ ಸಂಜಾತರಾದ ಶ್ರೀಮದ್ವಾದಿರಾಜ

ತೀರ್ಥ ಶ್ರೀಪಾದಂಗಳವರು ತಮಗೆ ಪ್ರಸನ್ನರಾಗಿ ಕಾಶಿದೇಶದಿಂದ ಬಂದ ಶ್ರೀತ್ರಿವಿಕ್ರಮದೇವರಿಗೆ ದೇವಸ್ಥಾನವನ್ನು ಕಟ್ಟಿಸಿ, ಅಲ್ಲಿ ಸ್ವಾಮಿಯ ಪ್ರತಿಷ್ಠೆಯನ್ನು ಮಾಡಿ ಸುತ್ತ ಬ್ರಾಹ್ಮರ ಮನೆಯನ್ನು ಕಟ್ಟಿಸಿ ದೇವರ ಸೇವೆಗೆ ಶ್ರೀತ್ರಿವಿಕ್ರಮ ಪುರದಲ್ಲಿ ಇರಿಸಿ ದೇವರ ಅಮೃತಪಡಿನಂದಾದೀಪ್ತಿ ತ್ರಿಬಲಿ ಪಂಚಪರ್ವರಥೋತ್ಸವ ಅಂಗೋಪಾಂಗ ವೈಭವ ಮೊದಲಾದ ಸೇವೆಗಳು ಆ ಚಂದ್ರಾರ್ಕವಾಗಿ ನಡೆಯುವ ಅಷ್ಟಾಂಗದಲ್ಲಿ ಕಟ್ಟು ಮಾಡಿ ತಾವು ತಮ್ಮ ವಿದ್ಯಾಬಲದಿಂದ ಪಡಿಸಿದ ಗ್ರಾಮಸೀಮೆಗಳ ಶಿಲಾ ಶಾಸನ ಪೂರ್ವಕವಾಗಿ ಶ್ರೀತ್ರಿವಿಕ್ರಮದೇವರ ಚರಣಾರವಿಂದದಲ್ಲಿ ಧಾರಾಪೂರ್ವಕವಾಗಿ ಸಮರ್ಪಿಸಿದ ಶಿಲಾಶಾಸನದ ಕ್ರಮವೆಂತೆಂದರೆ...

.......................................................................

ಇಂತೀಗ್ರಾಮಗಳಿಗೆ ಪ್ರಾಕ್ಕು ಪ್ರಮಾಣಸಲ್ಲುವ ಚತುಸ್ಸೀಮೆ ಒಳಗುಳ್ಳ ಗದ್ದೆ ಮನೆ ತೋಟಗಳಿಗೆ ಸಲುಬಂದ ಅಷ್ಟಅಷ್ಟಭೋಗ ತೇಜಸ್ವಾಮ್ಯವನ್ನು ತಾವು ಪ್ರತಿಷ್ಠೆಮಾಡಿದ ಶ್ರೀತ್ರಿವಿಕ್ರಮದೇವರು ಲಕ್ಷ್ಮೀನಾರಾಯಣ ದೇವರು ಪುರದ ಹಯಗ್ರೀವದೇವರು ತಿರುಮಲ್ಲದೇವರು ಉತ್ಸವಮೂರ್ತಿ ಧವಳಗಂಗೆ ಹನುಮಂತದೇವರು ಚಿನ್ನದ ಬೃಂದಾವನ ಮೊದಲಾದ ದೇವರುಗಳ ಅಮೃತಪಡಿನಂದಾದೀಪ್ತಿ ನಿತ್ಯತ್ರಿಬಲಿ ಪಂಚಪರ್ವ ಕಾರ್ತಿಕ ಪೂಜೆ ರಥೋತ್ಸವ ಮೊದಲಾದ ಸೇವೆಗೆ ಅನುಕೂಲಮಾಡಿಕೊಂಡು ಆ ಚಂದ್ರಾರ್ಕವಾಗಿ ನಡೆಯುವಂತೆ ವಾದಿರಾಜತೀರ್ಥ ಶ್ರೀಪಾದಂಗಳ ವರು ತಮ್ಮ ಶಿಷ್ಯ ಪರಂಪರೆಯಾಗಿ ದೇವರ ಸೇವೆಯು ನಡಿಸಿಕೊಂಡು ಬರುದು. ಎಂದು ಕಟ್ಟುಮಾಡಿದ ಶಿಲಾಶಾಸನ......ಅರಸಪ್ಪನಾಯಕರು ತ್ರಿವಿಕ್ರಮದೇವರಿಗೆ ಕಾಲಂಪ್ರತಿಯಲ್ಲಿ ಕೊಡುವ ಕಾಣಿಕೆಗೆ ೧೫೦ವ ರಹ ಹಣವನ್ನು ರಥೋತ್ಸವ ಸೇವೆಗೆ ಸಮರ್ಪಿಸಿದರು. ಈ ಧರ್ಮಗ ಳನ್ನು (ಆ ಚಂದ್ರಾರ್ಕವಾಗಿ ವಾದಿರಾಜತೀರ್ಥ ಶ್ರೀಪಾದಂಗಳವರು ತಮ್ಮ ಶಿಷ್ಯ) ಪರಂಪರೆಯಾಗಿ ನಡಿಸುವುದು... ಶಾಲಿ. ಶ. ೧೫೧೦ ಚಿತ್ರಭಾನುಸಂ|ದ ವೈಶಾಖ ಶು. ೧೫ಯು ಬುಧವಾರದಲ್ಲು ಶ್ರೀತ್ರಿವಿಕ್ರಮದೇವರ ಪ್ರತಿಷ್ಠೆ ಮಾಡಿದ ಮುಹೂರ್ತ.